ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್: ಖಾಸಗಿ ಆಸ್ಪತ್ರೆ ನೋಡಲ್ ಅಧಿಕಾರಿಗಳ ಜೊತೆ ಸಮಾಲೋಚನೆ

ಶೇ 10 ಹಾಸಿಗೆ ಮೀಸಲಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮತ್ತೆ ಕೋವಿಡ್ ಸೋಂಕು ಹರಡುವಿಕೆ ಕ್ರಮೇಣ ಹೆಚ್ಚಾಗುತ್ತಿದೆ. ಹಾಗಾಗಿ, ಕೋವಿಡ್ ರೋಗಿಗಳ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳು ಮುಂದಿನ 7 ದಿನಗಳ ಕಾಲ ಶೇ 10 ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಸೂಚಿಸಿದರು.

ಕೋವಿಡ್ ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆಯುಕ್ತರು ಖಾಸಗಿ ಆಸ್ಪತ್ರೆಗಳ ನೋಡಲ್ ಅಧಿಕಾರಿಗಳ ಜೊತೆ ಬುಧವಾರ ವರ್ಚುವಲ್ ರೂಪದಲ್ಲಿ ಸಮಾಲೋಚನೆ ನಡೆಸಿದರು.

ಲಸಿಕೆ ಪಡೆಯುವುದರಿಂದ ಯಾವುದೇ ಅಡ್ಡ ಪರಿಣಾಮ ಉಂಟಾಗುವುದಿಲ್ಲ. 45 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ

ಎನ್.ಮಂಜುನಾಥ ಪ್ರಸಾದ್
ಬಿಬಿಎಂಪಿ ಆಯುಕ್ತ



'ನಗರದಲ್ಲಿ ಕೋವಿಡ್ ದೃಢಪಟ್ಟವರಲ್ಲಿ ಬಹುತೇಕರು ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗುತ್ತಿದ್ದಾರೆ. ಈ ಪೈಕಿ ರೋಗ ಲಕ್ಷಣ ಇರುವವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಲಭ್ಯ ಇವೆ. ಕೋವಿಡ್ ಸೋಂಕು ಮತ್ತಷ್ಟು ಹೆಚ್ಚಾದರೆ ಖಾಸಗಿ ಆಸ್ಪತ್ರೆಗಳ ಹಾಸಿಗೆಗಳ ಅಗತ್ಯ ಬೀಳಲಿದೆ. ಖಾಸಗಿ ಆಸ್ಪತ್ರೆಗಳೂ ಕೋವಿಡ್ ಚಿಕಿತ್ಸೆಗೆ ಮೀಸಲಿಡುವ ಹಾಸಿಗೆ ಸಾಮರ್ಥ್ಯವನ್ನು ಹಂತ ಹಂತವಾಗಿ ಹೆಚ್ಚಳ ಮಾಡಬೇಕಾಗುತ್ತದೆ' ಎಂದು ತಿಳಿಸಿದರು.

'2021ರ ಫೆಬ್ರುವರಿ ತಿಂಗಳ ಕೊನೆಯಿಂದ ಕೋವಿಡ್ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ. ಕೆಲವು ದಿನಗಳಿಂದ ನಿತ್ಯ 1,500ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಸೋಂಕು ಕಾಣಿಸಿಕೊಂಡವರಲ್ಲಿ 22ವರ್ಷಗಳಿಂದ 40 ವರ್ಷಗಳ ಒಳಗಿನವರಲ್ಲೇ ಹೆಚ್ಚು. ಹಿರಿಯ ವಯಸ್ಕರಲ್ಲಿ ಸೋಂಕು ಅಷ್ಟಾಗಿ ಪತ್ತೆಯಾಗುತ್ತಿಲ್ಲ. ನಗರದಲ್ಲಿ ಕೋವಿಡ್‌ನಿಂದ ಉಂಟಾಗುವ ಸಾವಿನ ದರ ಕಡಿಮೆ ಇದೆ. ಇದು ಶೇ 0.5ಕ್ಕಿಂತ ಮೀರಿಲ್ಲ' ಎಂದು ವಿವರಿಸಿದರು.

ಹಾಸಿಗೆಗಳ ವಿವರ ಪ್ರದರ್ಶಿಸಿ: 'ಕೊರೊನಾ ಸೋಂಕಿತರು ಚಿಕಿತ್ಸೆಗೆ ದಾಖಲಾಗಲು ಆಸ್ಪತ್ರೆಗೆ ಬಂದರೆ, ಆಮ್ಲಜನಕ ಪೂರೈಕೆ ವ್ಯವಸ್ಥೆ ಇಲ್ಲ ಎಂಬ ನೆಪವೊಡ್ಡಿ ಬೇರೆ ಆಸ್ಪತ್ರೆಗೆ ತೆರಳುವಂತೆ ಸೂಚಿಸಬೇಡಿ. ಅವರನ್ನು ತಕ್ಷಣವೇ ದಾಖಲಿಸಿಕೊಂಡು ಚಿಕಿತ್ಸೆ ನೀಡಿ. ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಎಷ್ಟು ಹಾಸಿಗೆಗಳು ಲಭ್ಯ, ಅವುಗಳಲ್ಲಿ ಎಷ್ಟು ಹಾಸಿಗೆಗಳು ಭರ್ತಿಯಾಗಿವೆ, ಯಾವೆಲ್ಲ ಹಾಸಿಗೆಗಳು ಖಾಲಿ ಇವೆ ಎಂಬ ಸಂಪೂರ್ಣ ಮಾಹಿತಿಯನ್ನು ಎಲ್ಲಾ ಆಸ್ಪತ್ರೆಗಳ ಮುಂಭಾಗದ ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು. ಆಸ್ಪತ್ರೆಗೆ ದಾಖಲಾಗಲು ಬಂದ ವ್ಯಕ್ತಿಗೆ ಸುಲಭವಾಗಿ ಈ ಮಾಹಿತಿ ಲಭ್ಯವಾಗಬೇಕು' ಎಂದು ಸೂಚನೆ ನೀಡಿದರು.

'ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಪ್ರತ್ಯೇಕ ಬ್ಲಾಕ್‌ಗಳನ್ನು ಹೊಂದಿರಬೇಕು. ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡಲು ಪ್ರತ್ಯೇಕ ವೈದ್ಯರು, ಸಿಬ್ಬಂದಿಯನ್ನು ನಿಯೋಜಿಸಬೇಕು. ಕೋವಿಡ್ ಹಾಗೂ ಅನ್ಯ ಖಾಯಿಲೆಗಳಿಗೆ ಚಿಕಿತ್ಸೆ ನೀಡಲು ಒಂದೇ ಸಿಬ್ಬಂದಿಯನ್ನು ನಿಯೋಜನೆ ಮಾಡಬಾರದು' ಎಂದು ಸ್ಪಷ್ಟಪಡಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ವಿಜಯೇಂದ್ರ ಅವರು ಸಲಹೆ ನೀಡಿದರು.

'ಬಿಬಿಎಂಪಿಗೆ ಮತ್ತೆ 4 ಲಕ್ಷ ಲಸಿಕೆ'

'ನಗರದಲ್ಲಿ ಕೋವಿಡ್ ಲಸಿಕೆಯ ಕೊರತೆಯಿಲ್ಲ. ನಗರದಲ್ಲಿ ಬೇಡಿಕೆಗೆ ತಕ್ಕಷ್ಟು ಲಸಿಕೆಗಳು ಲಭ್ಯ ಇವೆ. ಸದ್ಯ 1.50 ಲಕ್ಷ ಲಸಿಕೆಗಳ ಸಂಗ್ರಹ ಇದೆ. ಗುರುವಾರ ಮತ್ತೆ 4 ಲಕ್ಷ ಲಸಿಕೆಗಳು ಬಿಬಿಎಂಪಿ ಕೈಸೇರಲಿವೆ' ಎಂದು ಆಯುಕ್ತರು ತಿಳಿಸಿದರು.

'ಲಸಿಕೆ ನೀಡಲು ಹೆಚ್ಚು ಸೆಷನ್‌ಗಳನ್ನು ನಡೆಸುವ ಆಸ್ಪತ್ರೆಗಳಿಗೆ ಅವಶ್ಯಕ ಪ್ರಮಾಣದಲ್ಲಿ ಲಸಿಕೆಗಳನ್ನು ಪೂರೈಸಲಾಗುವುದು. ನಗರದಲ್ಲಿ ಇದುವರೆಗೆ 7 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ' ಎಂದರು.

'ಲಸಿಕೆ ಪಡೆಯುವ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಬೇಕು. ಜನಗಣತಿ ಪ್ರಕಾರ, 60 ವರ್ಷ ಮೇಲ್ಪಟ್ಟ 10 ಲಕ್ಷ ಮಂದಿ ಹಾಗೂ 45 ವರ್ಷಕ್ಕೆ ಮೇಲ್ಪಟ್ಟ 25 ಲಕ್ಷ ಮಂದಿ ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಲೆಸಿದ್ದಾರೆ. ಇಷ್ಟು ಮಂದಿಗೆ ಲಸಿಕೆ ನೀಡಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು' ಎಂದು ಆಯುಕ್ತರು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಲಸಿಕೆ ನೀಡಲು ಸಕಲ ಸಿದ್ಧತೆ'

ಕೋವಿಡ್ ಲಸಿಕೆಯನ್ನು 45 ವರ್ಷ ಮೇಲ್ಪಟ್ಟ ಎಲ್ಲರಿಗೂ ನೀಡುವ ಪ್ರಕ್ರಿಯೆ ಗುರುವಾರದಿಂದ ಜಾರಿಯಾಗಲಿದೆ. ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳು ಸೇರಿ 525 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡುವ ವ್ಯವಸ್ಥೆ ಮಾಡಲಾಗಿದೆ. ನಿತ್ಯ 85 ಸಾವಿರಕ್ಕೂ ಹೆಚ್ಚು ಮಂದಿಗೆ ಕೋವಿಡ್ ಲಸಿಕೆ ನೀಡಲಾಗುತ್ತದೆ ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

'ಅವಶ್ಯಕ ಪ್ರಮಾಣದಲ್ಲಿ ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಂಡು ವ್ಯವಸ್ಥಿತವಾಗಿ ಲಸಿಕೆ ನೀಡಲು ಕ್ರಮವಹಿಸಬೇಕು. ಇನ್ನಷ್ಟು ಹೆಚ್ಚು ಮಂದಿಗೆ ಲಸಿಕೆ ನೀಡುವಂತೆ ವ್ಯವಸ್ಥೆ ಕಲ್ಪಿಸಬೇಕು' ಎಂದು ಆಯುಕ್ತರು ಸೂಚನೆ ನೀಡಿದರು.

ಬಿಬಿಎಂಪಿ: ಶೇ 2ರಷ್ಟು ನಗರ ಭೂಸಾರಿಗೆ ಉಪಕರ ಈ ವರ್ಷದಿಂದ ಜಾರಿ

ಈ ಬಾರಿ ಆಸ್ತಿ ತೆರಿಗೆ ತುಸು ದುಬಾರಿ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ನಿವಾಸಿಗಳಿಗೆ 2021–22ನೇ ಸಾಲಿನಲ್ಲಿ ಆಸ್ತಿ ತೆರಿಗೆ ತುಸು ದುಬಾರಿ ಆಗಲಿದೆ. ಈ ಆರ್ಥಿಕ ವರ್ಷದಿಂದ ಆಸ್ತಿ ತೆರಿಗೆ ಮೇಲೆ ಶೇ 2ರಷ್ಟು ನಗರ ಭೂಸಾರಿಗೆ ಉಪಕರವನ್ನು ಸೇರಿಸಿ ಪಾವತಿಸಬೇಕಾಗುತ್ತದೆ.

ಪ್ರಜಾವಾಣಿ ವಿಶೇಷ

ಇದುವರೆಗೆ ಆಸ್ತಿ ತೆರಿಗೆ ಮೇಲೆ ಶೇ 24ರಷ್ಟು ಉಪಕರವನ್ನು ಸಂಗ್ರಹಿಸಲಾಗುತ್ತಿದೆ. ಈ ಆರ್ಥಿಕ ವರ್ಷದಿಂದ ಉಪಕರದ ಪ್ರಮಾಣ ಶೇ 26ಕ್ಕೆ ಹೆಚ್ಚಳವಾಗಲಿದೆ.

2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 143ರ ಅಡಿ ಆಸ್ತಿ ತೆರಿಗೆ ಮೇಲೆ ಶೇ 2ರಷ್ಟು ನಗರ ಭೂಸಾರಿಗೆ ಉಪಕರ ಸಂಗ್ರಹಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. 2021–22ನೇ ಸಾಲಿನಲ್ಲಿ ಆಸ್ತಿ ತೆರಿಗೆ ಜೊತೆ ಶೇ 2ರಷ್ಟು ನಗರ ಭೂಸಾರಿಗೆ ಉಪಕರವನ್ನು ಸೇರಿಸಿ ಸಂಗ್ರಹಿಸುವ ಬಗ್ಗೆ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಸೋಮವಾರ (ಮಾ 29ರಂದು) ಸುತ್ತೋಲೆ ಹೊರಡಿಸಿದ್ದಾರೆ.

1976ರ ಕೆಎಂಸಿ ಕಾಯ್ದೆ ಅಡಿಯೂ ಆಸ್ತಿ ತೆರಿಗೆ ಜೊತೆ ನಗರ ಭೂಸಾರಿಗೆ ಉಪಕರವನ್ನು ಸಂಗ್ರಹಿಸಲು ಅವಕಾಶವಿತ್ತು.

2ನೇ ಪುಟ ನೋಡಿ

₹ 2,837 ಕೋಟಿ ತೆರಿಗೆ ಸಂಗ್ರಹ

ಬಿಬಿಎಂಪಿಯು 2020–21ನೇ ಸಾಲಿನಲ್ಲಿ ಒಟ್ಟು ₹ 2,837 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದೆ. ಆರ್ಥಿಕ ವರ್ಷದ ಕೊನೇ ದಿನವಾದ ಬುಧವಾರ ₹ 27 ಕೋಟಿಗೂ ಅಧಿಕ ತೆರಿಗೆ ಸಂಗ್ರಹವಾಗಿದೆ.

'ಬುಧವಾದವರೆಗೆ ಒಟ್ಟು ₹ 2,837 ಕೋಟಿ ತೆರಿಗೆ ಸಂಗ್ರಹವಾಗಿದೆ. ಇದರಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಭಾಗಶಃ ಪಾವತಿಯಾಗಿರುವ ₹ 60 ಕೋಟಿ ಹಾಗೂ ಚಲನ್ ಮತ್ತು ಆನ್‌ಲೈನ್ ಮೂಲಕ ಪಾವತಿಯಾಗಿರುವ ₹ 2777.44 ಕೋಟಿ ಆಸ್ತಿ ತೆರಿಗೆಯೂ ಸೇರಿದೆ. ಇನ್ನೂ 8613 ಚಲನ್‌ಗಳನ್ನು ಆಸ್ತಿ ಮಾಲೀಕರು ಪಾವತಿಸಿದ್ದು, ಇದರಿಂದ ₹ 57.37 ಕೋಟಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'2020–21ನ ಸಾಲಿನ ತೆರಿಗೆ ಬಾಕಿ ಉಳಿಸಿಕೊಂಡವರು ಇನ್ನು ತಿಂಗಳಿಗೆ ಶೇ 2ರಷ್ಟು ಬಡ್ಡಿ ಸೇರಿಸಿ ಪಾವತಿಸಬೇಕಾಗುತ್ತದೆ' ಎಂದು ಅವರು ತಿಳಿಸಿದರು.

2019–20ನೇ ಸಾಲಿಗೆ ಹೋಲಿಸಿದರೆ ತರಿಗೆ ಸಂಗ್ರಹದಲ್ಲಿ ತುಸು ಹೆಚ್ಚಳ ಕಂಡು ಬಂದಿದೆ. ಕಳೆದ ವರ್ಷ. ₹ 2,686 ಕೋಟಿ ತೆರಿಗೆ ಸಂಗ್ರಹವಾಗಿತ್ತು.

ಶಿಕ್ಷಣ ಸಂಸ್ಥೆಗಳಿಗಿಲ್ಲ ರಿಯಾಯಿತಿ

'ಬಿಬಿಎಂಪಿ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಿಗೆ ನೀಡಿದ್ದ ಆಸ್ತಿ ತೆರಿಗೆ ರಿಯಾಯಿತಿಯನ್ನು ಈ ವರ್ಷದಿಂದ ರದ್ದುಪಡಿಸಲಾಗಿದೆ. ಬಿಬಿಎಂಪಿ ಕಾಯ್ದೆ ಪ್ರಕಾರ, ಸರ್ಕಾರಿ ಹಾಗೂ ಬಿಬಿಎಂಪಿಯ ಶಿಕ್ಷಣ ಸಂಸ್ಥೆಗಳು ಹೊರತುಪಡಿಸಿ ಉಳಿದೆಲ್ಲ ಶಿಕ್ಷಣ ಸಂಸ್ಥೆಗಳು ತಮ್ಮ ಕಟ್ಟಡಗಳಿಗೆ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ' ಎಂದು ಬಸವರಾಜ್ ತಿಳಿಸಿದರು.

ಮಾವೋವಾದಿ ಜತೆ ಸಂಪರ್ಕ ಆರೋಪ: ಎನ್‌ಐಎ ಶೋಧ

ಹೈದರಾಬಾದ್: ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಬುಧವಾರ ಸಿವಿಲ್ ಲಿಬರ್ಟಿಸ್‌ನ ಹಲವು ಕಾರ್ಯಕರ್ತರು, ವಕೀಲರು ಮತ್ತು ಲೇಖಕರ ನಿವಾಸಗಳಲ್ಲಿ ಶೋಧ ಕಾರ್ಯ ನಡೆಸಿದರು.

ನಿಷೇಧಿತ ಮಾವೋವಾದಿ ಸಂಘಟನೆಗಳ ಜತೆ ಸಂಪರ್ಕ ಹೊಂದಿದ ಶಂಕೆ ಮೇರೆಗೆ ಈ ಶೋಧ ಕಾರ್ಯ ನಡೆಸಲಾಗಿದೆ. ರಾಜಮಂಡ್ರಿಯಲ್ಲಿರುವ ಆಂಧ್ರಪ್ರದೇಶ ಸಿವಿಲ್ ಲಿಬರ್ಟಿಸ್ ಸಮಿತಿ ಅಧ್ಯಕ್ಷ ಚಿಟ್ಟಿಬಾಬು ನಿವಾಸ, ಕರ್ನೂಲ್‌ನಲ್ಲಿರುವ ಕ್ರಾಂತಿಕಾರಿ ಲೇಖಕರ ಸಂಘದ ನಾಯಕರಾದ ಜಿ. ಪಿಣಾಕಪಾನಿ ಅವರ ನಿವಾಸ ಮತ್ತು ಪ್ರೊದ್ದುತೂರಿನಲ್ಲಿರುವ ವರಲಕ್ಷ್ಮಿ ಅವರ ನಿವಾಸ, ವಿಶಾಖಪಟ್ಟಣದಲ್ಲಿ ವಕೀಲರಾದ ಕೆ. ಪದ್ಮ, ಕೆ.ಎಸ್. ಚಲಂ ಅವರ ನಿವಾಸದಲ್ಲಿ ಶೋಧ ಕಾರ್ಯ ನಡೆದಿದೆ.

ಎನ್‌ಎಚ್‌ಎಂ ನೌಕರರಿಗೆ ಕಡ್ಡಾಯ ರಜೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ನೌಕರರೆಲ್ಲರಿಗೂ ಗುರುವಾರ (ಏ.1) ಕಡ್ಡಾಯ ರಜೆ ನೀಡಲಾಗಿದೆ. ಇದರಿಂದಾಗಿ ವೈದ್ಯಕೀಯ ವ್ಯವಸ್ಥೆಯಲ್ಲಿ ಏರುಪೇರಾಗುವ ಸಾಧ್ಯತೆಯಿದೆ.

ವೈದ್ಯಕೀಯ ಮತ್ತು ಅರೆವೈದ್ಯಕೀಯ ನೌಕರರ ಸೇವಾ ಅವಧಿಯನ್ನು 2021–22ನೇ ಸಾಲಿಗೆ ವಿಸ್ತರಿಸುವ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ಸೇವೆ ತೃಪ್ತಿಕರವಾಗಿರುವ ಸಿಬ್ಬಂದಿಗೆ ಒಂದು ದಿನ ವಿರಾಮ ನೀಡಿ, ಅವರ ಅವಧಿಯನ್ನು ಏ.2, 2021ರಿಂದ ಮಾ.31, 2022ರವರೆಗೆ ವಿಸ್ತರಿಸಬೇಕು ಎಂದು ತಿಳಿಸಿದ್ದಾರೆ.

ಎನ್‌ಎಚ್‌ಎಂ ಅಡಿಯಲ್ಲಿ 23 ಸಾವಿರಕ್ಕೂ ಅಧಿಕ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಡುವೆ ಒಂದು ದಿನ ರಜೆ ನೀಡಿರುವುದು ನೌಕರರ ಆತಂಕಕ್ಕೆ ಕಾರಣವಾಗಿದೆ. ಅವರು ನವಜಾತ ಶಿಶುಗಳ ಆರೈಕೆ, ರಾಷ್ಟ್ರೀಯ ಆಂಬುಲೆನ್ಸ್ ಸೇವೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ವೇಳೆ ಎನ್‌ಎಚ್‌ಎಂ ಅಡಿ ಕಾರ್ಯನಿರ್ವಹಿಸುತ್ತಿರುವ ನೌಕರರು ಗುರುವಾರ ಸೇವೆಗೆ ಹಾಜರಾಗದಿದ್ದಲ್ಲಿ ವೈದ್ಯಕೀಯ ವ್ಯವಸ್ಥೆಯ ಸಮರ್ಪಕ ನಿರ್ವಹಣೆ ಕಷ್ಟ ಎಂದು ಇಲಾಖೆಯ ಕೆಲ ಸಿಬ್ಬಂದಿ ಹೇಳಿದ್ದಾರೆ.

'10–15 ವರ್ಷಗಳಿಂದ ಗುತ್ತಿಗೆ ನೌಕರರು ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಕೋವಿಡ್ ಪ್ರಕರಣ ವರದಿಯಾದ ಬಳಿಕ ಹಗಲಿರುಳು ಕಾರ್ಯ ನಿರ್ವಹಿಸಿದ್ದಾರೆ. ಈ ವೇಳೆ ಕಡ್ಡಾಯ ರಜೆ ನೀಡಿರುವುದು ಸರಿಯಾದ ಕ್ರಮವಲ್ಲ. ಇದರಿಂದ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯವಾಗಬಹುದು' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

600ಕ್ಕೂ ಹೆಚ್ಚು ಜನ ಸಹಿ ಹಾಕುವ ಮೂಲಕ ಬೆಂಬಲ

ಬಿಎಂಟಿಸಿ ಸುಧಾರಿಸಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಪುನರುಜ್ಜೀವಗೊಳಿಸಲು ಅಥವಾ ಸುಧಾರಿಸಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿ ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಆನ್‌ಲೈನ್ ಮೂಲಕ ಅಭಿಯಾನ ನಡೆಸುತ್ತಿದೆ. ಈ ಅಭಿಯಾನಕ್ಕೆ 600ಕ್ಕೂ ಹೆಚ್ಚು ಜನ ಸಹಿ ಹಾಕುವ ಮೂಲಕ ಬೆಂಬಲ ಸೂಚಿಸಿದ್ದಾರೆ.

'ಬಿಎಂಟಿಸಿ ಪುನರುಜ್ಜೀವಗೊಳಿಸುವ ದೂರದೃಷ್ಟಿಯಿಂದ ಯೋಜನೆಯೊಂದನ್ನು ರೂಪಿಸಲಾಗಿದ್ದು, ಇದಕ್ಕಾಗಿ ₹700 ಕೋಟಿ ಅನುದಾನ ಬೇಕಾಗಿದೆ. ಆದರೆ, ಈ ಹಣಕ್ಕಾಗಿ

ಸರ್ಕಾರ ವಿದೇಶಿ ಬ್ಯಾಂಕ್‌ಗಳ ಮೊರೆಹೋಗಲು ಸೂಚಿಸಿದೆ. ಆದರೆ, ನಗರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ಸುರಿಯುತ್ತಿದೆ. ಈ ತಾರತಮ್ಯ ಏಕೆ' ವೇದಿಕೆಯು ಪ್ರಶ್ನಿಸಿದೆ.

'ಬಿಎಂಟಿಸಿ ಪುನರುಜ್ಜೀವಗೊಳಿಸಲು ರಾಜ್ಯಸರ್ಕಾರ ಸಂಪೂರ್ಣ ಬೆಂಬಲ ನೀಡಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರಿಗೆ ವೇದಿಕೆಯು ಮನವಿ ಮಾಡಿತ್ತು.

'ಮೆಟ್ರೊ ರೈಲಿನಲ್ಲಿ ನಿತ್ಯ ಲಕ್ಷ ಜನ ಓಡಾಡಿದರೆ, ಬಸ್‌ನಲ್ಲಿ 20 ಲಕ್ಷಕ್ಕೂ ಹೆಚ್ಚು ಜನ ಪ್ರಯಾಣಿಸುತ್ತಿದ್ದಾರೆ. ಬಸ್ ವ್ಯವಸ್ಥೆಗೆ ಆರ್ಥಿಕ ನೆರವು ನೀಡಿದರೆ ನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಕಡಿಮೆ ಆಗುತ್ತದೆ' ಎಂದು ವೇದಿಕೆಯ ಸದಸ್ಯರಾದ ರಾಮದಾಸ್ ರಾವ್, ಉದಿತ್ ಖಂಡೇಲ್‌ವಾಲ್, ಆರ್. ಜೆನಿಸಿಯಾ, ಲೇಖಾ ಅಡವಿ, ಶಹೀನ್ ಶಾಸ, ವಿನಯ್ ಶ್ರೀನಿವಾಸ್ ಹೇಳಿದ್ದಾರೆ.

'ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಬಿಎಂಟಿಸಿಗೆ ಯಾವುದೇ ಆರ್ಥಿಕ ನೆರವು ನೀಡದಿರುವುದು ಬೇಸರದ ಸಂಗತಿ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ಹಾವಳಿಯಿಂದ ಬಿಎಂಟಿಸಿ ಇಂದು ಸಂಕಷ್ಟದಲ್ಲಿದೆ. ಸಿಬ್ಬಂದಿ ವೇತನ ಪಾವತಿಗೂ ಕಷ್ಟವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರವು ಸಂಸ್ಥೆಯ ನೆರವಿಗೆ ಬಂದು ವೇತನ ಪಾವತಿಗೆ ಆರ್ಥಿಕ ನೆರವು ನೀಡಿದ್ದು ಸ್ವಾಗತಾರ್ಹ. ಆದರೆ, ಅದರ ಜತೆಗೆ ಸಂಸ್ಥೆಯ ಪುನರುಜ್ಜೀವನ ಕೂಡ ಸರ್ಕಾರದ ಕರ್ತವ್ಯ' ಎಂದು ವೇದಿಕೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿಯಾನ ಬೆಂಬಲಿಸುವವರು ಈ ಲಿಂಕ್ ಬಳಸಿ ಸಹಿ ಹಾಕಬಹುದು. https://docs.google.com/forms/d/1F67uIN05YZU7D984eO4iMpTCMi6XN2m4W2MGlwQJZJw/edit

ವಾಣಿ

ಂಬಿ

ಸಲ್ಲಿಸಬೇಕು. ಈ
ಸರ್ಕಾರ ಮತ್ತು
ಮ್ಮ ಹೊಣೆಯನ್ನು
ಯೂ ಮಾಹಿತಿ
ಹೈಕೋರ್ಟ್

ಗಳನ್ನು ಪಾಲನೆ
ಂದು ಹಿಂದಿನ
ತಿಳಿಸಿದ್ದ ರಾಜ್ಯ
ಮಹಾನಗರ
ಾರವನ್ನು ರಚಿಸಿ
ಲ್ 29ರಂದು
ದ ಪ್ರತಿಯನ್ನು
ಚಾರ ವ್ಯವಸ್ಥೆಯ
ಸಿದ ಯಾವುದೇ
ಂಡಿಲ್ಲ ಎಂದು
ಸಿತ್ತು.

ತ್ತೆ?

ಕೊಡಬಹುದೆ'
ಕುಮಾರಸ್ವಾಮಿ

ದ್ದಾಗ ಅವರನ್ನು
ಲೋಕಸಭಾ
ಸಹೋದರನನ್ನು
ಸಭಾ ಕ್ಷೇತ್ರಕ್ಕೆ
ಮಾಡಲಾಗಿತ್ತು.
ನ್ನು ಗೆಲ್ಲಿಸಲೆಂದು
ಜೆಪಿಯನ್ನು ಗೆಲ್ಲಿ-
ಅಭ್ಯರ್ಥಿ'ಯನ್ನು
ನನ್ನ ವಿರುದ್ಧ
ನಾಯಕರೇ
ಸ್‌ನ ತ್ಯಾಗಕ್ಕಾಗಿ
ಉಳಿಯದಿದ್ದರೆ

ಂದಲೇ
ಣ
ಬಿಜೆಪಿ

ಪ್ರಕರಣದ
ರ್ವವಾಗಿ ಕೆಪಿಸಿಸಿ
ರ್ಹಣೆಯಾಗುತ್ತಿ-
ಗುತ್ತಿದೆ' ಎಂದು

ಗ್ರೆಸ್ ಮುಖಂಡ
ವರ ಸ್ನೇಹಿತರು
ಮಾಡಿದ್ದರು.
ನಲಪಾಡ್ ಸ್ನೇಹಿ
. ಇಲ್ಲಿ ಏನಾಗು
ಮೂಲಕ ಪ್ರಶ್ನಿಸಿದೆ.
ನ್ ಮೂಲಕ
ನೀಡುತ್ತಿದ್ದಾರೆ.
ಮುಂದೆ ಹಾಜ
ಕೇಳಿಕೆ ದಾಖಲು
ಸಿ ಕಾನೂನು
ಕಾರ್ಯದರ್ಶಿ
ರಾಜ್ ಹಾಜರಿದ್ದು
ದ್ದರೆ. ಒಟ್ಟಿನಲ್ಲಿ
ರ್ಟಕ ಕಾಂಗ್ರೆಸ್
ಸಾಬೀತಾಗಿದೆ'

ಮಹಾನಾಯಕಿ,-
ಪಿಸಿಸಿ ಕಾನೂನು
ಯಿನ್ ದ ಡಾಟ್ಸ್
ನಲ್ಲಿ ತಿಳಿಸಿದೆ.

ಹೋತ್ಸವ
ಡೆಮಿ ಅಧ್ಯಕ್ಷ

ನ್ನು
ನವಿ

ನೆಯ ವರದಿ
ರಿಗೆ ಹೊಂದಿ
ಗ್ರಾಮಗಳಿಗೆ
ಯಿಂದ ಅಭಿವೃದ್ಧಿ
ಪಾಲಿಕೆಗೆ
ಭಿವೃದ್ಧಿಗೆ ಹೆಚ್ಚು
' ಕಿತ್ತಗನೂರು
ಉಪಾಧ್ಯಕ್ಷ
ಅಭಿಪ್ರಾಯಪಟ್ಟ-
ಂದಿಕೊಂಡಿರುವ
ರ್ಪಡೆಗೊಂಡರೆ
ಹೆಚ್ಚು ಆದ್ಯತೆ
ದೊಮ್ಮಸಂದ್ರ
ಲ್ ಸಂತಸ

ಂಡು

ತಿಯಲ್ಲಿ ಗುಂಡು
ಪೊಲೀಸರು
ಕರ ವಿರುದ್ಧ
ಸಂಬಂಧಿಯ
' ಪೊಲೀಸರಿಗೆ
ಜಿಲ್ಲಾ ಪೊಲೀಸ್
ಗೇಶ ಡಿ.ಎಲ್
ಜೊಂದಿಗೆ ಸ್ಥಳಕ್ಕೆ
ದರು.

ಗುರುವಾರ, ಏಪ್ರಿಲ್ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 91 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕ್ರಮಬದ್ಧವಾದ ಹಾಗೂ ನಿಯಮಿತವಾದ ವೃತ್ತಪತ್ರಿಕೆ ಓದು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಖಚಿತವಾದ ಅಧ್ಯಯನ ಸಂಪನ್ಮೂಲವಾಗಿದೆ

ಅನುಭವ ಮಂಟಪ: 'ಜಲ ವಿವಾದ ಕಾಯ್ದೆಯ ಆಶಯ, ಸ್ವರೂಪ ಬದಲಾಗಬೇಕು'
ಕೊಯಮತ್ತೂರು: 'ಅನ್ಯ' ಹಣೆಪಟ್ಟಿಯೇ ಕಮಲ್‌ಗೆ ಸವಾಲು 6
10 ರಾಜ್ಯ ಹೆದ್ದಾರಿಗಳಲ್ಲಿ ಟೋಲ್: ಟೆಂಡರ್ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
49,509	14,691	₹45,650 (ಬೆಂಗಳೂರು)	₹65,100 (ಬೆಂಗಳೂರು)	73.12

ಇಲಾಖೆಯಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ • ಮೋದಿ, ಅಮಿತ್ ಶಾಗೆ ದೂರು?

ಸಿ.ಎಂ ವಿರುದ್ಧ ಈಶ್ವರಪ್ಪ ಬಂಡಾಯ

ಪ್ರಜಾವಾಣಿ ವಾರ್ತೆ

ಕೆ.ಎಸ್. ಈಶ್ವರಪ್ಪ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಬಂಡೆದ್ದಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ತಮ್ಮ ಇಲಾಖೆಯಲ್ಲಿ ಯಡಿಯೂರಪ್ಪ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಆಪಾದಿಸಿ ರಾಜ್ಯಪಾಲ ವಜುಭಾಯಿ ವಾಲಾ ಅವರಿಗೆ ಬುಧವಾರ ದೂರು ನೀಡಿದ್ದಾರೆ.

ಸಚಿವರೊಬ್ಬರು ಮುಖ್ಯಮಂತ್ರಿ ವಿರುದ್ಧವೇ ರಾಜ್ಯಪಾಲರಿಗೆ ದೂರು ನೀಡಿದ ಪ್ರಕರಣ ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲನೆಯದು.

ಈ ದೂರಿನ ಪ್ರಕರಣ ಆಡಳಿತಾರೂಢ ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸಿದ್ದು, ಯಡಿಯೂರಪ್ಪ ಮೌನಕ್ಕೆ ಶರಣಾಗಿದ್ದಾರೆ.

ಒಂದು ವಾರದ ಹಿಂದೆ ಮುಖ್ಯಮಂತ್ರಿ ನಿವಾಸದಲ್ಲಿ ಸಭೆ ಸೇರಿದ್ದ ಬಿಜೆಪಿಯ 60 ಶಾಸಕರು ಸಚಿವ ಈಶ್ವರಪ್ಪ ವಿರುದ್ಧ ಹರಿಹಾಯ್ದಿದ್ದರು. 'ನಮ್ಮ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ನಮ್ಮ ಮಾತು ಕೇಳುತ್ತಿಲ್ಲ. ನೇರವಾಗಿ ನೀವೇ ಅನುದಾನ ಬಿಡುಗಡೆ ಮಾಡಬೇಕು' ಎಂದು ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದರು. ಅದರ ಮರುದಿನವೇ ಪಕ್ಷದ ರಾಜ್ಯ ಉಸ್ತುವಾರಿಯಾಗಿರುವ ಅರುಣ್ ಸಿಂಗ್ ಅವರಿಗೆ, ಪತ್ರ ಬರೆದಿದ್ದ ಈಶ್ವರಪ್ಪ ಮುಖ್ಯಮಂತ್ರಿ ವಿರುದ್ಧ ದೂರುಗಳನ್ನು ಸಲ್ಲಿಸಿದ್ದರೂ ಎಂದು ಹೇಳಲಾಗುತ್ತಿದೆ.

ದೂರು ಕೊಟ್ಟ ಬಳಿಕ ರಾಜಭವನದ ಎದುರು ಸುದ್ದಿಗಾರರ ಜತೆ ಮಾತನಾಡಿದ ಈಶ್ವರಪ್ಪ 'ಪತ್ರದಲ್ಲಿರುವ ಎಲ್ಲ ಅಂಶಗಳನ್ನೂ ರಾಜ್ಯಪಾಲರಿಗೆ ವಿವರಿಸಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದ್ದೇನೆ' ಎಂದಷ್ಟೇ ಹೇಳಿದ್ದಾರೆ.

'ರಾಜ್ಯಪಾಲರನ್ನು ಭೇಟಿ ಮಾಡಿದ್ದ ಈಶ್ವರಪ್ಪ ಅವರು ಈ ದೂರನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕಳುಹಿಸಿದ್ದೇನೆ. ರಾಜ್ಯ ಸರ್ಕಾರದ ಸಾಂವಿಧಾನಿಕ ಮುಖ್ಯಸ್ಥರಾದ ತಮಗೂ ನೀಡುತ್ತಿದ್ದೇನೆ' ಎಂದು ವಿವರಿಸಿದ್ದಾಗಿ ಮೂಲಗಳು ಹೇಳಿವೆ.

ಈಶ್ವರಪ್ಪ ಅವರು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೂ ಪತ್ರ ಕಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪತ್ರದ ಸಾರಾಂಶ: 'ಕಳೆದ ಒಂದು ವರ್ಷದ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಎಲ್ಲ ನಿರ್ಧಾರಗಳನ್ನು ನನ್ನ ಗಮನಕ್ಕೆ ತರದೇ ಸ್ವತಃ ಮುಖ್ಯಮಂತ್ರಿಯವರೇ ಕೈಗೊಳ್ಳುತ್ತಿದ್ದಾರೆ. ಇದರಿಂದ ಸಂಪುಟದ ಅತ್ಯಂತ ಹಿರಿಯ ಸದಸ್ಯನಾದ ನನಗೆ ತೀವ್ರ ಮುಜುಗರ ಮತ್ತು ನೋವು ಉಂಟಾಗಿದೆ'.

'ಸಚಿವ ಸಂಪುಟ ಸಭೆಯಲ್ಲಿ ಸಚಿವರ ಅಭಿಪ್ರಾಯಗಳನ್ನು ಕಡೆಗಣಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಸಾಕಷ್ಟು ನಿದರ್ಶನಗಳನ್ನು ನೀಡಬಲ್ಲೆ' ಎಂದೂ ಅವರು ಪತ್ರದಲ್ಲಿ ವಿವರಿಸಿದ್ದಾರೆ.

5ನೇ ಪುಟ ನೋಡಿ

ಈಶ್ವರಪ್ಪ ಸಿಡಿದೇಳುವುದು ಇದೇ ಮೊದಲಲ್ಲ

ಬಿಜೆಪಿ ಅಧಿಕಾರಕ್ಕೇರುವವರೆಗೂ ಅಣ್ಣ–ತಮ್ಮರಂತೆ ಅನ್ಯೋನ್ಯವಾಗಿದ್ದ ಬಿ.ಎಸ್. ಯಡಿಯೂರಪ್ಪ ಮತ್ತು ಕೆ.ಎಸ್. ಈಶ್ವರಪ್ಪ, ಆ ಬಳಿಕ ಪರಸ್ಪರ ಪೈಪೋಟಿಗೆ ಇಳಿಯಲು ಆರಂಭಿಸಿದ್ದು ಹೊಸತಲ್ಲ.

ಅಧಿಕಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಯಡಿಯೂರಪ್ಪ ಆಡುವ ನಾಜೂಕಿನ 'ಆಟ'ದ ವಿರುದ್ಧ ಈಶ್ವರಪ್ಪ ಅವರು ಬಂಡಾಯದ ಬಾವುಟ ಹಾರಿಸಿರುವುದಕ್ಕೆ ಒಂದು ದಶಕಕ್ಕಿಂತ ಹೆಚ್ಚಿನ ಇತಿಹಾಸವಿದೆ.

ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ 20 ತಿಂಗಳ ಬಳಿಕ ಯಡಿಯೂರಪ್ಪ ಅವರಿಗೆ ಅಧಿಕಾರ ಬಿಟ್ಟುಕೊಡುವ ವಿಷಯ ಚರ್ಚೆಯಲ್ಲಿತ್ತು. ಆಗ ಯಡಿಯೂರಪ್ಪ ಅವರನ್ನು ಆ ಹುದ್ದೆಗೆ ಆಯ್ಕೆ ಮಾಡುವುದು ಬೇಡ ಎಂದು ಬಿಜೆಪಿ ವರಿಷ್ಠರ ಮುಂದೆ ವಾದ ಮುಂದಿಟ್ಟ 'ತ್ರಿಮೂರ್ತಿ'ಗಳಲ್ಲಿ ಈಶ್ವರಪ್ಪ ಕೂಡ ಒಬ್ಬರು. ಹೀಗಾಗಿಯೇ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಒಬ್ಬರಿಗೆ ಸಭಾಧ್ಯಕ್ಷ ಪಟ್ಟ, ಮತ್ತೊಬ್ಬರಿಗೆ ಸಭಾಪತಿ ಹುದ್ದೆ ನೀಡಲಾಯಿತು. ಅಂದು ಯಡಿಯೂರಪ್ಪನವರ ಜತೆ ರಾಜಿ ಮಾಡಿಕೊಂಡ ಈಶ್ವರಪ್ಪ ಇಂಧನ ಖಾತೆ ಪಡೆದು ಸಚಿವರಾದರು. ಯಡಿಯೂರಪ್ಪನವರ ಜತೆಗಿನ ಬಾಂಧವ್ಯ ಹೆಚ್ಚು ದಿನ ಸುಖಕರವಾಗಿರಲಿಲ್ಲ. 2009ರ ಲೋಕಸಭೆ ಚುನಾವಣೆಯಲ್ಲಿ ಶಿವಮೊಗ್ಗದಿಂದ ತಮ್ಮ ಮಗ ಬಿ.ವೈ. ರಾಘವೇಂದ್ರ ಅವರನ್ನು ಕಣಕ್ಕೆ ಇಳಿಸಲು ಯಡಿಯೂರಪ್ಪ ಮುಂದಾದಾಗ ಮೊದಲು ತಕರಾರು ತೆಗೆದವರು ಈಶ್ವರಪ್ಪ.

5ನೇ ಪುಟ ನೋಡಿ

ಹಿರಿಯ ಸಚಿವರು ಮುಖ್ಯಮಂತ್ರಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಒಂದೋ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು, ಇಲ್ಲವೇ ಸಚಿವರನ್ನು ಕಿತ್ತು ಹಾಕಬೇಕು

ಡಿ.ಕೆ.ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

ಪಕ್ಷಾಂತರಕ್ಕೆ ₹ 10 ಕೋಟಿ ಆಮಿಷದ ಆರೋಪ

ಬಿಎಸ್‌ವೈ ವಿರುದ್ಧ ತನಿಖೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುಮಠಕಲ್ ಕ್ಷೇತ್ರದ ಜೆಡಿಎಸ್ ಶಾಸಕ ನಾಗನಗೌಡ ಕಂದಕೂರ ಅವರನ್ನು ಬಿಜೆಪಿಗೆ ಸೆಳೆಯಲು 2019ರಲ್ಲಿ ₹ 10 ಕೋಟಿ ಲಂಚದ ಆಮಿಷ ಒಡ್ಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಇತರರ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಗೆ ಇದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ಬುಧವಾರ ತೆರವುಗೊಳಿಸಿದೆ.

ಇದರಿಂದಾಗಿ ಈ ಪ್ರಕರಣದ ತನಿಖೆಗೆ ಮತ್ತೆ ಅವಕಾಶ ದೊರಕಿದಂತಾಗಿದೆ.

'2019ರ ಫೆಬ್ರುವರಿ 7ರ ಮಧ್ಯರಾತ್ರಿ ತನ್ನನ್ನು ದೇವದುರ್ಗ ಪ್ರವಾಸಿ ಮಂದಿರಕ್ಕೆ ಕರೆಸಿಕೊಂಡ ಯಡಿಯೂರಪ್ಪ ಅವರು, ತಂದೆಯಿಂದ ರಾಜೀನಾಮೆ ಕೊಡಿಸಿ ಮುಂಬೈಗೆ ಕಳುಹಿಸುವಂತೆ ಒತ್ತಡ ಹೇರಿದ್ದರು. ಇದಕ್ಕಾಗಿ ₹ 10 ಕೋಟಿ ನೀಡುವ ಆಮಿಷ ಒಡ್ಡಿದ್ದರು. ಮುಂದಿನ ಚುನಾವಣೆಯಲ್ಲಿ ನನ್ನನ್ನು ಗುರುಮಠಕಲ್ ಕ್ಷೇತ್ರದಲ್ಲಿ ಕಣಕ್ಕಿಳಿಸಿ ಗೆಲ್ಲಿಸುವ ಮತ್ತು ಸಚಿವ ಸ್ಥಾನ ನೀಡುವುದಾಗಿಯೂ ಹೇಳಿದ್ದರು' ಎಂದು ನಾಗನಗೌಡ ಅವರ ಮಗ ಶರಣಗೌಡ ದೇವದುರ್ಗ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೇವದುರ್ಗ ಪ್ರವಾಸಿ ಮಂದಿರದಲ್ಲಿ ನಡೆದಿತ್ತು ಎನ್ನಲಾದ ಮಾತುಕತೆಯ ರೆಕಾರ್ಡಿಂಗ್ ಅನ್ನೂ ಶರಣಗೌಡ ಪೊಲೀಸರಿಗೆ ನೀಡಿದ್ದರು. ಯಡಿಯೂರಪ್ಪ, ಶಾಸಕರಾದ ಶಿವನಗೌಡ ನಾಯಕ್, ಜೆ. ಪ್ರೀತಂ ಗೌಡ ಮತ್ತು ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದ ಬಳಿಕ ಅವರ ರಾಜಕೀಯ ಸಲಹೆಗಾರರಾಗಿದ್ದ ಪತ್ರಕರ್ತ ಎಂ.ಬಿ. ಮರಂಕಲ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದ ಯಡಿಯೂರಪ್ಪ ಮತ್ತು ಇತರ ಆರೋಪಿಗಳು, ಎಫ್‌ಐಆರ್ ರದ್ದು ಮಾಡುವಂತೆ ಕೋರಿ ಹೈಕೋರ್ಟ್‌ನ ಕಲಬುರ್ಗಿ ಪೀಠದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. 2019ರ ಫೆಬ್ರುವರಿಯಲ್ಲೇ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯ, ತನಿಖೆಗೆ ತಡೆ ನೀಡಿತ್ತು.

5ನೇ ಪುಟ ನೋಡಿ

'ಲಿಸ್ಟಿಂಗ್' ವಿಳಂಬದಲ್ಲಿ ಕೈವಾಡದ ಶಂಕೆ

ತನಿಖೆಗೆ ತಡೆ ನೀಡಿದ್ದ 2019ರ ಫೆಬ್ರುವರಿ 22ರ ಆದೇಶ ಪ್ರಶ್ನಿಸಿ 2019ರ ಏಪ್ರಿಲ್ 12 ಮತ್ತು 15ರಂದು ಎರಡು ಮಧ್ಯಂತರ ಅರ್ಜಿಗಳನ್ನು ಸಲ್ಲಿಸಲಾಗಿತ್ತು. 2020ರ ಫೆಬ್ರುವರಿ 8ರವರೆಗೂ ವಕೀಲರ ಕೋರಿಕೆಯಂತೆ ವಿಚಾರಣೆ ಮುಂದೂಡುತ್ತಾ ಬರಲಾಯಿತು. ಆ ಬಳಿಕ 2021ರ ಮಾರ್ಚ್ 15ರವರೆಗೂ ಅರ್ಜಿಗಳನ್ನು ವಿಚಾರಣೆಗೆ ಪಟ್ಟಿ ಮಾಡದೇ ಇರುವ ಕುರಿತು ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಸುಪ್ರೀಂಕೋರ್ಟ್ ಆದೇಶದಂತೆ ವಿಶೇಷ ಪೀಠ ಅಸ್ತಿತ್ವಕ್ಕೆ ಬಂದ ಬಳಿಕ ಸಂಸದರು ಹಾಗೂ ಶಾಸಕರಿಗೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳ ಪಟ್ಟಿ ಸಲ್ಲಿಸಲು ಸೂಚಿಸಲಾಗಿತ್ತು. ಆ ಪಟ್ಟಿಯಿಂದಲೂ ಈ ಎರಡು ಅರ್ಜಿಗಳನ್ನು ಹೊರಗಿಡಲಾಗಿತ್ತು. ಉದ್ದೇಶಪೂರ್ವಕವಾಗಿ ಈ ರೀತಿ ಮಾಡಿರುವುದು ಕಂಡುಬರುತ್ತಿದೆ. ಈ ರೀತಿಯ ತಪ್ಪು ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಕ್ಕಾಗಿ ರಿಜಿಸ್ಟ್ರಿಯು ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿಯವರ ಗಮನಕ್ಕೆ ತರಬೇಕು' ಎಂದು ಆದೇಶದಲ್ಲಿ ನಿರ್ದೇಶನ ನೀಡಿದ್ದಾರೆ.

ಇಂದು ಎರಡನೇ ಹಂತದ ಮತದಾನ

ಗುವಾಹಟಿ/ಕೋಲ್ಕತ್ತ (ಪಿಟಿಐ): ಅಸ್ಸಾಂ ಹಾಗೂ ಪಶ್ಚಿಮ ಬಂಗಾಳ ವಿಧಾನಸಭೆಗಳಿಗೆ ಎರಡನೇ ಹಂತದ ಮತದಾನ ಗುರುವಾರ ನಡೆಯಲಿದೆ. ಅಸ್ಸಾಂನ 39 ಹಾಗೂ ಪಶ್ಚಿಮ ಬಂಗಾಳದ 30 ಕ್ಷೇತ್ರಗಳಿಗೆ ಬೆಳಿಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಲಿದೆ.

ನಂದಿಗ್ರಾಮದ ಮೇಲೆ ದೃಷ್ಟಿ: ಪಶ್ಚಿಮ ಬಂಗಾಳದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ನಂದಿಗ್ರಾಮವು ಭಾರಿ ಕುತೂಹಲ ಕೆರಳಿಸಿದೆ.

6ನೇ ಪುಟ ನೋಡಿ

ಪಿ.ಎಫ್. ಕಡಿತ ಬದಲಿಲ್ಲ, ಪ್ಯಾನ್–ಆಧಾರ್ ಜೋಡಣೆ ಅವಧಿ ವಿಸ್ತರಣೆ

ಬೆಂಗಳೂರು: ಗುರುವಾರದಿಂದ ಹೊಸ ಹಣಕಾಸು ವರ್ಷ ಆರಂಭವಾಗಿದ್ದು, ಹಣಕಾಸಿಗೆ ಸಂಬಂಧಿಸಿದ ಕೆಲವು ನಿಯಮಗಳಲ್ಲಿ ಬದಲಾವಣೆ ಆಗಿದೆ. ಕೆಲವು ನಿಯಮಗಳಲ್ಲಿ ಯಥಾಸ್ಥಿತಿ ಮುಂದುವರಿದಿದೆ. ಈ ಕುರಿತ ವಿವರ ಇಲ್ಲಿದೆ.

ಬದಲಾವಣೆ ಇಲ್ಲ

- ನಾಲ್ಕು ಕಾರ್ಮಿಕ ಸಂಹಿತೆಗಳು ಹೊಸ ಆರ್ಥಿಕ ವರ್ಷದಿಂದ ಜಾರಿಗೆ ಬರಬೇಕಿತ್ತು. ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ರಾಜ್ಯಗಳು ಅಂತಿಮಗೊಳಿಸದ ಕಾರಣ, ಸಂಹಿತೆಗಳನ್ನು ಜಾರಿಗೊಳಿಸದಿರಲು ತೀರ್ಮಾನಿಸಲಾಗಿದೆ. ಇದರಿಂದಾಗಿ, ನೌಕರರಿಗೆ ಎಲ್ಲ ಕಡಿತಗಳ ನಂತರ ಕೈಗೆ ಸಿಗುವ ವೇತನದಲ್ಲಿ ಬದಲಾವಣೆ ಇರುವುದಿಲ್ಲ. ಕಂಪನಿಗಳು ನೌಕರರ ಭವಿಷ್ಯ ನಿಧಿ (ಪಿ.ಎಫ್) ಖಾತೆಗಳಿಗೆ ಹೆಚ್ಚುವರಿ ಕೊಡುಗೆ ನೀಡುವ ಅಗತ್ಯ ಸದ್ಯಕ್ಕೆ ಇಲ್ಲ.
- ಮಾರ್ಚ್ 31ರೊಳಗೆ ಪ್ಯಾನ್ ಸಂಖ್ಯೆಗೆ ಆಧಾರ್ ಜೋಡಿಸದೇ ಇದ್ದರೆ, ಅಂತಹ ಪ್ಯಾನ್ ಸಂಖ್ಯೆಗಳು ಗುರುವಾರದಿಂದ ನಿಷ್ಕ್ರಿಯ ಆಗಲಿವೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ಆಧಾರ್–ಪ್ಯಾನ್ ಜೋಡಿಸಲು ಜೂನ್ 30ರವರೆಗೆ ಕೇಂದ್ರವು ಅವಕಾಶ ನೀಡಿದೆ. 'ಕೋವಿಡ್–19 ಸಾಂಕ್ರಾಮಿಕದಿಂದಾಗಿ ಸೃಷ್ಟಿಯಾಗಿರುವ ಸಮಸ್ಯೆಗಳನ್ನು ಗಮನದಲ್ಲಿ ಇರಿಸಿಕೊಂಡು ಈ ವಿಸ್ತರಣೆ ನೀಡಲಾಗಿದೆ' ಎಂದು ಆದಾಯ ತೆರಿಗೆ ಇಲಾಖೆ ಟ್ವೀಟ್ ಮಾಡಿದೆ.

ಬದಲಾವಣೆಗಳು

- ಪಿ.ಎಫ್. ಖಾತೆಗೆ ನೌಕರರ ಕಡೆಯಿಂದ ಜಮಾ ಆಗುವ ವಾರ್ಷಿಕ ₹ 2.5 ಲಕ್ಷದವರೆಗಿನ ಮೊತ್ತದ ಮೇಲಿನ ಬಡ್ಡಿಗೆ ಮಾತ್ರ ತೆರಿಗೆ ವಿನಾಯಿತಿ ಇರಲಿದೆ. ಕಂಪನಿ ಕಡೆಯಿಂದ ಕೊಡುಗೆ ಇಲ್ಲದಿದ್ದರೆ, ಅಂತಹ ನೌಕರರಿಂದ ಜಮಾ ಆಗುವ ₹ 5 ಲಕ್ಷದವರೆಗಿನ ಕೊಡುಗೆಯ ಮೇಲಿನ ಬಡ್ಡಿಗೆ ತೆರಿಗೆ ವಿನಾಯಿತಿ ಇರುತ್ತದೆ.
- 75 ವರ್ಷ ದಾಟದ ಹಿರಿಯ ನಾಗರಿಕರಿಗೆ ಐ.ಟಿ. ರಿಟರ್ನ್ಸ್ ಸಲ್ಲಿಕೆಯಿಂದ ವಿನಾಯಿತಿ
- ವಿದ್ಯುತ್ ಶುಲ್ಕ, ಒಟಿಟಿ ಚಂದಾದಾರಿಕೆ ಹಣ, ಪೋಸ್ಟ್ ಪೇಯ್ಡ್ ಮೊಬೈಲ್ ಶುಲ್ಕ–ಇಂಥ ಪಾವತಿಗಳನ್ನು ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್, ಯುಪಿಐ ಮೂಲಕ ಸ್ವಯಂಚಾಲಿತವಾಗಿ ನಡೆಯುವಂತೆ ಮಾಡುವ ಸೌಲಭ್ಯವು ಏಪ್ರಿಲ್ 1ರಿಂದ ಇರುವುದಿಲ್ಲ ಎಂದು ತಿಳಿಸಲಾಗಿತ್ತು. ಆದರೆ, ಈ ಸೌಲಭ್ಯವು ಆರು ತಿಂಗಳ ಮಟ್ಟಿಗೆ ಈಗಿನಂತೆಯೇ ಮುಂದುವರಿಯಲಿದೆ ಎಂದು ಆರ್‌ಬಿಐ ತಿಳಿಸಿದೆ.

ಮಿಸಳ್ ಹಾಪ್ಚಾ
ಕಾಮಣ್ಣನ ಮಕ್ಕಳು...
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಯುವತಿಯ ವೈದ್ಯಕೀಯ ಪರೀಕ್ಷೆ: ರಶೀದಿ, ಮೊಬೈಲ್ ಪುರಾವೆ ಸಲ್ಲಿಕೆ

ಕೊಟ್ಟ ದೂರಿಗೆ ಬದ್ಧ: ಸಂತ್ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸ್ವ–ಇಚ್ಛಾ ಹೇಳಿಕೆ ನೀಡಿ ವಿಚಾರಣೆ ಎದುರಿಸುತ್ತಿರುವ ಸಂತ್ರಸ್ತೆ, ತನ್ನ ಮೇಲೆ ಆಗಿರುವ ಅತ್ಯಾಚಾರಕ್ಕೆ ಸಂಬಂಧಪಟ್ಟ ಸಮಗ್ರ ದಾಖಲೆಗಳನ್ನೇ ತನಿಖಾಧಿಕಾರಿ ಎದುರು ಇಟ್ಟಿದ್ದಾರೆ.

ನ್ಯಾಯಾಲಯದ ಎದುರು ಮಂಗಳವಾರ ಮಧ್ಯಾಹ್ನ ಹಾಜರಾಗಿದ್ದ ಯುವತಿ ಹೇಳಿಕೆ ದಾಖಲಿಸಿದ್ದರು. ಇದಾದ ನಂತರ, ತನಿಖಾ ಪ್ರಕ್ರಿಯೆಗಳನ್ನು ಪೂರೈಸುವಂತೆ ತನಿಖಾಧಿಕಾರಿ ಎಂ.ಸಿ. ಕವಿತಾ ಅವರಿಗೆ ನ್ಯಾಯಾಲಯ ಅವಕಾಶ ನೀಡಿದೆ.

ಮಂಗಳವಾರ ಸಂಜೆಯೇ ಸಂತ್ರಸ್ತೆಯನ್ನು ಆಡುಗೋಡಿಯಲ್ಲಿರುವ ಸಿಸಿಬಿಯ ತಾಂತ್ರಿಕ ವಿಭಾಗದ ಕೊಠಡಿಗೆ ಕರೆದೊಯ್ದಿದ್ದ ಕವಿತಾ, ಧ್ವನಿ ಮಾದರಿ ಸಂಗ್ರಹಿಸಿದರು.

ಬುಧವಾರ ಬೆಳಿಗ್ಗೆ ಪುನಃ ಸಂತ್ರಸ್ತೆಯನ್ನು ಸಂಪರ್ಕಿಸಿದ ಕವಿತಾ, ಕಾರಿನಲ್ಲಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ನಂತರ, ಆಡುಗೋಡಿಗೆ ಕರೆತಂದು ರಾತ್ರಿಯವರೆಗೆ ವಿಚಾರಣೆ ನಡೆಸಿದರು.

'ಹೇಳಿಕೆ ನೀಡಿದ ಸಂತ್ರಸ್ತೆ, ತಮ್ಮ ಪ್ರತಿಯೊಂದು ಮಾತಿಗೂ ತನಿಖಾಧಿಕಾರಿ ಎದುರು ದಾಖಲೆ ಮುಂದಿಟ್ಟು ಉತ್ತರಿಸಿದರು. ಪೂರಕ ಪ್ರಶ್ನೆಗಳಿಗೂ ನೇರವಾಗಿ ಉತ್ತರಿಸಿದರು' ಎಂದು ಮೂಲಗಳು ಹೇಳಿವೆ.

ಲ್ಯಾಪ್‌ಟಾಪ್, ಮೊಬೈಲ್, ಚಿನ್ನಾಭರಣ, ರಶೀದಿ ಸೇರಿದಂತೆ ಹಲವು ಪುರಾವೆಗಳನ್ನು ಸಂತ್ರಸ್ತೆಯೇ ಸ್ವಯಂಪ್ರೇರಣೆಯಿಂದ ತನಿಖಾಧಿಕಾರಿಗೆ ಒಪ್ಪಿಸಿದ್ದಾರೆ.

'ರಮೇಶ ಜಾರಕಿಹೊಳಿ ಹೇಗೆ ಪರಿಚಯ' ಎಂಬ ಪ್ರಶ್ನೆಗೆ ಚಿನ್ನಾಭರಣ ಖರೀದಿಯ ರಶೀದಿ, ಮೊಬೈಲ್ ಹಾಗೂ ಇತರೆ ದಾಖಲೆಗಳನ್ನು ತನಿಖಾಧಿಕಾರಿ ಮುಂದಿಟ್ಟು ಮಾತನಾಡಿದ ಸಂತ್ರಸ್ತೆ, 'ಕಿರುಚಿತ್ರ ನಿರ್ಮಾಣಕ್ಕಾಗಿ ರಮೇಶ ಜಾರಕಿಹೊಳಿ ಪರಿಚಯವಾಗಿತ್ತು. ಸಚಿವರಾಗಿದ್ದರಿಂದ ಅವರ ಮೇಲೆ ನಂಬಿಕೆ ಬಂದು ಮೊಬೈಲ್ ನಂಬರ್ ಕೊಟ್ಟಿದ್ದೆ. ಆದರೆ, ಅವರು ಕರೆ ಮಾಡಿ ಸಲುಗೆಯಿಂದ ಮಾತನಾಡಲಾರಂಭಿಸಿದ್ದರು' ಎಂದು ಹೇಳಿರುವುದಾಗಿ ಗೊತ್ತಾಗಿದೆ.

5ನೇ ಪುಟ ನೋಡಿ

ವಿಡಿಯೊ ಚಿತ್ರೀಕರಿಸಿದ್ದು ನಾನೇ ಎಂದ ಯುವತಿ

'ಸಿ.ಡಿ.ಯಲ್ಲಿರುವ ವಿಡಿಯೊ ಅಸಲಿ. ನನಗೆ ಕೆಲಸ ಕೊಡಿಸಲಾಗದು ಎಂದಿದ್ದ ರಮೇಶ ಜಾರಕಿಹೊಳಿ, ಅಶ್ಲೀಲ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದರು. ಅದರಿಂದ ತುಂಬಾ ನೋವಾಗಿತ್ತು. ಅದಕ್ಕೆ ನಾನೇ, ಇಬ್ಬರು ಸೇರುವ ದೃಶ್ಯಗಳನ್ನು ಚಿತ್ರೀಕರಣ ಮಾಡಿಕೊಂಡಿದ್ದೆ. ಮೂಲ ದೃಶ್ಯವನ್ನೂ ನಿಮಗೆ ನೀಡುತ್ತೇನೆ' ಎಂದು ಯುವತಿ, ತನಿಖಾಧಿಕಾರಿಗೆ ಹೇಳಿರುವುದಾಗಿ ಗೊತ್ತಾಗಿದೆ.

ಮೆರವಣಿಗೆ ರೈತ ಮಹಾಪಂಚಾಯತ್ ಅಂಗವಾಗಿ ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಿಂದ ಸಿಪಿಇಡಿ ಕಾಲೇಜು ಮೈದಾನದವರೆಗೆ ಬುಧವಾರ ನಡೆದ ಮೆರವಣಿಗೆಯಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ದೇವೇಗೌಡ ದಂಪತಿಗೆ ಕೋವಿಡ್



ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಅವರ ಪತ್ನಿ ಚೆನ್ನಮ್ಮ ಅವರಿಗೆ ಕೋವಿಡ್ ತಗುಲಿರುವುದು ದೃಢಪಟ್ಟಿದೆ. ಇಬ್ಬರೂ ನಗರದ ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಚೆನ್ನಮ್ಮ ಅವರಿಗೆ ಜ್ವರ ಕಾಣಿಸಿಕೊಂಡಿತ್ತು. ಅವರ ಗಂಟಲು ಮತ್ತು ಮೂಗಿನ ದ್ರವದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿತ್ತು. ಮಂಗಳವಾರ ಸಂಜೆ ವರದಿ ಬಂದಿದ್ದು, ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿತ್ತು.

5ನೇ ಪುಟ ನೋಡಿ

45 ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಲಸಿಕೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಗುರುವಾರದಿಂದ 45 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಲಿದೆ. ಇದಕ್ಕಾಗಿ 5 ಸಾವಿರ ಕೇಂದ್ರಗಳನ್ನು ಗುರುತಿಸಲಾಗಿದೆ.

ರಾಜ್ಯದಲ್ಲಿ ಜ.16ರಿಂದ ಕೋವಿಡ್ ಲಸಿಕೆ ವಿತರಣೆ ಅಭಿಯಾನ ಪ್ರಾರಂಭವಾಗಿದೆ. ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕೋವಿಡ್ ಯೋಧರು, 60 ವರ್ಷ ಮೇಲ್ಪಟ್ಟವರು ಹಾಗೂ ಕೋವಿಡೇತರ ಕಾಯಿಲೆ ಇರುವ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ನಡೆಯುತ್ತಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿ ಪಡೆದ ಪರಿಣಾಮ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಿಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಸೇರಿದಂತೆ 3 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ವಿತರಣೆ ನಡೆಯುತ್ತಿದೆ.

10ನೇ ಪುಟ ನೋಡಿ

ಲಸಿಕೆ ಪೋಲು ತಗ್ಗಿಸಲು ಸೂಚನೆ

ನವದೆಹಲಿ: ಕೋವಿಡ್–19 ಲಸಿಕೆ ಪೋಲಾಗುವುದಕ್ಕೆ ಕಡಿವಾಣ ಹಾಕಬೇಕು ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಬುಧವಾರ ಸೂಚನೆ ನೀಡಿದೆ.

'ಈ ವರೆಗೆ ರಾಷ್ಟ್ರ ಮಟ್ಟದಲ್ಲಿ ಲಸಿಕೆ ಪೋಲು ಪ್ರಮಾಣ ಶೇ 6ರಷ್ಟಿದೆ. ಈ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇರುವಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿರುವ ಕೇಂದ್ರ, ಲಸಿಕೆಯ ಕೊರತೆ ಇಲ್ಲ ಎಂದೂ ಸ್ಪಷ್ಟಪಡಿಸಿದೆ.

ಎರಡು ವಾರಗಳ ಹಿಂದೆ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಲಸಿಕೆ ಪೋಲಾಗುತ್ತಿರುವ ಕುರಿತು ಪ್ರಸ್ತಾಪಿಸಿದ್ದರು.

ಕೋವಿಡ್: ತಿರುಮಲ ಭಕ್ತರಿಗೆ ಮತ್ತೆ ನಿರ್ಬಂಧ 10

ಸ್ಮಾರಕಗಳ ಪರಿಸರದಲ್ಲಿ ಬಿಟಿಪಿಎಸ್ ಪೈಪ್‌ಲೈನ್ ಕಾಮಗಾರಿ ಸ್ಥಗಿತಕ್ಕೆ ಸೂಚನೆ

ಷರತ್ತು ಉಲ್ಲಂಘಿಸಿ ಕಾಮಗಾರಿ: ರುಜುವಾತು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರದಿಂದ (ಬಿಟಿಪಿಎಸ್) ಹಂಪಿ ಸ್ಮಾರಕಗಳ ಪರಿಸರದಲ್ಲಿ ಕೈಗೆತ್ತಿಕೊಂಡಿರುವ ನೀರಿನ ಪೈಪ್‌ಲೈನ್ ಕಾಮಗಾರಿಯು ಷರತ್ತು ಉಲ್ಲಂಘಿಸಿರುವುದು ತನಿಖೆಯಿಂದ ಸಾಬೀತಾಗಿದೆ.

'ಬಿಟಿಪಿಎಸ್ ಕಾಮಗಾರಿಗೆ ಅಪಸ್ವರ' ಶೀರ್ಷಿಕೆ ಅಡಿ 2020ರ ಅ. 28ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ಅದೇ ದಿನ ಕಾಮಗಾರಿ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು.

ನಂತರ ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರವು ತನಿಖೆಗೆ ಪುರಾತತ್ವ ತಜ್ಞರ ಸಮಿತಿ ರಚಿಸಿತ್ತು. ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಅಧ್ಯಯನ ನಡೆಸಿ, ಬಿಟಿಪಿಎಸ್ ನಿಯಮ ಉಲ್ಲಂಘಿಸಿ ಕಾಮಗಾರಿ ಕೈಗೆತ್ತಿಕೊಂಡಿದೆ ಎಂದು ವರದಿ ನೀಡಿದೆ. ಅದನ್ನು ಆಧರಿಸಿ ಪ್ರಾಧಿಕಾರದ ಆಯುಕ್ತರು, ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಸ್ಥಗಿತಗೊಳಿಸಲು ಸೂಚಿಸಿದ್ದಾರೆ.

ಈ ಬಗ್ಗೆ ಬಿಟಿಪಿಎಸ್ ಕಾರ್ಯನಿರ್ವಾಹಕ ಎಂಜಿನಿಯರ್ ನರೇಂದ್ರ ಕುಮಾರ ಅವರಿಗೆ ಪತ್ರ ಬರೆದು, 'ಪುರಾತತ್ವ ಇಲಾಖೆಯ ಸ್ಮಾರಕವಾದ ಶಿವ ದೇವಾಲಯದಿಂದ 100 ಮೀಟರ್ ಒಳಗೆ ಕಾಮಗಾರಿ ಕೈಗೆತ್ತಿಕೊಂಡಿದ್ದೀರಿ. ತಾಲ್ಲೂಕಿನ ಕಮಲಾಪುರ–ನಲ್ಲಾಪುರ ರಸ್ತೆಯಲ್ಲಿನ ಕೋಟೆ ಗೋಡೆಗೂ ಹಾನಿಯಾಗಿದೆ' ಎಂದು ತಿಳಿಸಿದ್ದಾರೆ.

'ಪೆನುಗೊಂಡ ಮಹಾದ್ವಾರದ ಬಳಿಯ ಕೋಟೆ ಗೋಡೆಯ 100 ಮೀಟರ್‌ನೊಳಗೆ ಕಾಮಗಾರಿ ನಡೆಯುತ್ತಿದೆ. ಸೀತಾರಾಮ ತಾಂಡಾ ಕಡೆಗೆ ಪೈಪ್‌ಲೈನ್ ಅಳವಡಿಸಲು ಕೋಟೆ ಗೋಡೆ ದಾಟಿಯೇ ಹೋಗಬೇಕಾಗುತ್ತದೆ. ಷರತ್ತಿಗೆ ಒಳಪಟ್ಟು ಕಾಮಗಾರಿ ಕೈಗೊಳ್ಳಬೇಕು. ಇಲ್ಲವಾದಲ್ಲಿ ಕಾಮಗಾರಿಗೆ ಕೊಟ್ಟಿರುವ ಅನುಮತಿ ರದ್ದುಗೊಳಿಸಲಾಗುವುದು' ಎಂದು ಎಚ್ಚರಿಸಿದ್ದಾರೆ. ನರೇಂದ್ರ ಕುಮಾರ ಅವರನ್ನು ಸಂಪರ್ಕಿಸಿದಾಗ ಮಾಹಿತಿಗೆ ಲಭ್ಯರಾಗಲಿಲ್ಲ.

ಕರ್ನಾಟಕ ವಿದ್ಯುತ್ ನಿಗಮವೂ (ಕೆಪಿಸಿಎಲ್) ನಾರಾಯಣಪುರ ಜಲಾಶಯದಿಂದ ಬಿಟಿಪಿಎಸ್ ವರೆಗೆ ನೀರಿನ ಪೈಪ್‌ಲೈನ್ ಅಳವಡಿಸುತ್ತಿದೆ. ತಾಲ್ಲೂಕಿನ ಕಮಲಾಪುರ, ನಲ್ಲಾಪುರ, ಚಿನ್ನಾಪುರ ಮೂಲಕ ಪೈಪ್‌ಲೈನ್ ಅಳವಡಿಸಲಾಗುತ್ತಿದೆ. ಈ ಮಾರ್ಗದಲ್ಲಿ ಸ್ಮಾರಕ, ಕೋಟೆಗಳಿವೆ. ಈಗಾಗಲೇ ಕಮಲಾಪುರ ಬಳಿ ನೆಲ ಅಗೆದಿರುವುದರಿಂದ ಕೋಟೆ ಗೋಡೆಗೆ ಹಾನಿಯಾಗಿದೆ.

ಹೊಸಪೇಟೆ ತಾಲ್ಲೂಕಿನ ಕಮಲಾಪುರ ಸಮೀಪ ಬಿಟಿಪಿಎಸ್ ಕೈಗೆತ್ತಿಕೊಂಡಿರುವ ಪೈಪ್‌ಲೈನ್‌ನಿಂದಾಗಿ ಕೋಟೆ ಗೋಡೆ ಬಿದ್ದಿರುವುದು (ಸಂಗ್ರಹ ಚಿತ್ರ)

ವರದಿ ಪರಿಣಾಮ

ತಕ್ಷಣ ಕಾಮಗಾರಿ ನಿಲ್ಲಿಸಲು ಬಿಟಿಪಿಎಸ್‌ಗೆ ತಿಳಿಸಲಾಗಿದೆ. ಷರತ್ತು ಪಾಲಿಸಿದರಷ್ಟೇ ಕೆಲಸಕ್ಕೆ ಅವಕಾಶ ಕಲ್ಪಿಸಲಾಗುವುದು.

ಸಿದ್ದರಾಮೇಶ್ವರ, ಆಯುಕ್ತ, ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ

ಬಿಟಿಪಿಎಸ್, ಗುತ್ತಿಗೆದಾರರ ವಿರುದ್ಧ ಕೇಸ್ ದಾಖಲಿಸಬೇಕು. ಮುಂದೆ ಯಾರೂ ಈ ರೀತಿ ಮಾಡಬಾರದು.

ವಿಶ್ವನಾಥ ಮಾಳಗಿ, ಅಧ್ಯಕ್ಷ, ವಿಜಯನಗರ ಸ್ಮಾರಕ ಸಂಸ್ಕೃತಿ ಸಂರಕ್ಷಣ ಸೇನೆ

ಸಣ್ಣ ಉಳಿತಾಯ ಬಡ್ಡಿ ಕಡಿತ

ನವದೆಹಲಿ (ಪಿಟಿಐ): ಸುಕನ್ಯಾ ಸಮೃದ್ಧಿ ಯೋಜನೆ, ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ) ಸೇರಿದಂತೆ ಹಲವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ವಾರ್ಷಿಕ ಬಡ್ಡಿ ದರವನ್ನು ಕಡಿಮೆ ಮಾಡಲಾಗಿದೆ. ಪರಿಷ್ಕೃತ ಬಡ್ಡಿ ದರಗಳು ಏಪ್ರಿಲ್ 1ರಿಂದ (ಗುರುವಾರ) ಅನ್ವಯ ಆಗಲಿವೆ.

ಪಿಪಿಎಫ್ ಬಡ್ಡಿ ದರ ಕೂಡ ಇಳಿಕೆ ಆಗಿದೆ. ಈ ಇಳಿಕೆಗಳು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ (2021ರ ಜೂನ್ 30ರವರೆಗೆ) ಜಾರಿಯಲ್ಲಿ ಇರಲಿವೆ. ಕಿಸಾನ್ ವಿಕಾಸ ಪತ್ರ ಹೂಡಿಕೆಯ ಅವಧಿ ಇದುವರೆಗೆ 124 ತಿಂಗಳು ಆಗಿತ್ತು. ಇನ್ನು ಮುಂದೆ ಅದು 138 ತಿಂಗಳ ಅವಧಿಯ ಹೂಡಿಕೆ ಆಗಲಿದೆ.

ಸಣ್ಣ ಉಳಿತಾಯ ಯೋಜನೆಗಳ ಮೇಲೆ ಗರಿಷ್ಠ ಶೇ1.1ರವರೆಗೆ ಬಡ್ಡಿ ಇಳಿಕೆ ಆಗಿದೆ. ಈ ಯೋಜನೆಗಳ ಮೇಲಿನ ಬಡ್ಡಿಯನ್ನು ಪ್ರತಿ ಮೂರು ತಿಂಗಳಿಗೆ ಒಮ್ಮೆ ಪರಿಷ್ಕರಣೆ ಮಾಡಲಾಗುತ್ತದೆ.

ವಿವರ 11

ರಾಕೇಶ್ ಸಿಂಗ್ ಬಿಬಿಎಂಪಿಗೆ ನೂತನ ಆಡಳಿತಾಧಿಕಾರಿ

16 ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ



ರಾಕೇಶ್ ಸಿಂಗ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನೂತನ ಆಡಳಿತಾಧಿಕಾರಿ ಹುದ್ದೆಗೆ ಹಿರಿಯ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ರಾಕೇಶ್ ಸಿಂಗ್ ಅವರಿಗೆ ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯ ಜತೆಗೆ ಹೆಚ್ಚುವರಿಯಾಗಿ ಬಿಬಿಎಂಪಿ ಆಡಳಿತಾಧಿಕಾರಿ ಹುದ್ದೆ ನೀಡಲಾಗಿದೆ. ಬಿಬಿಎಂಪಿ ಆಡಳಿತಾಧಿಕಾರಿ ಹುದ್ದೆಯಲ್ಲಿದ್ದ ಗೌರವ್ ಗುಪ್ತಾ ಅವರನ್ನು ಹೊಸದಾಗಿ ಸೃಜಿಸಲಾಗಿರುವ ಬಿಬಿಎಂಪಿ ಮುಖ್ಯ ಆಯುಕ್ತರ ಹುದ್ದೆಗೆ ನೇಮಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ಗುಪ್ತಾ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಬಿಬಿಎಂಪಿ ಆಯುಕ್ತರಾಗಿದ್ದ ಎನ್. ಮಂಜುನಾಥ್ ಪ್ರಸಾದ್ ಅವರನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಈ ಹಿಂದೆ ಅವರು ಇದೇ ಹುದ್ದೆಯಲ್ಲಿದ್ದರು.

ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ ಅವರನ್ನು ಮಹೇಂದ್ರ ಜೈನ್ ಅವರ ನಿವೃತ್ತಿಯಿಂದ ತೆರವಾಗಿದ್ದ ಒಂದನೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ವರ್ಗಾಯಿಸಲಾಗಿದೆ.

ವರ್ಗಾವಣೆ ಪಟ್ಟಿ 5

ನೀರಿನ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಗುರುವಾರ (ಏ.1) ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಿಹರಿಸಲಾಗುವುದು. ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ದಿನದ 24 ಗಂಟೆ ಕಾರ್ಯಾಚರಿಸುವ ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 080- 22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ:8762228888 ಸಂಪರ್ಕಿಸಬಹುದು.

SBI ಭಾರತೀಯ ಸ್ಟೇಟ್ ಬ್ಯಾಂಕ್
ಪ್ರಾಶೀಕ ವ್ಯಾಪಾರ ಕಛೇರಿ, ಆಡಳಿತ ಕಛೇರಿ,-1,ನೆಲ ಮಹಡಿ, ಎಸ್‌ಬಿಐ ಕೆಜಿ ರಸ್ತೆ ಸಂಕೀರ್ಣ, ಬೆಂಗಳೂರು – 560 009
ಇ-ಮೇಲ್: cmcsr1.nw1ao1bng@sbi.co.in, ಮೊಬೈಲ್: 9483471179

ಗುತ್ತಿಗೆ ಆಧಾರದ ಮೇಲೆ ಕಟ್ಟಡಕ್ಕಾಗಿ ಅಧಿಸೂಚನೆ

ಭಾರತೀಯ ಸ್ಟೇಟ್ ಬ್ಯಾಂಕ್ ಸುಮಾರು 280 ಚದರ ವಿಸ್ತೀರ್ಣದ ಪ್ರದೇಶವನ್ನು ಹೊಂದಿರುವ ವಾಣಿಜ್ಯ/ಕಛೇರಿ ಬಳಕೆಗಾಗಿ ಗುತ್ತಿಗೆ ಹಾಗು ಬಾಡಿಗೆ ಆಧಾರದ ಮೇಲೆ ಮಾಲೀಕರಿಗೆ/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಎಸ್‌ಬಿಐ ಶಂಕರಪುರಂ ಶಾಖೆ (40195) ಗಾಗಿ mt. 12, ಬಾಗಿಲು ಸಂಖ್ಯೆ 41, ನಿಗಮದ ಹಳೆಯ ಸಂಖ್ಯೆ 8, ಪ್ರಸ್ತುತ ಸಂಖ್ಯೆ 8/6 'ಶ್ರೇಯಸ್' ನೆಲ ಮಹಡಿ, ರಂಗ ರಾವ್ ರಸ್ತೆ, ಶಂಕರಪುರಂ, ಬೆಂಗಳೂರು– 560 004
ವಿವರವಾದ ಮಾನದಂಡ, ನಿಯಮಗಳು ಮತ್ತು ಷರತ್ತುಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡಿರುವ ತಾಂತ್ರಿಕ ಬಿಡ್ ಅನ್ನು ಸಲ್ಲಿಸುವ ಸ್ವರೂಪವನ್ನು ಎಸ್‌ಬಿಐನ ವೆಬ್ ಸೈಟ್ www.sbi.co.in ಅಥವಾ bank.sbi ನಿಂದ 02.04.2021 ರಿಂದ 15.04.2021 ರವರೆಗೆ ಡೌನ್‌ಲೋಡ್ ಮಾಡಬಹುದು. ತ್ರಾಂತ್ರಿಕ ಬಿಡ್ ಮತ್ತು ಬೆಲೆ ಬಿಡ್ ಅನ್ನು ಎರಡು ಬೇರೆ ಕವರ್‌ಗಳಲ್ಲಿ, ಮೊಹರು ಸಮೇತ ಪ್ರತ್ಯೇಕವಾಗಿ ಎಸ್‌ಬಿಐ ಪ್ರಾದೇಶಿಕ ವ್ಯವಹಾರ ಕೇಂದ್ರ–1, ಆಡಳಿತ ಕಛೇರಿ–1 ನೆಲ ಮಹಡಿ, ಕೆಜಿ ರಸ್ತೆ, ಬೆಂಗಳೂರು–9 ಗೆ 15.04.2021 ರಂದು ಸಂಜೆ 4 ಗಂಟೆಯೊಳಗಾಗಿ ಸಲ್ಲಿಸಬೇಕು, ದಲ್ಲಾಳಿಗಳಿಗಳು ಈ ವಹಿವಾಟಿನಲ್ಲಿ ಭಾಗವಹಿಸಲು ಅವಕಾಶವಿಲ್ಲ.
ಸ್ಥಳ :ಬೆಂಗಳೂರು
ದಿನಾಂಕ: 01.04.2021
ಎಸ್‌ಡಿ/ಪ್ರಾದೇಶಿಕ ವ್ಯವಸ್ಥಾಪಕ ಪ್ರದೇಶ–1, ಎಒ–1

ಬೆಂಗಳೂರಿನ ಸಿಎಸ್‌ಐಆರ್–ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್ ಸಂಸ್ಥೆ ವಿನ್ಯಾಸ

ಚಾಲನಾ ತರಬೇತಿಗೆ 'ಹನ್ಸಾ–ಎನ್‌ಜಿ ವಿಮಾನ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ವಿಮಾನಗಳ ಪೈಲಟ್‌ಗಳಿಗೆ ಚಾಲನಾ ತರಬೇತಿಗೆ ಅನುಕೂಲವಾಗುವಂತೆ ಹೊಸ ವಿನ್ಯಾಸ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿರುವ ಎರಡು ಆಸನಗಳುಳ್ಳ 'ಹನ್ಸಾ–ಎನ್‌ಜಿ' ಹೆಸರಿನ ವಿಮಾನವನ್ನು ಬೆಂಗಳೂರಿನ ಸಿಎಸ್‌ಐಆರ್–ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್ (ಎನ್‌ಎಎಲ್) ಸಂಸ್ಥೆಯು ಬುಧವಾರ ಅನಾವರಣಗೊಳಿಸಿತು.

ನಾಗರಿಕ ವಿಮಾನಗಳ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯು 'ಹನ್ಸಾ' ಹೆಸರಿನಲ್ಲಿ ಈಗಾಗಲೇ ಅನೇಕ ವಿಮಾನಗಳನ್ನು ವಿನ್ಯಾಸಗೊಳಿಸಿದ್ದು, ಮಾರುಕಟ್ಟೆಯ ಸಮಕಾಲೀನ ಬೇಡಿಕೆಗಳಿಗೆ ತಕ್ಕಂತೆ ನೂತನ ತಂತ್ರಜ್ಞಾನಗಳನ್ನು ಈ ವಿಮಾನದಲ್ಲಿ ಅಳವಡಿಸಲಾಗಿದೆ. ಇದಕ್ಕಾಗಿ ವಿಮಾನಕ್ಕೆ 'ಹನ್ಸಾ–ನ್ಯೂ ಜನರೇಷನ್' (ಎನ್‌ಜಿ) ಹೆಸರು ಇಡಲಾಗಿದೆ.

ಸಿಎಸ್‌ಐಆರ್‌ಎನ್‌ಎಎಲ್ ವಿನ್ಯಾಸಗೊಳಿಸಿರುವ 'ಹನ್ಸಾ–ಎನ್‌ಜಿ' ವಿಮಾನ –ಪ್ರಜಾವಾಣಿ ಚಿತ್ರ

'2016ರಿಂದ ಭಾರತವು ಅತಿದೊಡ್ಡ ನಾಗರಿಕ ವಿಮಾನಯಾನ ಮಾರುಕಟ್ಟೆಗಳಲ್ಲಿ ಒಂದಾಗಿ ಬೆಳೆದಿದೆ. ಇದರಿಂದ ತರಬೇತಿ ಪಡೆದ ಪೈಲಟ್‌ಗಳಿಗೆ ದೇಶದಲ್ಲಿ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಅನೇಕ ಫ್ಲೈಯಿಂಗ್ ಕ್ಲಬ್‌ಗಳು ಕಡಿಮೆ ವೆಚ್ಚದ ತರಬೇತುದಾರ ವಿಮಾನಗಳನ್ನು ಹುಡುಕುತ್ತಿವೆ. ಇದನ್ನು ಮನಗಂಡ ಸಂಸ್ಥೆಯು ತರಬೇತುದಾರ ವಿಮಾನದ ಬೇಡಿಕೆ ಪೂರೈಸಲು ಹನ್ಸಾ ವಿಮಾನದ ಮಾರ್ಪಾಡಿಗೆ ಮುಂದಾಯಿತು' ಎಂದು ಸಿಎಸ್‌ಐಆರ್-ಎನ್‌ಎಎಲ್ ನಿರ್ದೇಶಕ ಜಿತೇಂದ್ರ ಜೆ.ಜಾಧವ್ ತಿಳಿಸಿದರು.

'ಈ ಸ್ವದೇಶಿ ತರಬೇತಿ ವಿಮಾನ ತಯಾರಿ ಯೋಜನೆಗೆ ಸರ್ಕಾರ 2018ರಲ್ಲಿ ಮಂಜೂರಾತಿ ನೀಡಿತ್ತು. ಗ್ಲಾಸ್ ಕಾಕ್‌ಪಿಟ್ ಒಳಗೊಂಡ ರೆಟ್ರೊ ಶೈಲಿಯ ಹನ್ಸಾ-3 ಹೆಸರಿನ ವಿಮಾನವನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಪ್ರಮಾಣೀಕರಿಸಿದೆ. ಇದನ್ನು 2019ರ ಏರೋ-ಇಂಡಿಯಾದಲ್ಲಿ ಪ್ರದರ್ಶಿಸಲಾಯಿತು' ಎಂದು ಮಾಹಿತಿ ನೀಡಿದರು.

'ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಹನ್ಸಾ-ಎನ್‌ಜಿ ವಿನ್ಯಾಸದಲ್ಲಿ ಮೆಸ್ಕೊ ಏರೋಸ್ಪೇಸ್ ಲಿಮಿಟೆಡ್ ಕೈಜೋಡಿಸಿತು. ಈ ವಿಮಾನವು ಡಿಜಿಟಲ್ ನಿಯಂತ್ರಿತ ರೋಟಾಕ್ಸ್ 912 ಐಎಸ್‌ಸಿ ಎಂಜಿನ್, ಸ್ಮಾರ್ಟ್ ಮಲ್ಟಿ ಫಂಕ್ಷನಲ್ ಡಿಸ್‌ಪ್ಲೇಗಳು (ಪರದೆ), ಗ್ಲಾಸ್ ಕಾಕ್‌ಪಿಟ್, ಬಬಲ್ ಮಾದರಿಯ ಮೇಲಾವರಣದ ವಿನ್ಯಾಸ ಹೊಂದಿದೆ' ಎಂದು ಅವರು ವಿವರಿಸಿದರು.

ಐಜಿಆರ್‌ಯುಎ ಜೊತೆಗೆ ಒಪ್ಪಂದ

'ಹನ್ಸಾ–ಎನ್‌ಜಿ' ವಿಮಾನದ ಮೂಲಕ ಪೈಲಟ್ ತರಬೇತಿಗಾಗಿ ಇಂದಿರಾಗಾಂಧಿ ರಾಷ್ಟ್ರೀಯ ಉರಾನ್ ಅಕಾಡೆಮಿಯು (ಐಜಿಆರ್‌ಯುಎ) ಸಿಎಸ್‌ಐಆರ್-ಎನ್‌ಎಎಲ್ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದು, ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಮಾಡಲಾಯಿತು.

'ಹನ್ಸಾ-ಎನ್‌ಜಿ ತಯಾರಿಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಕಳೆದ ಸೆಪ್ಟೆಂಬರ್‌ನಲ್ಲಿ ಅನುಮೋದನೆ ನೀಡಿತು. ಕೇವಲ ನಾಲ್ಕು ತಿಂಗಳಲ್ಲಿ ವಿಮಾನ ತಯಾರಿಸುವ ಮೂಲಕ ಸಂಸ್ಥೆ ದಾಖಲೆ ಬರೆದಿದೆ. ಈ ವಿಮಾನವನ್ನು 'ವಿಂಗ್ಸ್ ಇಂಡಿಯಾ–2020' ಹಾಗೂ ಏರೊ ಇಂಡಿಯಾ 2021ರಲ್ಲಿ ಪ್ರದರ್ಶಿಸಲಾಯಿತು. ಇದರಿಂದ ಆಕರ್ಷಿತರಾದ ಹಲವಾರು ಫ್ಲೈಯಿಂಗ್ ಕ್ಲಬ್‌ಗಳು 30 ವಿಮಾನಗಳಿಗೆ ಬೇಡಿಕೆ ಸಲ್ಲಿಸಿವೆ' ಎಂದು ಜಿತೇಂದ್ರ ಜೆ.ಜಾಧವ್ ಮಾಹಿತಿ ನೀಡಿದರು.

ವಿಮಾನ ಕೇಂದ್ರಕ್ಕೆ 'ರೊದ್ದಂ ನರಸಿಂಹ' ಹೆಸರು

ಬೆಂಗಳೂರಿನ ಸಿಎಸ್‌ಐಆರ್-ಎನ್‌ಎಎಲ್‌ನ ನಾಗರಿಕ ವಿಮಾನ ಕೇಂದ್ರಕ್ಕೆ ಹಿರಿಯ ವಿಜ್ಞಾನಿ ಪ್ರೊ.ರೊದ್ದಂ ನರಸಿಂಹ ಅವರ ಹೆಸರು ನಾಮಕರಣ ಮಾಡುವ ಮೂಲಕ ವೈಮಾನಿಕ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಗಳನ್ನು ಗೌರವಿಸಲಾಯಿತು.

ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಹಾ ನಿರ್ದೇಶಕ ಶೇಖರ್ ಸಿ.ಮಾಂಡೆ ಅವರು 'ರೊದ್ದಂ ನರಸಿಂಹ ನಾಗರಿಕ ವಿಮಾನ ಕೇಂದ್ರ'ವನ್ನು ಉದ್ಘಾಟಿಸಿದರು.

CONNECT ಕ್ಲಾಸಿಫೈಡ್ಸ್

'ವೀರೇಂದ್ರ ಹೆಗ್ಗಡೆ ವಿರುದ್ಧದ ಆರೋಪ ಸತ್ಯಕ್ಕೆ ದೂರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಸಾವಿರಾರು ಎಕರೆ ಜಮೀನು ಕಬಳಿಸುವ ಹುನ್ನಾರ ಮಾಡಿದ್ದಾರೆ' ಎಂಬ ಆರೋಪ ಸತ್ಯಕ್ಕೆ ದೂರವಾದದ್ದು' ಎಂದು ಕನಕ ಸದ್ಭಾವನ ಜ್ಯೋತಿ ರಥಯಾತ್ರೆ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಗುರುವಾಯನಕೆರೆಯ ಸೋಮನಾಥ್ ನಾಯಕ್ ಅವರು ಕೆಲ ದಿನಗಳ ಹಿಂದೆ ಧರ್ಮಸ್ಥಳದ ಜಮೀನಿನ ಕುರಿತು ಆಧಾರ ರಹಿತವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಮಾಡಿರುವ ಆರೋಪ ಖಂಡನೀಯ' ಎಂದರು.



ಡಿ. ವೀರೇಂದ್ರ ಹೆಗ್ಗಡೆ

'ಸೋಮನಾಥ್ ಅವರಿಗೆ ಸತ್ಯಾಂಶ ತಿಳಿಯಪಡಿಸುವ ಉದ್ದೇಶದಿಂದ ಧರ್ಮಸ್ಥಳಕ್ಕೆ ಸಂಬಂಧಿಸಿದ ಎಲ್ಲ ಜಮೀನು ಪಹಣಿಗಳ 1970ರಿಂದ 2021ರವರೆಗಿನ ಸ್ಥಿತಿಗತಿಯನ್ನು ತಿಳಿಯಲು ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ವೇಳೆ ಎಲ್ಲ ಜಮೀನು ದೇವರ ಹೆಸರಿನಲ್ಲಿದ್ದು, ಯಾವುದೇ ಆಸ್ತಿ ವೀರೇಂದ್ರ ಹೆಗ್ಗಡೆ ಅವರ ಹೆಸರಿಗೆ ಬರೆಸಿಕೊಂಡಿರುವುದು ಪತ್ತೆಯಾಗಿಲ್ಲ' ಎಂದು ಸ್ಪಷ್ಟನೆ ನೀಡಿದರು.

'ಬೆಳ್ತಂಗಡಿಯ ಭೂ-ನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ಪಡೆದುಕೊಂಡು ಅವಲೋಕಿಸಿದಾಗ, ಅಲ್ಲಿಯೂ ದೇವರ ಹೆಸರಿನಲ್ಲೇ ಆಸ್ತಿ ಪತ್ತೆಯಾಗಿದೆ. ಹೆಗ್ಗಡೆ ಅವರು ಮಿತಿಗಿಂತ ಹೆಚ್ಚಿನ ಆಸ್ತಿಯೂ ಹೊಂದಿಲ್ಲ. ಜಾತ್ಯತೀತ ಮನೋಭಾವದ ಹೆಗ್ಗಡೆ ಅವರೇ ತಮ್ಮ ಸಾವಿರಾರು ಎಕರೆ ಭೂಮಿಯನ್ನು ಬಡವರಿಗೆ ಹಂಚಿದ್ದಾರೆ. ಇದು, ಆಧಾರರಹಿತ ಆರೋಪ' ಎಂದರು.

'ಹೆಗ್ಗಡೆ ಪರಂಪರಾಗತ ಸಾವಿರಾರು ಎಕರೆಜಮೀನು ಹೊಂದಿದ್ದಾರೆಎಂದು ಸುಪ್ರೀಂಕೋರ್ಟ್ ಹಾಗೂ ಮೈಸೂರು ನ್ಯಾಯಾಲಯದ ಆದೇಶಗಳಲ್ಲಿ ಉಲ್ಲೇಖವಿದೆ. ಇದನ್ನು, ಸೋಮನಾಥ್ ನಾಯಕ್ ಅವಲೋಕಿಸಿದಂತಿಲ್ಲ' ಎಂದು ದೂರಿದರು.

'ಸೋಮನಾಥ್ ಅವರ ಬಗ್ಗೆ ಮಾಹಿತಿ ಕಲೆಹಾಕಿದಾಗ, ಈ ಆರೋಪದ ಹಿಂದೆ ಕಾಣದ ಕೈಗಳ ಪಾತ್ರ ಇರುವ ಶಂಕೆ ವ್ಯಕ್ತವಾಗಿದೆ. ಬಡವರು ಹಾಗೂ ಸರ್ಕಾರವನ್ನು ವಂಚಿಸಿ, ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ, ಕೋಟಿಗಟ್ಟಲೆ ಲೂಟಿ ಮಾಡಿದ್ದಾರೆ ಎಂಬ ಆರೋಪಗಳೂ ಆ ವ್ಯಕ್ತಿಯ ಮೇಲಿದೆ. ಅನಗತ್ಯ ಆರೋಪದ ದುರುದ್ದೇಶದಿಂದ ಕೂಡಿದ್ದು, ಮತ್ತೊಮ್ಮೆ ಈ ರೀತಿ ನಿರಾಧಾರ ಆರೋಪ ಮಾಡಿದರೆ, ಪರಿಣಾಮ ಎದುರಿಸಬೇಕು' ಎಂದೂ ಎಚ್ಚರಿಸಿದರು.

ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ದಯಾನಂದ್ ಕತ್ತಲ್‌ಸಾರ್, ಕನ್ನಡಪರ ಸಂಘಟನೆಯ ಶಿವಾನಂದ ಶೆಟ್ಟಿ ಹಾಗೂ ಎನ್.ವಿ.ಲಕ್ಷ್ಮೀನಾರಾಯಣ ಇದ್ದರು.

ಈ ಬಾರಿ ಆಸ್ತಿ ತೆರಿಗೆ ತುಸು ದುಬಾರಿ

ಅಂಕಿ ಅಂಶ

₹1421.58 ಕೋಟಿ — ಬಿಬಿಎಂಪಿಗೆ ಚಲನ್ ಮೂಲಕ ಪಾವತಿಯಾಗಿರುವ ಆಸ್ತಿ ತೆರಿಗೆ

₹1355.86 ಕೋಟಿ — ಬಿಬಿಎಂಪಿಗೆ ಆನ್‌ಲೈನ್ ಮೂಲಕ ಪಾವತಿಯಾಗಿರುವ ಆಸ್ತಿ ತೆರಿಗೆ

ಉಪಕರಗಳ ವಿವರ

- 15% ಆರೋಗ್ಯ ಉಪಕರ
- 3% ಭಿಕ್ಷುಕರ ಉಪಕರ
- 6% ಗ್ರಂಥಾಲಯ ಉಪಕರ
- 2% ಭಿಕ್ಷುಕರ ಉಪಕರ

ಮೊದಲ ಪುಟದಿಂದ...

ಗೌತಮ್ ಕುಮಾರ್ ಅವರು ಮೇಯರ್ ಆಗಿದ್ದಾಗ 2020ರ ಜೂನ್‌ನಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿತ್ತು.

ಇದನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಕೌನ್ಸಿಲ್ ಸಭೆಯಲ್ಲಿ ಗದ್ದಲ ಎಬ್ಬಿಸಿದ್ದರು. ಪ್ರತಿಭಟನೆಗೆ ಮಣಿದ ಆಡಳಿತ ಪಕ್ಷವು ಉಪಕರ ವಿಧಿಸುವ ನಿರ್ಣಯವನ್ನು ಹಿಂಪಡೆದಿತ್ತು.

ಗೌರವ ಗುಪ್ತ ಅವರು ಬಿಬಿಎಂಪಿಗೆ ಆಡಳಿತಾಧಿಕಾರಿಯಾಗಿ ನೇಮಕಗೊಂಡ ಬಳಿಕ 2020ರ ಸೆ. 29ರಂದು ನಡೆದ ಸಭೆಯಲ್ಲಿ ಭೂಸಾರಿಗೆ ಉಪಕರ ವಿಧಿಸುವ ಪ್ರಸ್ತಾವವನ್ನು ಮತ್ತೆ ಪಾಲಿಕೆ ಸಭೆಯ ಮುಂದೆ ಆಯುಕ್ತರು ಮಂಡಿಸಿದ್ದರು. ಆಡಳಿತಾಧಿಕಾರಿಯವರು ಇದಕ್ಕೆ ಒಪ್ಪಿಗೆ ಸೂಚಿಸಿದ್ದರು.

ಏಪ್ರಿಲ್‌ನಲ್ಲಿ ತೆರಿಗೆ ಪಾವತಿಸಿದರೆ ಶೇ 5ರಷ್ಟು ರಿಯಾಯಿತಿ

'2021–22ನೇ ಸಾಲಿನ ತೆರಿಗೆ ಪಾವತಿ ಗುರುವಾರದಿಂದಲೇ ಆರಂಭವಾಗಲಿದೆ. ಏಪ್ರಿಲ್ 30ರ ಒಳಗೆ ತೆರಿಗೆ ಪಾವತಿಸುವವರಿಗೆ ತೆರಿಗೆ ಮೊತ್ತದಲ್ಲಿ ಶೇ 5ರಷ್ಟು ರಿಯಾಯಿತಿ ಸಿಗಲಿದೆ. ನಾಗರಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ವಿಶೇಷ ಆಯುಕ್ತ ಎಸ್. ಬಸವರಾಜ್ ತಿಳಿಸಿದರು.

'ಪಾಲಿಕೆಯ ವೆಬ್‌ಸೈಟ್‌ನಲ್ಲಿ (bbmptax.karnataka.gov.in) ಘೋಷಣೆ ಸಲ್ಲಿಸಿ ಆನ್‌ಲೈನ್ ಮೂಲಕ ಅಥವಾ ಬ್ಯಾಂಕ್ ಚಲನ್ ಮೂಲಕ ಆಸ್ತಿತೆರಿಗೆಯನ್ನು ಪಾವತಿಸಬಹುದು. ಚಲನ್‌ಗಳನ್ನು ಕೆನರಾ ಬ್ಯಾಂಕ್, ಎಚ್‌ಡಿಎಫ್‌ಸಿ, ಐ.ಸಿ.ಐ.ಸಿ.ಐ ಮತ್ತು ಆಕ್ಸಿಸ್ ಬ್ಯಾಂಕ್‌ಗಳ ಆಯ್ದ ಶಾಖೆಗಳಲ್ಲಿ (ಶಾಖೆಗಳ ವಿವರಗಳು ಪಾಲಿಕೆ ವೆಬ್‌ಸೈಟ್‌ನಲ್ಲಿ ಲಭ್ಯ) ಪಾವತಿಸಬಹುದು. ಪೇ-ಯು ಅಥವಾ ಹೆಚ್‌ಡಿಎಫ್‌ಸಿ ಗೇಟ್‌ವೇ ಬಳಸಿ ಆನ್‌ಲೈನ್ ಮೂಲಕವೂ ಪಾವತಿಸಬಹುದು' ಎಂದು ಅವರು ಮಾಹಿತಿ ನೀಡಿದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ವಿಶ್ವ ರಂಗಭೂಮಿ ದಿನದ ಪ್ರಯುಕ್ತ ಕಲಾವಿದರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ

ಉದಯಕುಮಾರ್ ಹೆಸರಿನಲ್ಲಿ ರಂಗಮಂದಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಟ ದಿ. ಉದಯಕುಮಾರ್ ಅವರ ಪುತ್ರಿ ರೇಣುಕಾ ಬಾಲಿ ಅವರು ಚುಂಚಘಟ್ಟ ಸಮೀಪದ ಅನ್ನಪೂರ್ಣೇಶ್ವರಿ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿಯೇ 'ಉದಯ ಕಲಾನಿಕೇತನ ಸುವರ್ಣ ರಂಗಮಂದಿರ ಸಭಾಂಗಣ'ವನ್ನು ನಿರ್ಮಿಸಿದ್ದಾರೆ.

ವಿಶ್ವ ರಂಗಭೂಮಿ ದಿನದ ಪ್ರಯುಕ್ತ ಕಲಾವಿದರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕಿರು ರಂಗಮಂದಿರವನ್ನು ಲೋಕಾರ್ಪಣೆ ಮಾಡಲಾಯಿತು.

ಕಲಾ ಕದಂಬ ಆರ್ಟ್ ಸೆಂಟರ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ 'ಪುಣ್ಯಕೋಟಿ' ಯಕ್ಷಗಾನ ನೃತ್ಯ ರೂಪಕವನ್ನು ಪ್ರದರ್ಶಿಸಿದರು.

'ರಂಗಮಂದಿರ ನಿರ್ಮಾಣ ಮಾಡಬೇಕೆಂಬ ಕನಸನ್ನು ತಂದೆ ಹೊಂದಿದ್ದರು. ಕಲಾಪೋಷಕರು ಮತ್ತು ಬಾಡಿಗೆ ಮನೆಯ ಮಾಲೀಕರ ಸಹಕಾರದಿಂದ ಅವರ ಕನಸನ್ನು ಸಾಕಾರ ಮಾಡಲಾಗಿದೆ. ಇಲ್ಲಿ ನಿರಂತರ ಸಾಂಸ್ಕೃತಿಕ ಚಟುವಟಿಕೆ ನಡೆಯುತ್ತಿರಬೇಕು ಎನ್ನುವುದು ನಮ್ಮ ಆಶಯ' ಎಂದು ರೇಣುಕಾ ತಿಳಿಸಿದರು.

ಚಲನಚಿತ್ರ ನಟ ಧರ್ಮ ಹಾಗೂ ನೃತ್ಯ ನಿರ್ದೇಶಕ ಸತ್ಯ ಅವರನ್ನು ಸನ್ಮಾನಿಸಲಾಯಿತು.

ಕಲಾ ಕದಂಬ ಆರ್ಟ್ ಸೆಂಟರ್ ವಿದ್ಯಾರ್ಥಿಗಳು ರಾಧಾಕೃಷ್ಣ ಉರಾಳ ಅವರ ನಿರ್ದೇಶನದಲ್ಲಿ 'ಪುಣ್ಯಕೋಟಿ' ಯಕ್ಷಗಾನ ನೃತ್ಯ ರೂಪಕವನ್ನು ಪ್ರದರ್ಶಿಸಿದರು.

ಗಾಯಕ ಮುರಳೀಧರ ನಾವಡ ಅವರು ರಂಗಗೀತೆ ಹಾಗೂ ಜಾನಪದ ಗೀತೆಗಳನ್ನು ಹಾಡುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಉದಯ ಕಲಾನಿಕೇತನದ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645 / 9745910775

JOB OPPORTUNITIES

Marketing & Sales

WANTED MARKETING executives for leading newspaper Salary 15000/- to 25000/-. 2 wheeler must. Call: 8095400002.

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

General

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

BUSINESS

Business Offers

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

RENTAL PROPERTIES

Accommodation Available

Flats

BRIGADE PANORAMA MYSORE ROAD, 11TH FLOOR, FURNISHED 3 ½ BHK LUXURY APARTMENT LEASE- 23 LAKHS, RENT-21800, 9986033339, 9341823353.

Industrial And Factory

4 ACRES of land Available on 6 lane road NH7 80 km from Bangalore and 40 km from Hosur Suitable for Warehouse and Factories Contact 8056149444

REAL ESTATE SELLING

Industrial & Factory

Kanakapura Road

INDUSTRIAL PLOTS 4000sft to 6500sft for Sale. suitable for Service Station, Garage, Small Scale Industries etc at Jaraganahalli Pipe-line road, Kanakapura Road,near JP Nagar Metro Station. Contact:Verna Developers MG Road. 9620253180/ 08050749740

Sites

Jayanagar

JAYANAGAR T BLOCK BDA 60X40 Site for Sale East Facing, 40 ft Road Contact- 9880257586, 9902726006

Flat

Frazer Town

FRAZER TOWN flat for sale 3BHK 1990 sqft, 2BHK 1250 sqft backup/ carpark. Contact. 9845055346.

PERSONAL

Change of Name

I, MOHAMMED Osama Shiraz P.S S/o Shabbeer Ahmed Panakki Mohammed aged about 25 years Residing at No. 412, 14th Main Road, M.C. Layout, Vijayanagar, Bengaluru 560040. have changed my name to MOHAMMED OSAMA SHIRAZ PANAKKI SHABBEER vide affidavit dated 31.03.2021 before notary Sumithra. N Bangalore.

WE, SANKETH Gudur aged about 35 years and my wife Navyasri Gudur aged about 29 years Residing at Srivari, Opp R.R Temple, Devasandra, K.R. Puram, Bangalore 560036. have changed our Son's name from SANAV GUDUR TO SANAV ARYN GUDUR vide affidavit dated 05.06.2020 before notary G. Rajendra, Bengaluru

I, V.N. Raghavendra S/o S.R.Nagaraj, Aged about 43 years, residing at Vokkaleri Village Vokkaleri Hobli, Kolar Taluk & District. I have changed my daughter name from BHUMIKA to BHUMIKA V.R. vide affidavit dated 31.03.2021 before Notary Venkateshappa.N Kolar. Henceforth she shall be called as BHUMIKA V.R. only

I, DURGA Bai W/o Late. Kulothungan R aged about 65 years R/a No 327/A, Akilsaran Nivas, 3rd Cross, Goutham Nagar, Bangarpet, Kolar, Karnataka-563122 have changed my name to D DURGA BAI vide affidavit dated 30.03.2021 before notary Y.R. Chandrasekar, Bangalore.

I, HEENA Kauser Rafique Sendu W/o Imtiyaz R/a #11, 16th Cross, Rashad Nagar, Noor Layout, Bangalore-45 have changed my name to HEENA KAUSER vide affidavit dated 31.03.2021 before notary L. Gopalakrishna, Bangalore.

I, AKSHAY S/o Ashok Salimath aged 19 Years Residing at House No 274, 6th Main, Rukmini Nagar, Nagasandra Post, Bangalore 560073 have changed my name to AKSHAY A SALIMATH vide affidavit dated 29.03.2021 before notary Kodi Nagappaya, Bengaluru

I, SRIRAM Srinivas Rao S/o. Venkataiah K residing at #107, Bharathi Nagar, Hunasamaranahalli post, Bangalore-562157 have changed my name to SRINIVAS RAO SRIRAM vide affidavit 30/03/2021 notary D. Sarala Kumari, Bangalore.

I, SHEKAR S/o Sanna Ningappa 34 years R/a #408, B-Block, Lingarajapuram, St. Thomas Town, Bangalore-84 have changed my name to RAJASHEKHAR vide affidavit dated 31.03.2021 before notary Gangaraju, Bangalore.

I, PANKAJA W/o M.D. Ashok Kumar & D/o Krishna Reddy, residing at Halanayakanahalli, Bangalore have changed my name to H.K. PADMAVATHI vide affidavit dated 20-02-2017 before N.Shankar, Notary

Lost

I, RASHMI Mehra D/o. Sunil Mehra Residing at A-1/275, Safdarjung enclave, New Delhi- 110029 have changed my name from RASHMI RAVI RAO to RASHMI MEHRA vide affidavit dated 30/03/2021 before notary A. S. Narayana Reddy, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಮದುವೆಗೆ ಒಪ್ಪದಿದ್ದಕ್ಕೆ ನಾದಿನಿಯನ್ನೇ ಕೊಂದ

ಬೆಂಗಳೂರು: ಆರ್.ಟಿ.ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಝುರಾ (28) ಕೊಲೆ ಪ್ರಕರಣ ಸಂಬಂಧ, ಆರೋಪಿ ನವಾಜ್ ಪಾಷಾನನ್ನು ಪೊಲೀಸರು ಬಂಧಿಸಿದ್ದಾರೆ.

‘ಜಾಲಹಳ್ಳಿ ನಿವಾಸಿಯಾದ ಆರೋಪಿ ನವಾಜ್ ಪಾಷಾ, ಕೊಲೆಯಾದ ಝುರಾ ಅವರ ಅಕ್ಕನ ಪತಿ. ಝುರಾ ಅವರನ್ನು ಮದುವೆಯಾಗುವ ವಿಚಾರವಾಗಿ ಜಗಳ ತೆಗೆದು ಈ ಕೃತ್ಯ ಎಸಗಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮುಂಬೈನ ಝುರಾ, ಅಕ್ಕ ಹಾಗೂ ತಮ್ಮನ ಜೊತೆ ಬೆಂಗಳೂರಿಗೆ ಬಂದಿದ್ದರು. ನಗರದಲ್ಲಿ ನೃತ್ಯಗಾರ್ತಿಯಾಗಿ ಕೆಲಸ ಮಾಡುತ್ತಿದ್ದರು. ಕುಟುಂಬಕ್ಕೆ ಪರಿಚಯವಾಗಿದ್ದ ಆರೋಪಿ ನವಾಜ್, ಅಕ್ಕನನ್ನು ಮದುವೆಯಾಗಿ ಪ್ರತ್ಯೇಕವಾಗಿ ವಾಸವಿದ್ದ. ತಮ್ಮನಿಗೆ ಬೇರೆಡೆ ಕೆಲಸ ಸಿಕ್ಕಿತ್ತು.’

ನವಾಜ್ ಪಾಷಾ

‘ಆರ್.ಟಿ.ನಗರದ ಮನೆಯಲ್ಲಿ ಝುರಾ ಮಾತ್ರ ವಾಸವಿದ್ದರು. ಮಾರ್ಚ್ 26ರಂದು ಮನೆಗೆ ಬಂದಿದ್ದ ಆರೋಪಿ, ಚಾಕುವಿನಿಂದ ಇರಿದು ಝುರಾ ಅವರನ್ನು ಕೊಂದು ಪರಾರಿಯಾಗಿದ್ದ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಮದುವೆಗೆ ಯತ್ನಿಸುತ್ತಿದ್ದ ಆರೋಪಿ: ‘ಅಕ್ಕನನ್ನು ಮದುವೆಯಾಗಿದ್ದ ಆತ, ಝುರಾ ಅವರನ್ನೂ ಎರಡನೇ ಮದುವೆಯಾಗಲು ಯತ್ನಿಸುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಝುರಾ ಬೇರೊಬ್ಬ ಯುವಕನನ್ನು ಇಷ್ಟಪಡುತ್ತಿದ್ದರು. ಮದುವೆಯೂ ನಿಶ್ಚಯವಾಗಿತ್ತು. ಅದೇ ಕಾರಣಕ್ಕೆ ಝುರಾ ಜೊತೆ ಜಗಳ ಮಾಡಿದ್ದ ಆರೋಪಿ, ಅದೇ ವಿಚಾರವಾಗಿಯೇ ಝುರಾ ಅವರನ್ನು ಕೊಂದಿದ್ದ’ ಎಂದು ಹೇಳಿವೆ.

ನಿತ್ಯವೂ ಜಿನುಗುವ ನೀರು, ಮಳೆಯಾದರೆ ಮನೆಗಳಿಗೆ ನೀರು ನುಗ್ಗುವ ಭಯ

ಭೀಮನಕಟ್ಟೆ ಕೆರೆ ಏರಿ ಒಡೆಯುವ ಆತಂಕ

● ಆರ್. ಮಂಜುನಾಥ್

ಬೆಂಗಳೂರು: ಕೆರೆ ಉಳಿಸಿಕೊಳ್ಳಲು ಹಾಗೂ ಅಭಿವೃದ್ಧಿ ಮಾಡಲು ಹೋರಾಡಿದ್ದ ಸ್ಥಳೀಯ ನಾಗರಿಕರು, ಇದೀಗ ಕೆರೆಗೆ ನೀರು ಬರದಿದ್ದರೆ ಸಾಕು ಎನ್ನುತ್ತಿದ್ದಾರೆ. ಏಕೆಂದರೆ, ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಯಾಗಿರುವ ಭೀಮನಕಟ್ಟೆ ಕೆರೆ ಏರಿ ನಾಲ್ಕು ವರ್ಷದಲ್ಲೇ ಒಡೆದು ಹೋಗುವ ಸ್ಥಿತಿ ತಲುಪಿದೆ.

ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿರುವ ಭೀಮನಕಟ್ಟೆ ಕೆರೆಯನ್ನು ₹33.88 ಲಕ್ಷ ವೆಚ್ಚದಲ್ಲಿ 2017ರಲ್ಲಿ ಅಭಿವೃದ್ಧಿ ಮಾಡಲಾಗಿದೆ. ಆದರೆ, 2020ರ ಅಕ್ಟೋಬರ್‌ನಲ್ಲಿ ಸುರಿದ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದೆ, ಕೆರೆಯ ಏರಿ (ಮುಖ್ಯ ದಂಡೆ) ಸಡಿಲಗೊಂಡಿದೆ. ಮೇಲ್ಭಾಗ ಒಡೆದು ಹೋಗಿ ನೀರು ಹರಿದಿತ್ತು. ಈಗಲೂ ಕೆರೆಯ ನೀರು ಜಿನುಗುತ್ತಿದ್ದು, ಪಕ್ಕದ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಬಡಾವಣೆ ನಿವಾಸಿಗಳಲ್ಲಿ ಆತಂಕ ಮೂಡಿಸಿದೆ.

ಕೆ.ಎ. ಶಿವೇಗೌಡ



ಮಾಧವ್ ವಡವಿ

‘ನೀರು ಸಂಗ್ರಹ ಸಾಮರ್ಥ್ಯ ತುಂಬಾ ಕಡಿಮೆ ಇದೆ. ಆದರೂ, ಕೆರೆ ಏರಿ ಮೇಲ್ಭಾಗದಲ್ಲಿ ಒಡೆದುಹೋಗಿದೆ. ಈಗ ನೀರು ಕಡಿಮೆಯಾಗಿದ್ದರೂ ಏರಿಯ ಕೆಳಭಾಗದಿಂದ ಜಿನುಗುತ್ತಲೇ ಇದೆ. ಒಂದು ಮಳೆ ಬಂದು ಹೆಚ್ಚಿನ ನೀರು ಬಂದರೆ, ಏರಿ ಒಡೆದುಹೋಗಿ ಈ ಕೆಳಭಾಗದಲ್ಲಿರುವ ನಿವಾಸಿಗಳಿಗೆಲ್ಲ ಅಪಾಯವಾಗುತ್ತದೆ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಬಾರಿ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ’ ಎಂದು ಭೀಮನಕಟ್ಟೆ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಕೆ.ಎ. ಶಿವೇಗೌಡ ದೂರಿದರು.

ಭೀಮನಕಟ್ಟೆ ಕೆರೆ ಏರಿ ಮೇಲ್ಭಾಗ ಒಡೆದುಹೋಗಿ, ನೀರು ಜಿನುಗುತ್ತಿರುವುದರಿಂದ ಮೂಟೆಗಳನ್ನು ಇಡಲಾಗಿದೆ ಪ್ರಜಾವಾಣಿ ಚಿತ್ರ/ ರಂಜು ಪಿ.

> ಕೆರೆ ಏರಿಯಿಂದ ನೀರು ನಿತ್ಯವೂ ಜಿನುಗುತ್ತಿದೆ. ದುರಸ್ತಿ ಮಾಡಲು 6 ತಿಂಗಳ ಹಿಂದೆ ಮನವಿ ಮಾಡಿದ್ದರೂ ಕ್ರಮ ಕೈಗೊಂಡಿಲ್ಲ
>
> **ಕೆ.ಎ. ಶಿವೇಗೌಡ**
> ಕಾರ್ಯದರ್ಶಿ, ಭೀಮನಕಟ್ಟೆ ಹಿತರಕ್ಷಣಾ ಸಮಿತಿ

> ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವ ಕಳಿಸಲಾಗಿದೆ. ಅನುದಾನ ಮಂಜೂರಾದ ಕೂಡಲೇ ಕೆರೆ ದಂಡೆಯ ದುರಸ್ತಿ ಮಾಡಲಾಗುತ್ತದೆ
>
> **ಬಿ.ಟಿ. ಮೋಹನ್ ಕೃಷ್ಣ,** ಮುಖ್ಯ ಎಂಜಿನಿಯರ್, ಕೆರೆಗಳ ಘಟಕ, ಬಿಬಿಎಂಪಿ

‘ಬಿಬಿಎಂಪಿಯವರು ಒಡೆದುಹೋಗಿರುವ ಏರಿಯ ಕಲ್ಲಿಗೆ ಬಣ್ಣ ಬಳಿದಿದ್ದಾರೆ. ಬಿದ್ದುಹೋಗಿರುವ ಬೇಲಿಗೂ ಬಣ್ಣ ಬಳಿದು, ನಿರ್ವಹಣೆ ಎಂದು ತೋರುತ್ತಿದ್ದಾರೆ. ಏರಿ ದುರಸ್ತಿ ಮಾಡಿ, ಭದ್ರಪಡಿಸಿ ಎಂದು ಪತ್ರ ಬರೆದಿದ್ದರೂ ಯಾರೂ ಕ್ರಮ ಕೈಗೊಂಡಿಲ್ಲ. ಮಳೆಯಾದರೆ ಇಲ್ಲಿನ ಜನರ ಜೀವಕ್ಕೆ ಆಪತ್ತು ಖಂಡಿತ’ ಎಂದು ಭೀಮನಕಟ್ಟೆ ಹಿತರಕ್ಷಣಾ ಸಮಿತಿ ನಿರ್ದೇಶಕ ಮಾಧವ್ ವಡವಿ ಆತಂಕ ವ್ಯಕ್ತಪಡಿಸಿದರು.

‘ಕೆರೆಯ ಅಭಿವೃದ್ಧಿಯೇನೋ ಆಗಿದೆ. ಆದರೆ ಇದರ ನಿರ್ವಹಣೆ ಯಾರೂ ಮಾಡುತ್ತಿಲ್ಲ. ನೆಟ್ಟಿರುವ ಗಿಡ–ಮರಗಳು ಒಣಗಿಹೋಗುತ್ತಿವೆ. ಸ್ಥಳೀಯರೇ ನೀರು ಹಾಕಿ ರಕ್ಷಿಸುತ್ತಿದ್ದಾರೆ. ಕೆರೆ ಕಾವಲಿಗೆ ಗೃಹ ರಕ್ಷಕ ಸಿಬ್ಬಂದಿಯನ್ನು ನೇಮಿಸಿದ್ದಾರೆ. ಆದರೆ ನಿರ್ವಹಣೆಗೆ ಯಾರೂ ಇಲ್ಲ’ ಎಂದು ಸಮಿತಿ ಸದಸ್ಯರು ದೂರಿದರು.

ಆತ್ಮಹತ್ಯೆಗೆ ಯತ್ನಿಸಿದ್ದ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರ ಭಾಗದಲ್ಲಿ ತಮ್ಮ ಕಾರಿನಲ್ಲೇ ಪೆಟ್ರೋಲ್ ಸುರಿದುಕೊಂಡು ಮಂಗಳವಾರ ಸಂಜೆ ಆತ್ಮಹತ್ಯೆಗೆ ಯತ್ನಿಸಿದ್ದ ಚಾಲಕ ಪ್ರತಾಪ್ ಗೌಡ (32), ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಡರಾತ್ರಿ ಅಸುನೀಗಿದ್ದಾರೆ.

ಚಾಲಕ ಪ್ರತಾಪ್

ರಾಮನಗರದ ಪ್ರತಾಪ್, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯಡಿ (ಕೆಎಸ್‌ಟಿಡಿಸಿ) ಗುತ್ತಿಗೆ ಆಧಾರದಲ್ಲಿ ಟ್ಯಾಕ್ಸಿ ಚಲಾಯಿಸುತ್ತಿದ್ದರು. ಆರ್ಥಿಕ ಸಂಕಷ್ಟದಿಂದಾಗಿ ಅವರು ನೊಂದಿದ್ದರು ಎನ್ನಲಾಗಿದೆ.

‘ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರ ಬುಕ್ಕಿಂಗ್ ಕಡಿಮೆಯಾಗಿತ್ತು. ಸಾಲ ಮಾಡಿ ಕಾರು ಖರೀದಿಸಿದ್ದ ಪ್ರತಾಪ್, ಸಾಲದ ಕಂತು ಕಟ್ಟಲಾಗದೇ ಹಾಗೂ ಜೀವನ ನಿರ್ವಹಣೆ ಮಾಡಲಾಗದೇ ಚಿಂತೆಗೀಡಾಗಿದ್ದರು. ಬೇಸತ್ತಿದ್ದ ಅವರು, ವಿಮಾನ ನಿಲ್ದಾಣದ ಹೊರಭಾಗದಲ್ಲಿರುವ ಟ್ಯಾಕ್ಸಿ ನಿಲುಗಡೆ ತಾಣದಲ್ಲಿ ತಮ್ಮ ಕಾರಿನೊಳಗೆ ಕುಳಿತೇ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಸ್ಥಳದಲ್ಲಿದ್ದ ಚಾಲಕರೇ ಅವರನ್ನು ಕಾರಿನಿಂದ ಹೊರಗೆ ತೆಗೆದು ಆಸ್ಪತ್ರೆಗೆ ದಾಖಲಿಸಿದ್ದರು. ದೇಹವೆಲ್ಲ ಸುಟ್ಟಿದ್ದರಿಂದ ಚಿಕಿತ್ಸೆಗೆ ಸ್ಪಂದಿಸದೇ ಅವರು ಸಾವಿಗೀಡಾಗಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ಪ್ರತ್ಯಕ್ಷದರ್ಶಿಗಳ ಹಾಗೂ ಕುಟುಂಬದವರ ಹೇಳಿಕೆ ಪಡೆದು ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿದರು.

‘ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಸ್ವಂತ ಊರಿನಲ್ಲೇ ಅಂತ್ಯಕ್ರಿಯೆ ನಡೆಸುವುದಾಗಿ ಕುಟುಂಬಸ್ಥರು ಹೇಳಿದ್ದಾರೆ’ ಎಂದೂ ಮಾಹಿತಿ ನೀಡಿದರು.

‘₹ 257 ಬಾಕಿ ಇದ್ದಿದ್ದಕ್ಕೆ ಕಪ್ಪುಪಟ್ಟಿಗೆ ಸೇರಿಸಿದ್ದ ಕೆಎಸ್‌ಟಿಡಿಸಿ’

‘ಬುಕ್ಕಿಂಗ್ ಪಡೆಯುವ ಚಾಲಕರು, ನಿಗದಿತ ಗುತ್ತಿಗೆ ಹಣವನ್ನು ಕೆಎಸ್‌ಟಿಡಿಸಿಗೆ ಪಾವತಿಸಬೇಕು. ಅದಕ್ಕಾಗಿ ಕಾರ್ಡ್ ವ್ಯವಸ್ಥೆ ಮಾಡಲಾಗಿದೆ. ಪ್ರತಾಪ್ ಅವರು ಕೇವಲ ₹ 257 ಬಾಕಿ ಉಳಿಸಿಕೊಂಡಿದ್ದರು. ಅಷ್ಟಕ್ಕೇ ಕೆಎಸ್‌ಟಿಡಿಸಿ, ಪ್ರತಾಪ್ ಅವರ ಕಾರ್ಡ್‌ನ್ನು ಕಪ್ಪು ಪಟ್ಟಿಗೆ ಸೇರಿಸಿತ್ತು’ ಎಂದು ಆಪ್ತರೊಬ್ಬರು ‘ಪ್ರಜಾವಾಣಿ’ಗೆ ಹೇಳಿದರು.

‘ರಾಮನಗರದ ಪ್ರತಾಪ್, ಅವಿವಾಹಿತ. ಆರಂಭದಲ್ಲಿ ನಗರದಲ್ಲಿ ಕೊಠಡಿಯನ್ನು ಬಾಡಿಗೆಗೆ ಪಡೆದು ವಾಸವಿದ್ದರು. ಬಾಡಿಗೆ ಕಟ್ಟಲಾಗದೇ ಕೊಠಡಿಯನ್ನು ತೊರೆದಿದ್ದರು. ಕಾರಿನಲ್ಲೇ ಮಲಗುತ್ತಿದ್ದರು. ಟ್ಯಾಕ್ಸಿ ನಿಲುಗಡೆ ತಾಣಗಳಲ್ಲೇ ಸ್ನಾನ ಮಾಡುತ್ತಿದ್ದರು’ ಎಂದರು.

’ನಿಲ್ದಾಣದಲ್ಲಿ 18 ಗಂಟೆಯಿಂದ 20 ಗಂಟೆಯವರೆಗೆ ಕಾಯ್ದರೆ ಒಂದು ಬುಕ್ಕಿಂಗ್ ಸಿಗುತ್ತಿತ್ತು. ಅದರ ಹಣ ಯಾವುದಕ್ಕೂ ಸಾಲುತ್ತಿರಲಿಲ್ಲ. ಊಟಕ್ಕೂ ಪ್ರತಾಪ್ ಪರದಾಡುತ್ತಿದ್ದರು. ಸ್ನೇಹಿತರ ಬಳಿಯೇ ₹ 100 ಹಾಗೂ ₹ 200 ಪಡೆದು ಊಟ ಮಾಡುತ್ತಿದ್ದರು. ಕಾರಿಗೆ ಸಾಲ ನೀಡಿದ್ದ ಫೈನಾನ್ಸ್ ಕಂಪನಿಯವರು ಕಂತು ಪಾವತಿಗಾಗಿ ಕಿರುಕುಳ ನೀಡಲಾರಂಭಿಸಿದ್ದರು. ಇತ್ತ ಬುಕ್ಕಿಂಗ್ ಇಲ್ಲದೆ, ಅತ್ತ ಫೈನಾನ್ಸ್ ಕಂಪನಿ ಕಾಟದಿಂದ ಬೇಸತ್ತು ರೀತಿ ಮಾಡಿಕೊಂಡಿದ್ದಾರೆ. ಈ ಸ್ಥಿತಿ ಬೇರ ಯಾವ ಚಾಲಕರಿಗೂ ಬರಬಾರದು’ ಎಂದೂ ಕಣ್ಣೀರಿಟ್ಟರು.

‘ಸರ್ಕಾರದ ನಿರ್ಲಕ್ಷ್ಯಕ್ಕೆ ಪ್ರತಾಪ್ ಜೀವ ಬಲಿ’

ಚಾಲಕ ಪ್ರತಾಪ್ ಆತ್ಮಹತ್ಯೆ ಸಂಬಂಧ ಸರಣಿ ಟ್ವೀಟ್ ಮಾಡಿರುವ ಎಚ್‌.ಡಿ. ಕುಮಾರಸ್ವಾಮಿ, ‘ಬಾಡಿಗೆ ದೊರೆಯದೇ ಆರ್ಥಿಕ ಸಂಕಷ್ಟಕ್ಕೀಡಾಗಿದ್ದ ಕೆಎಸ್‌ಟಿಡಿಸಿ ಕ್ಯಾಬ್ ಚಾಲಕ ಪ್ರತಾಪ್ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಅವರು ಕೊನೆಯುಸಿರೆಳೆದಿದ್ದಾರೆ. ಪ್ರತಾಪ್ ಅವರ ಸಾವಿನೊಂದಿಗೆ ಕೆಎಸ್‌ಟಿಡಿಸಿ ಚಾಲಕರ ಸಮಸ್ಯೆಗಳು ತೆರೆದುಕೊಂಡಿವೆ’ ಎಂದಿದ್ದಾರೆ.

‘ಕ್ಯಾಬ್ ಉದ್ಯಮದ ದರ ಸಮರ, ಸರ್ಕಾರದ ನಿರ್ಲಕ್ಷ್ಯಕ್ಕೆ ಪ್ರತಾಪ್ ಜೀವ ಬಲಿಯಾಗಿದೆ. ಟ್ಯಾಕ್ಸಿ, ಕ್ಯಾಬ್‌ಗಳಿಗೆ ಸರ್ಕಾರ 1 ಕಿ.ಮೀಗೆ ₹ 24 ದರ ನಿಗದಿ ಮಾಡಿದೆ. ಕೆಎಸ್‌ಟಿಡಿಸಿ ಚಾಲಕರು ಇದನ್ನು ಪಾಲಿಸುತ್ತಿದ್ದರೆ, ಖಾಸಗಿ ಕಂಪನಿಗಳು ನಿಯಮ ಗಾಳಿಗೆ ತೂರಿ ಗ್ರಾಹಕರನ್ನು ಆಕರ್ಷಿಸುತ್ತಿವೆ. ಕೆಎಸ್‌ಟಿಡಿಸಿ ಚಾಲಕರು ಸೊರಗುತ್ತಿದ್ದಾರೆ’ ಎಂದೂ ಹೇಳಿದ್ದಾರೆ.

‘ಕೆಎಸ್‌ಟಿಡಿಸಿ ಕ್ಯಾಬ್‌ಗಳು ದರ ನಿಯಮ ಪಾಲಿಸುತ್ತಿದ್ದರೆ, ಖಾಸಗಿ ಕ್ಯಾಬ್‌ಗಳು ₹9 ದರಕ್ಕೆ ಗ್ರಾಹಕರನ್ನು ಸೆಳೆಯುತ್ತಿವೆ. ಹೀಗಾಗಿ, ಕೆಎಸ್‌ಟಿಡಿಸಿ ಕ್ಯಾಬ್‌ಗಳಿಗೆ ಗ್ರಾಹಕರೇ ಇಲ್ಲದಂತಾಗಿದೆ. ಚಾಲಕರು ಸಮಸ್ಯೆಗೆ ಸಿಲುಕಿದ್ದಾರೆ. ಇದರ ಜೊತೆಗೆ ವಿಮಾನ ನಿಲ್ದಾಣದ ಪಾರ್ಕಿಂಗ್‌ನಲ್ಲೂ ನಡೆಯುತ್ತಿರುವ ರಾಜಕೀಯ ಚಾಲಕರ ಕೊರಳು ಹಿಂಡುತ್ತಿದೆ.’

‘ಸರ್ಕಾರ ದರ ಸಮರದತ್ತ ಕೂಡಲೇ ಗಮನಹರಿಸಬೇಕು. ನಿಯಮ ಪಾಲಿಸದೇ ಮಾರುಕಟ್ಟೆಯಲ್ಲಿ ಅನಗತ್ಯ ಪೈಪೋಟಿ ಸೃಷ್ಟಿ ಮಾಡುತ್ತಿರುವ, ಆ ಮೂಲಕ ಅಮಾಯಕ ಚಾಲಕರ ಪ್ರಾಣ ಕಸಿಯುತ್ತಿರುವ ಖಾಸಗಿ ಕಂಪನಿಗಳಿಗೆ ಎಚ್ಚರಿಕೆ ನೀಡಬೇಕು. ಅದರ ಮೂಲಕ ಅಮಾಯಕ, ಶ್ರಮಜೀವಿ ಕ್ಯಾಬ್ ಚಾಲಕರ ರಕ್ಷಣೆಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದೂ ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಿ ಪ್ರತಿಭಟನೆ

‘ಸರ್ಕಾರದ ನಿರ್ಲಕ್ಷ್ಯವೇ ಪ್ರತಾಪ್ ಆತ್ಮಹತ್ಯೆ ಕಾರಣ’ ಎಂದು ಆರೋಪಿಸುತ್ತಿರುವ ಚಾಲಕರು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ಸಂಚಾರವನ್ನು ಸ್ಥಗಿತಗೊಳಿಸಿ ಬುಧವಾರವೂ ಪ್ರತಿಭಟನೆ ನಡೆಸಿದರು.

ವಿಮಾನ ನಿಲ್ದಾಣದ ಟ್ಯಾಕ್ಸಿ ನಿಲುಗಡೆ ಸ್ಥಳದಲ್ಲಿ ಮಂಗಳವಾರ ಸಂಜೆ ಸೇರಿದ್ದ ಚಾಲಕರು, ರಾತ್ರಿಯಿಡಿ ಪ್ರತಿಭಟನೆ ನಡೆಸಿದ್ದರು. ಬುಧವಾರ ಬೆಳಿಗ್ಗೆಯಿಂದಲೂ ಪ್ರತಿಭಟನೆ ಮುಂದುವರಿಸಿದರು

‘ಓಲಾ, ಉಬರ್ ಹಾಗೂ ಇತರೆ ಕಂಪನಿ ಕಾರುಗಳಲ್ಲಿ ಪ್ರಯಾಣಿಸಲು ಕಿ.ಮೀ.ಗೆ ₹ 10 ದರ ನಿಗದಿ ಮಾಡಲಾಗಿದೆ. ಆದರೆ, ಕೆಎಸ್‌ಟಿಡಿಸಿ ಟ್ಯಾಕ್ಸಿಗಳಲ್ಲಿ ಪ್ರಯಾಣಿಸಲು ಕಿ.ಮೀ.ಗೆ ₹ 24 ದರ ನಿಗದಿಯಾಗಿದೆ. ದರ ಹೆಚ್ಚಾಗಿದ್ದರಿಂದ ಪ್ರಯಾಣಿಕರು, ಕೆಎಸ್‌ಟಿಡಿಸಿ ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿಲ್ಲ. ಇದರಿಂದ ಕೆಎಸ್‌ಟಿಡಿಸಿ ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಪ್ರತಿಭಟನಕಾರರು ದೂರಿದರು.

‘ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಎಲ್ಲ ಟ್ಯಾಕ್ಸಿಗಳಿಗೂ ಒಂದೇ ದರ ನಿಗದಿ ಮಾಡಬೇಕು. ಅಲ್ಲಿಯವರೆಗೂ ಪ್ರತಿಭಟನೆ ಮುಂದುವರಿಸುತ್ತೇವೆ’ ಎಂದೂ ಅವರು ಎಚ್ಚರಿಸಿದರು.

ರಾಮಚಂದ್ರಾಪುರ ಮಠಕ್ಕೆ ಬ್ಲ್ಯಾಕ್‌ಮೇಲ್: ಅರ್ಜಿ ವಜಾ

ಬೆಂಗಳೂರು: ಶ್ರೀರಾಮಚಂದ್ರಾಪುರ ಮಠಕ್ಕೆ ಬ್ಲ್ಯಾಕ್‌ಮೇಲ್ ಮಾಡಿ ₹ 5 ಕೋಟಿ ಬೇಡಿಕೆ ಇಟ್ಟಿದ್ದ ಆರೋಪದಡಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ನಗರದ 64ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ (ಸಿಸಿಎಚ್ 64) ವಜಾ ಮಾಡಿ ಆದೇಶ ಹೊರಡಿಸಿದೆ.

ಮಠದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬರಿಗೆ ಕರೆ ಮಾಡಿದ್ದ ಆರೋಪಿಗಳು, ‘ಮಠದ ಟ್ರಸ್ಟ್‌ನಲ್ಲಿ ಅವ್ಯವಹಾರ ಆಗಿದ್ದು, ಈ ಸಂಬಂಧ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದೇವೆ. ಅದು ಸದ್ಯದಲ್ಲೇ ವಿಚಾರಣೆಗೆ ಬರಲಿದ್ದು, ಮಠದ ಮರ್ಯಾದೆ ಕಳೆಯುತ್ತೇವೆ. ಅರ್ಜಿ ಹಿಂಪಡೆಯಬೇಕಾದರೆ ₹ 5 ಕೋಟಿ ನೀಡಬೇಕು’ ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದರು. ಈ ಬಗ್ಗೆ ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಗಿರಿನಗರ ಠಾಣೆಗೆ ದೂರು ನೀಡಿದ್ದರು.

ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸಿ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದ್ದಾರೆ. ಇದರ ನಡುವೆಯೇ ಆರೋಪಿಗಳಾದ ರಾಜಗೋಪಾಲ ಅಡಿ, ಶೇಷಾನಂದ ವಿಶ್ವೇಶ್ವರ ಅಡಿ, ಗೋಪಾಲ ಸದಾಶಿವ ಗಾಯತ್ರಿ, ಅಮಿತ್ ನಾಡಕರ್ಣಿ ಹಾಗೂ ಗಣಪತಿ ಗಜಾನನ ಹಿರೇ ಅವರು ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ, ಆರೋಪಿಗಳ ಅರ್ಜಿಯನ್ನು ವಜಾ ಮಾಡಿ ಆದೇಶ ಹೊರಡಿಸಿದೆ.

ಬಿಬಿಎಂಪಿ ಆಯುಕ್ತರು ಇಂದಿನಿಂದ ‘ಮುಖ್ಯ ಆಯುಕ್ತರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಆಯುಕ್ತರು ಇನ್ನು ಮುಖ್ಯ ಆಯುಕ್ತರು. ವಲಯಗಳ ಉಸ್ತುವಾರಿ ಹೊಣೆ ಹೊತ್ತಿದ್ದ ವಿಶೇಷ ಆಯುಕ್ತರು ಇನ್ನು ವಲಯ ಆಯುಕ್ತರು. ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಂಟಿ ಆಯುಕ್ತರು ಇನ್ನು ವಲಯ ಜಂಟಿ ಆಯುಕ್ತರು...

2020ರ ಬಿಬಿಎಂಪಿ ಕಾಯ್ದೆಯನುಸಾರ ಹುದ್ದೆಗಳ ಹೆಸರು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ. ಬಿಬಿಎಂಪಿ ಕಾಯ್ದೆ ಜಾರಿಗೆ ಸರ್ಕಾರ 2021ರ ಜ.11ರಿಂದಲೇ ಜಾರಿಗೆ ಬಂದಿದೆ. ಆದರೆ ಹೊಸ ಕಾಯ್ದೆ ಪ್ರಕಾರ ಬಿಬಿಎಂಪಿ ಹುದ್ದೆಗಳ ಹೆಸರು ಬದಲಾವಣೆಗೆ ಸರ್ಕಾರ ಪ್ರತ್ಯೇಕ ಅಧಿಸೂಚನೆ ಹೊರಡಿಸಿರಲಿಲ್ಲ. ಆಡಳಿತಕ್ಕೆ ಸಂಬಂಧಿಸಿದ ಗೊಂದಲಗಳು ಮುಂದುವರಿದಿದ್ದವು. ಈ ಬಗ್ಗೆ ‘ಪ್ರಜಾವಾಣಿ’ ಜ.12ರ ಸಂಚಿಕೆಯಲ್ಲಿ ‘ಬಿಬಿಎಂಪಿ ಕಾಯ್ದೆ– ಬೈಲಾ ಗೊಂದಲ’ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಆ ಬಳಿಕ ನಗರಾಭಿವೃದ್ಧಿ ಇಲಾಖೆಯು ಈ ಗೊಂದಲಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಸ್ತಾವನೆ ಕಳುಹಿಸುವಂತೆ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿತ್ತು. ಇದೀಗ ವಿಶೇಷ ಅಧಿಸೂಚನೆ ಹೊರಡಿಸುವ ಮೂಲಕ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ಹುದ್ದೆಗಳಿಗೆ ಹಾಗೂ ಆಡಳಿತಕ್ಕೆ ಸಂಬಂಧಿಸಿ ಗೊಂದಲ ನಿವಾರಣೆಗೆ ಕ್ರಮ ಕೈಗೊಂಡಿದೆ.

‘ಬಿಬಿಎಂಬಿ ಆಯುಕ್ತರ ಹುದ್ದೆಯನ್ನು ಗುರುವಾರದಿಂದ (ಏ. 1ರಿಂದ) ‘ಮುಖ್ಯ ಆಯುಕ್ತ’ರ ಹುದ್ದೆಯನ್ನಾಗಿ ಪರಿವರ್ತಿಸಲಾಗಿದೆ. ವಿಶೇಷ ಆಯುಕ್ತರನ್ನು ವಲಯ ಆಯುಕ್ತರ ಹುದ್ದೆಗಳಿಗೆ ನಿಯೋಜಿಸಲಾಗಿದೆ. ಎಂಟು ವಲಯಗಳ ಜಂಟಿ ಆಯುಕ್ತರ ಹುದ್ದೆಗಳನ್ನು ವಲಯ ಜಂಟಿ ಆಯುಕ್ತರ ಹುದ್ದೆಗಳನ್ನಾಗಿ ಪರಿವರ್ತಿಸಲಾಗಿದೆ’ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

1976ರ ಕರ್ನಾಟಕ ನಗರ ಪಾಲಿಕೆಗಳ ಕಾಯ್ದೆ (ಕೆಎಂಸಿ ಕಾಯ್ದೆ) ಮತ್ತು ಅದರ ಅಡಿ ರಚಿಸಿರುವ ನಿಯಮ, ಹೊರಡಿಸಿರುವ ಅಧಿಸೂಚನೆ ಅಥವಾ ನೇಮಕಾತಿಗಳು ಬಿಬಿಎಂಪಿ ಕಾಯ್ದೆಯ ಉಪಬಂಧಗಳಿಗೆ ಅಸಂಗತವಾಗಿದ್ದರೆ, ಮುಂದಿನ ಆದೇಶದವರೆಗೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 375ರ ಅಡಿ ಕ್ರಮಕೈಗೊಳ್ಳಬೇಕು ಎನ್ನುವ ಮೂಲಕ ಗೊಂದಲಗಳನ್ನು ನಿವಾರಿಸುವ ಪ್ರಯತ್ನ ಮಾಡಲಾಗಿದೆ. ಕೆಎಂಸಿ ಕಾಯ್ದೆ ಪ್ರಕಾರ ಮಾಡಿರುವ ನೇಮಕಾತಿ, ನಿಗದಿಪಡಿಸಿರುವ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರಗಳು ಅಥವಾ ಈ ಕುರಿತು ಹೊರಡಿಸಿರುವ ಆದೇಶಗಳು, ಪತ್ರಗಳು, ಅಧಿಸೂಚನೆಗಳು, ನೀಡಿರುವ ನಿರ್ದೇಶನಗಳು ರಚಿಸಿರುವ ನಿಯಮಗಳು, ರೂಪಿಸಿರುವ ನಮೂನೆಗಳು, ಯೋಜನೆಗಳು ಹಾಗೂ ತೆಗೆದುಕೊಂಡ ಕ್ರಮಗಳು ಮುಂದಿನ ಆದೇಶದವರೆಗೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 376ರ ಅಡಿ ಮುಂದುವರೆಯುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಬಿಬಿಎಂಪಿಗೆ ಸಂಬಂಧಿಸಿದಂತೆ ಸರ್ಕಾರದ ಜೊತೆ ಪತ್ರ ವ್ಯವಹಾವನ್ನು ಮುಖ್ಯ ಆಯುಕ್ತರು ಮಾತ್ರ ನಡೆಸಬಹುದು ಎಂದು ಸ್ಪಷ್ಟಪಡಿಸಲಾಗಿದೆ.

ವಲಯ ಆಯುಕ್ತರ ವಿವರ

ವಲಯ	ವಲಯ ಆಯುಕ್ತರು	ಈಗಿನ ಹುದ್ದೆ
ಪೂರ್ವ	ಮನೋಜ್ ಜೈನ್	ವಿಶೇಷ ಆಯುಕ್ತ (ಯೋಜನೆ)
ಪಶ್ಚಿಮ	ಬಸವರಾಜು ಎಸ್.	ವಿಶೇಷ ಆಯುಕ್ತ (ಕಂದಾಯ)
ದಕ್ಷಿಣ	ತುಳಸಿ ಮದ್ದಿನೇನಿ	ವಿಶೇಷ ಆಯುಕ್ತರು (ಹಣಕಾಸು)
ದಾಸರಹಳ್ಳಿ	ರವೀಂದ್ರ ಎಸ್.ಜಿ	ವಿಶೇಷ ಆಯುಕ್ತರು (ಕಲ್ಯಾಣ)
ಆರ್.ಆರ್. ನಗರ	ಬಿ.ರೆಡ್ಡಿ ಶಂಕರ ಬಾಬು	ವಿಶೇಷ ಆಯುಕ್ತ (ಆಸ್ತಿ, ಶಿಕ್ಷಣ, ಮಾರುಕಟ್ಟೆ)
ಬೊಮ್ಮನಹಳ್ಳಿ	ಪಿ.ರಾಜೇಂದ್ರ ಚೋಳನ್	ವಿಶೇಷ ಆಯುಕ್ತ (ಆರೋಗ್ಯ, ಮಾಹಿತಿ ತಂತ್ರಜ್ಞಾನ)
ಮಹದೇವಪುರ	ಡಿ.ರಂದೀಪ್	ವಿಶೇಷ ಆಯುಕ್ತ (ಕಸ ನಿರ್ವಹಣೆ)
ಯಲಹಂಕ	ಡಿ.ರಂದೀಪ್	ವಿಶೇಷ ಆಯುಕ್ತ (ಆಡಳಿತ)



ಜಂಟಿ ಆಯುಕ್ತರ ಅಧಿಕಾರಕ್ಕೆ ಕತ್ತರಿ

ಇದುವರೆಗೆ ವಲಯಗಳ ಜಂಟಿ ಆಯುಕ್ತರು ಆಯಾ ವಲಯಗಳಿಗೆ ಸಂಬಂಧಿಸಿದಂತೆ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಅಧಿಕಾರ ಹೊಂದಿದ್ದರು. ಕಟ್ಟಡ ನಿರ್ಮಾಣ ಯೋಜನೆಗಳಿಗೆ ಮಂಜೂರಾತಿ ನೀಡುವುದು, ಹಣಕಾಸು ಬಿಡುಗಡೆ ಸೇರಿದಂತೆ ಅನೇಕ ಅಧಿಕಾರಗಳು ಜಂಟಿ ಆಯುಕ್ತರ ಕೈಯಲ್ಲಿದ್ದವು. ಆದರೆ, ಇನ್ನು ವಲಯ ಆಯುಕ್ತರೇ ವಲಯಕ್ಕೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಲಿದ್ದಾರೆ. ವಲಯದಲ್ಲಿ ಎರಡು ಅಧಿಕಾರ ಕೇಂದ್ರಗಳು ನಿರ್ಮಾಣವಾಗುವುದಕ್ಕೆ ಅವಕಾಶ ಇಲ್ಲ. ಹಾಗಾಗಿ, ಸಹಜವಾಗಿಯೇ ಜಂಟಿ ಆಯುಕ್ತರ ಅಧಿಕಾರಕ್ಕೆ ಕತ್ತರಿ ಬೀಳಲಿದೆ.

‘ವಲಯ ಜಂಟಿ ಆಯುಕ್ತ’ರು ಇನ್ನು ‘ವಲಯ ಆಯುಕ್ತ’ರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕು. ಅವರಿಗೆ ನೀಡಬಹುದಾದ ಜವಾಬ್ದಾರಿಗಳನ್ನು 2020ರ ಬಿಬಿಎಂಪಿ ಕಾಯ್ದೆ ಮತ್ತು ಕಾಲ ಕಾಲಕ್ಕೆ ಸರ್ಕಾರ ಹೊರಡಿಸುವ ಆದೇಶ, ಅಧಿಸೂಚನೆ ಅಥವಾ ನಿಯಮಗಳ ಪ್ರಕಾರ ಮುಖ್ಯ ಆಯುಕ್ತರು ಕಚೇರಿ ಆದೇಶ ಹೊರಡಿಸಿ ನಿಗದಿಪಡಿಸಲಿದ್ದಾರೆ. ಈ ಬಗ್ಗೆ ಸರ್ಕಾರಕ್ಕೂ ವರದಿ ಸಲ್ಲಿಸಲಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಬಿಬಿಎಂಪಿ ಜಂಟಿ ಆಯುಕ್ತರ ಆಪ್ತ ಸಹಾಯಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪೂರ್ವ ವಿಭಾಗದ ಜಂಟಿ ಆಯುಕ್ತರ ಆಪ್ತ ಸಹಾಯಕ ರಾಕೇಶ್ ಗೌಡ (33) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಟಿ.ನರಸೀಪುರದ ರಾಕೇಶ್ ಗೌಡ, 12 ವರ್ಷಗಳಿಂದ ಬಿಬಿಎಂಪಿಯಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬಸ್ಥರು ನೀಡಿರುವ ದೂರು ಆಧರಿಸಿ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

ರಾಕೇಶ್‌ಗೌಡ

‘ಪತ್ನಿ ಹಾಗೂ ಮಕ್ಕಳ ಜೊತೆ ರಾಕೇಶ್ ಗೌಡ ವಿಜಯನಗರ ಬಳಿಯ ಮೂಡಲಪಾಳ್ಯದ ಮನೆಯಲ್ಲಿ ವಾಸವಿದ್ದರು. ಅಕ್ಕನ ಮಗಳು, ವಿದ್ಯಾಭ್ಯಾಸಕ್ಕಾಗಿ ಅವರ ಮನೆಯಲ್ಲೇ ಉಳಿದುಕೊಂಡಿದ್ದರು. ಇತ್ತೀಚೆಗೆ ಪತ್ನಿ ಹಾಗೂ ಮಕ್ಕಳು, ಸಂಬಂಧಿಕರ ಊರಿಗೆ ಹೋಗಿದ್ದರು. ಅಕ್ಕನ ಮಗಳು ಮಾತ್ರ ಮನೆಯಲ್ಲಿದ್ದರು.’

‘ಮಂಗಳವಾರ ಕೆಲಸ ಮುಗಿಸಿ ಮನೆಗೆ ಬಂದು ಊಟ ಮಾಡಿ ಮಲಗಿದ್ದ ರಾಕೇಶ್, ಬುಧವಾರ ಮಧ್ಯಾಹ್ನ 12 ಗಂಟೆಯಾದರೂ ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಒಳಗಿನಿಂದ ಲಾಕ್ ಮಾಡಿಕೊಂಡಿದ್ದರು. ಅಕ್ಕನ ಮಗಳು, ಬಾಗಿಲು ಬಡಿದರೂ ತೆಗೆದಿರಲಿಲ್ಲ. ಗಾಬರಿಗೊಂಡ ಆಕೆ, ಅಣ್ಣನನ್ನು ಮನೆಗೆ ಕರೆಸಿದ್ದಳು. ಇಬ್ಬರೂ ಬೀಗ ಮುರಿದು ಬಾಗಿಲು ತೆಗೆದಿದ್ದರು. ಫ್ಯಾನ್‌ಗೆ ರಾಕೇಶ್ ನೇಣು ಹಾಕಿಕೊಂಡಿದ್ದು ಕಂಡಿತ್ತು.’

‘ಉಸಿರಾಡುತ್ತಿರಬಹುದೆಂದು ತಿಳಿದಿದ್ದ ಅವರು, ಸ್ಥಳೀಯರ ನೆರವಿನಿಂದ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ರಾಕೇಶ್ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು’ ಎಂದೂ ಸಂಜೀವ್ ಪಾಟೀಲ ಮಾಹಿತಿ ನೀಡಿದರು.

‘ಯಾರ ಮೇಲೂ ಸಂಶಯವಿಲ್ಲವೆಂದು ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ. ಸಾವಿಗೆ ನಿಖರ ಕಾರಣವೇನು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದೂ ಅವರು ಹೇಳಿದರು.

‘ರಾಕೇಶ್ ಅವರು ವೈಯಕ್ತಿಕ ಸಮಸ್ಯೆಗಳನ್ನು ಹೊಂದಿದ್ದರು. ಅವರು ಸಾಕಿದ್ದ ನಾಯಿಯೊಂದು ಇತ್ತೀಚೆಗೆ ಸತ್ತಿತ್ತು. ಅದರ ಸಾವು ಅವರನ್ನು ಬಹಳವಾಗಿ ಕಾಡಿತ್ತು’ ಎಂದು ಅವರ ಸಹೋದ್ಯೋಗಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

₹22 ಕೋಟಿ ವೆಚ್ಚದಲ್ಲಿ ಪುನರುಜ್ಜೀವನ ಕಾರ್ಯ

ಕಣ್ಮನ ಸೆಳೆಯುವ ಕನಕ ಸರೋವರ

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಕೆರೆ ಆವರಣದಲ್ಲಿ ಸುಂದರ ಉದ್ಯಾನ, ಆಕರ್ಷಕವಾಗಿ ಕಾಣುವ ಹೂವು–ಔಷಧೀಯ ಸಸಿಗಳು, ವಿದೇಶಿ ಪಕ್ಷಿಗಳ ಕಲರವ, ಮೀನುಗಾರಿಕೆ, ದಣಿದು ಬಂದವರಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಕಲ್ಯಾಣಿ, ಸಂಜೆಯ ಇಳಿ ತಂಪು ವಾತಾವರಣದಲ್ಲಿ ಸುಂದರವಾಗಿ ಕಾಣುವ ಕೆರೆಯ ಮಧ್ಯದ ದ್ವೀಪಗಳು...

ಕಲ್ಕೆರೆಯ ಕನಕ ಸರೋವರದ ಪ್ರಮುಖ ವೈಶಿಷ್ಟ್ಯಗಳು ಇವು. ನಗರದ ಅತಿದೊಡ್ಡ ಕೆರೆಗಳಲ್ಲಿ ಒಂದಾದ ಕಲ್ಕೆರೆಯ ಕನಕ ಸರೋವರಕ್ಕೆ ಬಿಬಿಎಂಪಿ ಕಾಯಕಲ್ಪ ನೀಡಿ ಹೊಸರೂಪ ನೀಡಿದ್ದರಿಂದ ಇಲ್ಲಿಗೆ ಬರುವ ಸಾರ್ವಜನಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

‘ಐದು ವರ್ಷಗಳ ಹಿಂದೆ ಕೊಳಚೆ ನೀರಿನ ಕೇಂದ್ರದಂತಿದ್ದ ಕೆರೆಯನ್ನು ಅಭಿವೃದ್ಧಿ ಮಾಡಲು ಬಿಬಿಎಂಪಿ ಕಾಮಗಾರಿ ಕೈಗೆತ್ತಿಕೊಂಡಿತ್ತು. 180 ಎಕರೆ ವಿಸ್ತೀರ್ಣದಲ್ಲಿರುವ ಈ ಕೆರೆಯ ಪುನಶ್ಚೇತನಕ್ಕೆ ₹22 ಕೋಟಿ ಖರ್ಚು ಮಾಡಿದೆ. ₹2 ಕೋಟಿ ವೆಚ್ಚದಲ್ಲಿ ಎಸ್‌ಟಿಪಿ ನಿರ್ಮಾಣ ಮಾಡಿದ್ದರಿಂದ ಈಗ ಶುದ್ಧ ನೀರಿನಿಂದ ಕೆರೆ ತುಂಬಿ ಕಂಗೊಳಿಸುತ್ತಿದೆ. ಅಂತರ್ಜಲ ಮಟ್ಟ ಹೆಚ್ಚಿದೆ.

ಕೊತ್ತನೂರು, ಬಿಳೇಶಿವಾಲೆ, ಅಗರ, ಬೈರತಿ, ರಾಮಮೂರ್ತಿನಗರ, ಹೆಣ್ಣೂರು, ಬಾಣಸವಾಡಿ, ಹೊರಮಾವು, ಕನಕನಗರ, ಚನ್ನಸಂದ್ರ, ಎನ್‌ಆರ್‌ಐ ಬಡಾವಣೆ ಹಾಗೂ ನಗರದ ಇತರೆಡೆಗಳಿಂದ ಬರುವ ನಾಗರಿಕರು ಕನಕ ಸರೋವರದ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.

ಸುಧಾರಣೆ ಬೇಕು: ‘ಕನಕ ಸರೋವರಕ್ಕೆ ಮಕ್ಕಳಿಗಾಗಿ ಆಟಿಕೆ ವಸ್ತುಗಳನ್ನು ನಿರ್ಮಿಸಬೇಕು. ಕಲ್ಕೆರೆ ಹಾಗೂ ಬಂಜಾರ ಬಡಾವಣೆಯಿಂದ ಬರುವ ವಾಯು ವಿಹಾರಿಗಳ ವಾಹನ ನಿಲ್ಲಿಸಲು ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಅಲ್ಲಲ್ಲಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಬೇಕು. ಭದ್ರತೆಗಾಗಿ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಬೇಕು. ಪ್ರವಾಸೋದ್ಯಮದಿಂದ ದೋಣಿ ವ್ಯವಸ್ಥೆ ಕಲ್ಪಿಸಬೇಕು’ ಎಂದು ಸ್ಥಳೀಯರು ಮನವಿ ಮಾಡುತ್ತಾರೆ.

ಕನಕ ಸರೋವರ

‘ಆಕರ್ಷಣೆಯ ಕೇಂದ್ರ’

‘ಕೆಲವು ವರ್ಷಗಳ ಹಿಂದೆ ವ್ಯವಸಾಯ, ಹೈನುಗಾರಿಕೆ ಮಾಡಲು ಸುತ್ತಮುತ್ತಲಿನ ಗ್ರಾಮಸ್ಥರು ಕಲ್ಕೆರೆಯ ಕನಕ ಸರೋವರವನ್ನು ಆಶ್ರಯಿಸಿದ್ದರು. ಜನರ ಜೀವನಾಡಿಯಾಗಿದ್ದ ಕೆರೆಯ ನೀರನ್ನು ಉಪಯೋಗಿಸಲಾಗುತ್ತಿತ್ತು. ಈಗ ಬಿಬಿಎಂಪಿ ಮಾಡಿದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಬಡಾವಣೆಯ ನಿವಾಸಿಗಳಿಗೆ ಮುಖ್ಯ ವಾಯು ವಿಹಾರ ತಾಣವಾಗಿದೆ. ವಿದೇಶಿ ಪಕ್ಷಿಗಳ ಕಲರವ ಆಕರ್ಷಿಸಿದೆ’ ಎಂದು ಸ್ಥಳೀಯ ನಿವಾಸಿ ಪ್ರಕಾಶ್ ತಿಳಿಸಿದರು.

‘ದಣಿವು ಆದಾಗಲೆಲ್ಲ ವಾಯುವಿಹಾರಕ್ಕಾಗಿ ಇಲ್ಲಿಗೆ ಬರುತ್ತೇನೆ. ಇಲ್ಲಿನ ಹುಲ್ಲು ಹಾಸಿನ ಉದ್ಯಾನ ಸಸ್ಯಕಾಶಿಗೆ ಮನಸೋತಿದ್ದೇನೆ’ ಎಂದು ಖಾಸಗಿ ಕಂಪನಿ ಉದ್ಯೋಗಿ ಶ್ಯಾಮ್ ಸಂತಸ ವ್ಯಕ್ತಪಡಿಸಿದರು.

ಕಲಬುರ್ಗಿ: 41.2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಜಿಲ್ಲೆಯಲ್ಲಿ ಬಿಸಿಲು ಹೆಚ್ಚುತ್ತಲೇ ಇದ್ದು, ಬುಧವಾರ ಗರಿಷ್ಠ ತಾಪಮಾನ 41.2 ಡಿಗ್ರಿ ಸೆಲ್ಸಿಯಸ್ ಇತ್ತು.

ಯಾದಗಿರಿ, ಬಳ್ಳಾರಿ, ಕೊಪ್ಪಳದಲ್ಲಿ 40 ಡಿಗ್ರಿ ಹಾಗೂ ರಾಯಚೂರಿನಲ್ಲಿ 39.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಉತ್ತರ ಕರ್ನಾಟಕದಲ್ಲಿ ಬೆಳಗಾವಿ ಹೊರತುಪಡಿಸಿ ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಕೂಡ 38ರಿಂದ 39 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಈ ಎಲ್ಲ ಜಿಲ್ಲೆಗಳಲ್ಲಿಯೂ ಏಪ್ರಿಲ್ ಮೊದಲ ವಾರದಲ್ಲಿ ಗರಿಷ್ಠ ತಾಪಮಾನ 42 ಡಿಗ್ರಿ ದಾಟಲಿದೆ. ಕಲಬುರ್ಗಿಯಲ್ಲಿ ಈ ತಿಂಗಳಾಂತ್ಯಕ್ಕೆ 44 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ಲೂಟಿಕೋರರ ಸರ್ಕಾರ’

ಬೆಳಗಾವಿ: ‘ದೇಶದಲ್ಲಿರುವುದು ಕಂಪನಿಗಳ ಸರ್ಕಾರ, ಇದರ ಬಾದ್‌ಷಾ ನರೇಂದ್ರ ಮೋದಿ. ಲೂಟಿಕೋರರ ಸರ್ಕಾರ ಇದು’ ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ಟೀಕಿಸಿದರು.

ಅಖಿಲ ಭಾರತ ಸಂಯುಕ್ತ ಕಿಸಾನ್ ಮೋರ್ಚಾದಿಂದ ಕರಾಳ ಕೃಷಿ ಕಾನೂನುಗಳ ವಿರುದ್ಧ ಹಾಗೂ ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಶಾಸನಬದ್ಧಗೊಳಿಸಲು ಆಗ್ರಹಿಸಿ ನಗರದ ಸಿಪಿಇಡಿ ಕಾಲೇಜು ಮೈದಾನದಲ್ಲಿ ಬುಧವಾರ ಆಯೋಜಿಸಿದ್ದ ‘ರೈತ ಮಹಾಪಂಚಾಯತ್’ ಉದ್ದೇಶಿಸಿ ಅವರು ಮಾತನಾಡಿದರು.

‘ಕೇಂದ್ರ ಸರ್ಕಾರವು ಕಾಯ್ದೆಗಳಿಗೆ ತಿದ್ದುಪಡಿ ತರುವ ಮುನ್ನವೇ ಗೋದಾಮುಗಳು ನಿರ್ಮಾಣವಾಗಿವೆ. ಕಂಪನಿಗಳಿಗೆ ಅನುಕೂಲ ಕಲ್ಪಿಸಲು ಮಾಡಿದ ತಿದ್ದುಪಡಿ ಇದು. ಈ ಕಂಪನಿ ಸರ್ಕಾರವನ್ನು ಓಡಿಸಬೇಕು. ಅದಕ್ಕಾಗಿ ಹೋರಾಟ ಮುಂದುವರಿಸಬೇಕು’ ಎಂದು ಹೇಳಿದರು.

ಈ ಕಾರ್ಯಕ್ರಮದ ವಿಡಿಯೊ ನೋಡಿ
ಪ್ರಜಾವಾಣಿ ನೋಡಿಯೊ

‘ಪಿ.ಎಂ ಕಿಸಾನ್ ಸಮ್ಮಾನ್ ಕರ್ನಾಟಕ’: ಹಣದ ನಿರೀಕ್ಷೆಯಲ್ಲಿ ಅನ್ನದಾತರು

ರೈತರ ಕೈಸೇರದ ಎರಡನೇ ಕಂತು

• ರವಿ ಎಸ್.ಬಳೂಟಗಿ

ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ: ರೈತರಿಗೆ ಆರ್ಥಿಕ ನೆರವು ನೀಡಲು ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಜಾರಿಗೊಳಿಸಿರುವ ‘ಪಿ.ಎಂ ಕಿಸಾನ್ ಸಮ್ಮಾನ್ ಕರ್ನಾಟಕ’ ಯೋಜನೆಯ ಎರಡನೇ ಕಂತಿನ ಹಣ ಫಲಾನುಭವಿಗಳ ಖಾತೆಗೆ ಇನ್ನೂ ಜಮೆ ಆಗಿಲ್ಲ.

2020–21ನೇ ಆರ್ಥಿಕ ವರ್ಷದಲ್ಲಿ 2ನೇ ಕಂತಿನಲ್ಲಿ ರಾಜ್ಯದ 51,66,395 ಫಲಾನುಭವಿಗಳಿಗೆ ₹1,033.28 ಕೋಟಿ ಹಣ ಪಾವತಿ ಮಾಡಬೇಕಾಗಿದೆ.

ರೈತರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ವರ್ಷಕ್ಕೆ ₹6,000 ಹಣವನ್ನು ಮೂರು ಸಮಾನ ಕಂತುಗಳಲ್ಲಿ ಹಾಗೂ ರಾಜ್ಯ ಸರ್ಕಾರ ₹4,000ವನ್ನು ಎರಡು ಕಂತುಗಳಲ್ಲಿ ಜಮೆ ಮಾಡುತ್ತಿವೆ. ಕೇಂದ್ರದ ನೆರವು ಖಾತೆಗೆ ಜಮೆಯಾದ ಬಗ್ಗೆ ಮೊಬೈಲ್‌ಗೆ ಸಂದೇಶ ಬಂದಿದೆ.

> **ಧಾರವಾಡ ಜಿಲ್ಲೆಯಲ್ಲಿ 1,17,632 ರೈತರಿಗೆ ಮೊದಲ ಕಂತಿನಲ್ಲಿ ₹23.58 ಕೋಟಿ ಜಮೆ ಮಾಡಲಾಗಿದೆ. ಇವರಿಗೆ 2ನೇ ಕಂತಿನಲ್ಲಿಯೂ ಹಣ ನೀಡಬೇಕಿದ್ದು, ಇನ್ನೂ ಯಾರಿಗೂ ಜಮೆಯಾಗಿಲ್ಲ**
> **ರಾಜಶೇಖರ,** ಬಿಜಾಪುರ ಕೃಷಿ ಇಲಾಖೆಯ ಜಂಟಿ ನಿರ್ದೇಶಕ, ಧಾರವಾಡ

> **₹2,000 ಕಳೆದ ವರ್ಷ ಜುಲೈ ತಿಂಗಳಲ್ಲಿ ಬಂದಿದೆ. 2ನೇ ಕಂತಿನ ಹಣದ ಬಗ್ಗೆ ನನ್ನ ಮೊಬೈಲ್‌ಗೆ ಸಂದೇಶ ಬಂದಿಲ್ಲ. ನಿತ್ಯ ಅಧಿಕಾರಿಗಳನ್ನು ವಿಚಾರಿಸುತ್ತಿದ್ದೇವೆ**
> **ಭಗವಂತಪ್ಪ ಆರ್.ಪುಟ್ಟಣ್ಣವರ**
> ಅಣ್ಣಿಗೇರಿ ರೈತ

ಆದರೆ, ರಾಜ್ಯದಪಾಲು ಖಾತೆಗೆ ಬಾರದಿರುವುದಕ್ಕೆ ಹಲವು ರೈತರು ಬೇಸರ ವ್ಯಕ್ತಪಡಿಸಿದ್ದಾರೆ.

ಸಂಪನ್ಮೂಲ ಕೊರತೆ: ‘ಪಿ.ಎಂ ಕಿಸಾನ್ ಸಮ್ಮಾನ್ ಕರ್ನಾಟಕ’ ಯೋಜನೆಯಡಿ ಆರ್ಥಿಕ ನೆರವು ಪಾವತಿಸಲು ಅನುದಾನ ಬಿಡುಗಡೆ ಆಗಿಲ್ಲ. ಹೆಚ್ಚುವರಿ ಆರ್ಥಿಕ ಸಹಾಯಧನ ಬಿಡುಗಡೆ ಮಾಡಬೇಕು’ ಎಂದು ಕೃಷಿ ಇಲಾಖೆಯ ಆಯುಕ್ತರು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಬಾಕಿಯೂ ಇದೆ: ಹಲವು ರೈತರಿಗೆ ಮೊದಲ ಕಂತಿನ ಹಣವೇ ಇನ್ನೂ ತಲುಪಿಲ್ಲ. ವಿವಿಧ ಜಿಲ್ಲೆಗಳ 56,665 ರೈತರಿಗೆ ₹11.33 ಕೋಟಿ ಬಾಕಿ ನೀಡಬೇಕಾಗಿದೆ. ‘ಬಾಕಿ ಹಣ ಹಾಗೂ ಎರಡನೇ ಕಂತಿನ ನೆರವು ನೀಡಲು ಒಟ್ಟು ₹1,044.61 ಕೋಟಿ ಅನುದಾನದ ಅವಶ್ಯಕತೆ ಇದೆ. ಇದನ್ನು ಬಿಡುಗಡೆ ಮಾಡುವಂತೆ ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ‘ಸಂಪನ್ಮೂಲ ಕ್ರೋಡೀಕರಿಸಲು ಕೋವಿಡ್ ಅಡ್ಡಿಯಾಗಿದೆ. ಇದರಿಂದಾಗಿಯೇ ರೈತರಿಗೆ ನೀಡಲು ಆಗಿಲ್ಲ’ ಎನ್ನುತ್ತವೆ ಮೂಲಗಳು.

‘ಇಲಾಖೆಯ ಪೋರ್ಟಲ್‌ನಲ್ಲಿ ನೋಂದಣಿಯಾಗಿರುವ ರೈತರು ನೀಡಿದ ಮಾಹಿತಿಯನ್ನು ಪರಿಶೀಲನೆ ಮಾಡಲಾಗುತ್ತಿದೆ. ಅನರ್ಹ ರೈತರ ಖಾತೆಗೆ ಹಣವೇನಾದರೂ ಹೋಗಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಇದರಿಂದಾಗಿ ತಡವಾಗಿದೆ’ ಎಂದು ಕೃಷಿ ಇಲಾಖೆಯ ಧಾರವಾಡದ ಜಂಟಿ ನಿರ್ದೇಶಕ ಡಾ.ರಾಜಶೇಖರ ಬಿಜಾಪುರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊದಲ ಕಂತು ಜಮೆಯಾದ ಆರು ತಿಂಗಳ ನಂತರ ಎರಡೇ ಕಂತಿನ ಹಣ ಬರುತ್ತದೆ’ ಎಂದು ಅಣ್ಣಿಗೇರಿಯ ಸಹಾಯಕ ಕೃಷಿ ನಿರ್ದೇಶಕ ಶ್ರೀನಾಥ ಚಿಮ್ಮಲಗಿ ಮಾಹಿತಿ ನೀಡಿದರು.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಗಳಿಂದ ನಾಮಪತ್ರ ಸಲ್ಲಿಕೆ

ರಂಗೇರುತ್ತಿದೆ ಕಸಾಪ ಚುನಾವಣೆ ಅಖಾಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ರಂದು ಚುನಾವಣೆ ನಡೆಯಲಿದ್ದು, ಆಕಾಂಕ್ಷಿಗಳುಉತ್ಸಾಹದಿಂದ ನಾಮಪತ್ರ ಸಲ್ಲಿಸಲಾರಂಭಿಸಿದ್ದಾರೆ.

ಈಗಾಗಲೇ ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾದ ಹಲವರು ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ದೂರದರ್ಶನದ ನಿವೃತ್ತ ಮಹಾ ನಿರ್ದೇಶಕ ಮಹೇಶ್ ಜೋಶಿ, ಕನ್ನಡ ಪರ ಹೋರಾಟಗಾರರಾದ ವ.ಚ. ಚನ್ನೇಗೌಡ, ಸಿ.ಕೆ. ರಾಮೇಗೌಡ, ಕೊಪ್ಪಳದ ಶೇಖರ್‌ಗೌಡ ಮಾಲಿ ಪಾಟೀಲ್, ಸಂಗಮೇಶ ಬಾದವಾಡಗಿ, ಮಾಯಣ್ಣ, ಪ್ರೊ. ಶಿವರಾಜ ಪಾಟೀಲ, ಲೇಖಕಿ ಡಾ. ಸರಸ್ವತಿ ಚಿಮ್ಮಲಗಿ ಸೇರಿದಂತೆ ಕೆಲವರು ಕಾರ್ಯಪ್ರವೃತ್ತರಾಗಿದ್ದಾರೆ.

ವ.ಚ. ಚನ್ನೇಗೌಡ ಹಾಗೂ ಮಹೇಶ್ ಜೋಶಿ ಅವರು ತಮ್ಮ ಬೆಂಬಲಿಗರೊಂದಿಗೆ ಪರಿಷತ್ತಿನ ಕೇಂದ್ರ ಕಚೇರಿಗೆ ಬುಧವಾರ ತೆರಳಿ, ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರಿಗೆ ನಾಮಪತ್ರ ಸಲ್ಲಿಸಿದರು. ಸಂಗಮೇಶ ಬಾದವಾಡಗಿ ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ. ಸಿ.ಕೆ. ರಾಮೇಗೌಡ ಹಾಗೂ ಕಲಬುರ್ಗಿಯ ಸಾಹಿತಿ ಪ್ರೊ. ಶಿವರಾಜ ಪಾಟೀಲ ಅವರು ನಾಮಪತ್ರವನ್ನು ಗುರುವಾರ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಕಳೆದ ವರ್ಷ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ 13 ಮಂದಿ ಸ್ಪರ್ಧಿಸಿದ್ದರು. ಪರಿಷತ್ತಿನ ಬೈಲಾ ಪ್ರಕಾರ 10 ವರ್ಷಗಳ ಹಿಂದಿನಿಂದ ಸದಸ್ಯರಾಗಿರುವವರು ಅಧ್ಯಕ್ಷ ಸ್ಥಾನಕ್ಕೆ, 5 ವರ್ಷಗಳಿಂದ ಸದಸ್ಯರಾಗಿರುವವರು ಜಿಲ್ಲಾ ಮತ್ತು ಗಡಿನಾಡು ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ. ಈ ಬಾರಿ 3 ಲಕ್ಷಕ್ಕೂ ಅಧಿಕ ಮತದಾರರಿದ್ದು, 400ಕ್ಕೂ ಅಧಿಕ ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ.

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲಿಯೂ ಪ್ರತ್ಯೇಕವಾಗಿ ಮತದಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಮತದಾರರ ವಿಳಾಸ ಮತ್ತು ವಿವರಗಳನ್ನು ಸುಲಭವಾಗಿ ಪಡೆದುಕೊಳ್ಳಲು Election kasapa ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಏ.7ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ

- ರಾಜ್ಯ ಘಟಕದ ಅಧ್ಯಕ್ಷ ಹಾಗೂ ಗಡಿನಾಡು ಘಟಕದ ಅಧ್ಯಕ್ಷರ ಸ್ಥಾನಕ್ಕೆ ಮಾ.29ರಿಂದ ಏ.7ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಗುತ್ತಿದೆ.
- ಜಿಲ್ಲಾ ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಸಂಬಂಧಿಸಿದಂತೆ ಆಯಾ ಜಿಲ್ಲಾ ಕೇಂದ್ರದ ತಾಲ್ಲೂಕು ತಹಶೀಲ್ದಾರ್ (ಜಿಲ್ಲಾ ಕಸಾಪ ಚುನಾವಣಾಧಿಕಾರಿಗಳು) ಕಚೇರಿಯಲ್ಲಿ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯುತ್ತಿದೆ.
- ಏ.8ರಂದು ಎಲ್ಲ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏ.12ರ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ಇರಲಿದೆ.
- ಏ.12ರಂದು ಅಂತಿಮವಾಗಿ ಸ್ಪರ್ಧೆಯಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಕಾರ್ಯನಿರ್ವಾಹಕ ಅಭಿಯಂತರರು (ತೋಟಗಾರಿಕೆ)

ಇ–ಟೆಂಡರ ಅಧಿಸೂಚನೆ

ನಂ:ಎಚ್.ಡಿ.ಎಂ.ಸಿ:2505/ಇ–ಟೆಂಡರ್–14/2020–21/267 ದಿನಾಂಕ : 31–03–2021

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪಾಲಿಕೆಯ ಸನ್ 2020–21ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ ಅನುದಾನ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ 1 ಮತ್ತು 2ನೇ ದರ್ಜೆ & ಮೇಲ್ಪಟ್ಟ ಗುತ್ತಿಗೆದಾರರಿಗೆ ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು

1) ಇಂಡೆಂಟ ನಂ– **HDMC/Horti/Tractor-Hire/2020-21/CALL-2,** ರೂ. 10.24 ಲಕ್ಷ, 2ನೇ ದರ್ಜೆ & ಮೇಲ್ಪಟ್ಟು, (12 ತಿಂಗಳು). ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **07–04–2021** ರಂದು ಸಾ. 4.00 ಘಂಟೆ ವರೆಗೆ, ಟೆಂಡರ ತೆರೆಯುವ ದಿನಾಂಕ : **08–04–2021** ರಂದು ಸಾ. 4.30 ಘಂಟೆ ನಂತರ

2) ಇಂಡೆಂಟ ನಂ– **DMA/2020-21/OW/WORK_INDENT114947,** ರೂ. 30.58 ಲಕ್ಷ, 1ನೇ ದರ್ಜೆ (12 ತಿಂಗಳು). ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **15–04–2021** ರಂದು ಸಾ. 4.00 ಘಂಟೆ ವರೆಗೆ, ಟೆಂಡರ ತೆರೆಯುವ ದಿನಾಂಕ : **16–04–2021** ರಂದು ಸಾ. 4.30 ಘಂಟೆ ನಂತರ

ಈ ಮೇಲಿನ ಕಾಮಗಾರಿಗಳನ್ನು ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ. ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು, ಕಾರ್ಯನಿರ್ವಾಹಕ ಅಭಿಯಂತರರು (ತೋಟಗಾರಿಕೆ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ವಿಳಾಸ **http://www.eproc.karnataka.gov.in** ರಲ್ಲಿ ಪಡೆಯಬಹುದು ಅಲ್ಲದೇ **ಸದರಿ ವೆಬ್ ಸೈಟ್‌ನಲ್ಲಿ ಸದರಿ ಟೆಂಡರ್‌ಗಳಿಗೆ ಸಂಬಂಧಿತ ಬದಲಾವಣೆ ಅಥವಾ ತಿದ್ದುಪಡಿಗಳನ್ನು ಕಾಲಕಾಲಕ್ಕೆ ಪ್ರಕಟಿಸಲಾಗುವುದು.** ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **01–04–2021** ರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ತೋಟಗಾರಿಕೆ)
ವಾಸಾಸಂಇ/ಧಾ/ಎಂಸಿಎ/939/2020–21 ಹು.ಧಾ. ಮಹಾನಗರ ಪಾಲಿಕೆ, ಹುಬ್ಬಳ್ಳಿ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
49, 2ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001
ದೂ: 080–22352424/22352525, ಫ್ಯಾಕ್ಸ್: 080–22352626

ಸಂಖ್ಯೆ: ಕೆಟಿಐಎಲ್/ಟೆಂಡರ್‌ನೇಮಕಾತಿ–01/01/2021–22(ಕಾಲ್–2) ದಿನಾಂಕ: 31.03.2021

ಪ್ರಿ–ಕ್ವಾಲಿಫಿಕೇಷನ್ ಟೆಂಡರ್ ಪ್ರಕಟಣೆ

ದ್ವಿಲಕೋಟೆ ಪದ್ಧತಿ [ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ]

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮಕ್ಕೆ **ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕರನ್ನು ಒದಗಿಸುವ ಸಲುವಾಗಿ ಸೂಕ್ತ ಸಮಾಲೋಚಕರನ್ನು ಆಯ್ಕೆ ಮಾಡಿಕೊಳ್ಳಲು** ಆಸಕ್ತ ಮತ್ತು ಅರ್ಹ ಸಂಸ್ಥೆಗಳು/ವ್ಯಕ್ತಿಗಳಿಂದ ಪ್ರಿ–ಕ್ವಾಲಿಫಿಕೇಷನ್ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಆಸಕ್ತ ಸಮಾಲೋಚಕ ಸಂಸ್ಥೆಗಳು ಕೆಟಿಐಎಲ್‌ನೊಂದಿಗೆ ತಮ್ಮ ಪ್ರಸ್ತಾವನೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ವೇದಿಕೆ **https://www.eproc.karnataka.gov.in** ಯ ಮೂಲಕ ಹಿಂದಿರುಗಿಸಲಾಗದ ಪ್ರೊಸೆಸಿಂಗ್ ಶುಲ್ಕ ಪಾವತಿಸಿ ಸಲ್ಲಿಸಬಹುದಾಗಿರುತ್ತದೆ.

ಟೆಂಡರ್ ದಿನಾಂಕಗಳ ವೇಳಾಪಟ್ಟಿಯು ಈ ಕೆಳಕಂಡಂತಿದೆ:

ಬಿಡ್ ಪೂರ್ವ ಸಭೆ ದಿನಾಂಕ	6ನೇ ಏಪ್ರಿಲ್ 2021, 12.00 ಗಂಟೆಗೆ
ಆಕ್ಷೇಪಣೆಗಳು/ಸ್ಪಷ್ಟೀಕರಣಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	7ನೇ ಏಪ್ರಿಲ್ 2021, 17.00 ಗಂಟೆಯವರೆಗೆ
ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	12ನೇ ಏಪ್ರಿಲ್ 2021, 16.00 ಗಂಟೆಯವರೆಗೆ
ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ	15ನೇ ಏಪ್ರಿಲ್ 2021, 11.00 ಗಂಟೆಗೆ
ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ	19ನೇ ಏಪ್ರಿಲ್ 2021, 11.00 ಗಂಟೆಗೆ

ನಿಗದಿತ ವೇಳಾಪಟ್ಟಿಯ ದಿನಾಂಕಗಳನ್ನು ಮುಂದೂಡಿದ ಬಗ್ಗೆ (ಏನಾದರೂ ಇದ್ದಲ್ಲಿ), ನಂತರದ ಅಧಿಸೂಚನೆಗಳ ಬದಲಾವಣೆ, ತಿದ್ದುಪಡಿ ಮತ್ತು ಪ್ರಸ್ತಾವನೆಗಳ ಆಯ್ಕೆ/ತಿರಸ್ಕರಿಸುವುದು ಮುಂತಾದವುಗಳ ಬಗ್ಗೆ ಇ–ಸಂಗ್ರಹಣೆ ವೇದಿಕೆ **https://www.eproc.karnataka.gov.in** ರ ಮೂಲಕ ಮಾತ್ರ ತಿಳಿಸಲಾಗುವುದು ಹಾಗೂ ಈ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ ಈ ಟೆಂಡರ್‌ಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಯಾವುದೇ ಒಂದು ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ಹೊಂದಿರುತ್ತದೆ.

ಅಧಿಸೂಚನೆ ಸಂಬಂಧಿತ ಸ್ಪಷ್ಟೀಕರಣಕ್ಕಾಗಿ ಶ್ರೀ ಹೆಚ್.ಪಿ ಜನಾರ್ಧನ್, ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಟಿ.ಐ.ಎಲ್., ಖನಿಜ ಭವನ, ಬೆಂಗಳೂರು ದೂ:ಸಂಖ್ಯೆ: 080–22352525 ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರಿ
ಪ್ರವಾಸೋದ್ಯಮ ಇಲಾಖೆ

DIPR/DDU/YC/3288/2020-21

ಕೋವಿಡ್–19 – ಗಾಬರಿಪಡುವ ಅಗತ್ಯವಿಲ್ಲ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಳ್ಳಾರಿ ಮಹಾನಗರ ಪಾಲಿಕೆ,

ಆಯುಕ್ತರವರ ಕಛೇರಿ, ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101
ದೂರವಾಣಿ ಸಂಖ್ಯೆ : 08392–273479/278168, ಫ್ಯಾಕ್ಸ್: 08392–273477
ವೆಬ್‌ಸೈಟ್: http://www.bellarycity.mrc.gov.in, ಇ–ಮೇಲ್: bellarycommissioner@yahoo co.in

ಸಂ:ಮನಪಾಬ/ತಾಂತ್ರಿಕ/ವಿ/ಎಲ್‌ಇಡಿ/196/2018–19/(20–21) ದಿನಾಂಕ: 31–03–2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮಾತ್ರ)

ಬಳ್ಳಾರಿ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಸಂಬಂಧ ಸಾಂಪ್ರದಾಯಿಕ ವಿದ್ಯುತ್ ಬೀದಿ ದೀಪಗಳನ್ನು LED ಬೀದಿ ದೀಪಗಳಿಂದ ಬದಲಾಯಿಸಿ, ಬೀದಿ ದೀಪಗಳ ನಿರ್ವಹಣೆಗಾಗಿ ಕೇಂದ್ರಿಕೃತ ನಿರ್ವಹಣೆ ಮತ್ತು ನಿಗಾ ವ್ಯವಸ್ಥೆ (CCMS-Centralised Control and Monitoring System) ಯನ್ನು ಸ್ಥಾಪಿಸಲು Companies Registration Act 1956ರಡಿ ನೋಂದಾಯಿಸಲ್ಪಟ್ಟ ಅರ್ಹ ಮತ್ತು ಆಸಕ್ತ ಬಿಡ್‌ದಾರರು/ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http/:eproc.karnataka.gov.in)** ಮೂಲಕ ಮೇಲೆ ತಿಳಿಸಿದ ಯೋಜನೆಯ ಅನುಷ್ಠಾನಕ್ಕೆ CONCESSIONAIREನ್ನು ನೇಮಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಬಳ್ಳಾರಿ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್‌ನ ಅಂತರ್‌ಜಾಲ ವೆಬ್‌ಸೈಟ್ ವಿಳಾಸ: **http://www.eproc.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್ ನಲ್ಲಿ ಮಾತ್ರ ದಾಖಲಿಸಿ ಪ್ರಕಟಸಲಾಗುವುದು. ಟೆಂಡರ್ ಸಲ್ಲಿಕೆ ಅವಧಿಯ ವಿವರಗಳು ಈ ಕೆಳಗಿನಂತಿವೆ.

(1) Indent No: **CCB / ENG/ ELE /LED/Con Sel/196/ 2018-19 (2)** Name of Work: **SELECTION OF CONCESSIONAIRE FOR IMPLEMENTATION AND MAINTENANCE OF LED STREET LIGHTS AND CENTRALIZED CONTROL & MONITORING SYSTEM THROUGH PUBLIC PRIVATE PARTNERSHIP (PPP) IN BALLARI CITY CORPORATION LIMIT (3)** EMD Amount (In Rupees) **: As per Bid Document (4)** Project Period: **8 months (including monsoon period) and operation and Maintenance for seven years**

(1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **03–04–2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (2) ಪ್ರಿಬಿಡ್ ಮೀಟಿಂಗ್ ದಿನಾಂಕ: **20–04–2021 ರಂದು ಮಧ್ಯಾಹ್ನ 03.30ಕ್ಕೆ, ಆಯುಕ್ತರ ಕಛೇರಿಯಲ್ಲಿ, ಬಳ್ಳಾರಿ,** (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **18–05–2021ರ ಸಂಜೆ 5.00 ಗಂಟೆಯೊಳಗಾಗಿ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21–05–2021 ರಂದು ಬೆಳಿಗ್ಗೆ 11.00 ಗಂಟೆಗೆ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **31–05–2021 ರಂದು ಬೆಳಿಗ್ಗೆ 11.00 ಗಂಟೆಗೆ**

ಸಹಿ/–
ಅಯುಕ್ತರು,
ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/494/2020–21 ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಅಧಿಸೂಚನೆ

ಕೃಷಿ ವಿಶ್ವವಿದ್ಯಾಲಯ, ಧಾರವಾಡದ 34ನೇ ಘಟಿಕೋತ್ಸವವನ್ನು 2021ರ ಮೇ ಅಥವಾ ಜೂನ್ ತಿಂಗಳಿನಲ್ಲಿ ನಡೆಸಲು ನಿರ್ಧರಿಸಲಾಗಿದೆ. ನಿರ್ದಿಷ್ಟ ದಿನಾಂಕ ಹಾಗೂ ಸಮಯವನ್ನು ನಂತರ ಪ್ರಕಟಿಸಲಾಗುವುದು. ಕೃಷಿ ವಿಶ್ವವಿದ್ಯಾಲಯ, ಧಾರವಾಡದಿಂದ **30.04.2021**ರ ವರೆಗೆ ಪದವಿ ಪಡೆದ ಅಭ್ಯರ್ಥಿಗಳು ಈ ಘಟಿಕೋತ್ಸವದಲ್ಲಿ **“ಹಾಜರಾತಿ”** ಇಲ್ಲವೆ **“ಗೈರು ಹಾಜರಾತಿ”**ಯಲ್ಲಿ ಪದವಿ ಸ್ವೀಕರಿಸಲು ಅರ್ಹರಿರುವರು. ಈ ಕುರಿತು ನಿಗದಿತ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.uasd.edu** ನಿಂದ ಪಡೆಯಬಹುದು.

ಸಹಿ/–
ಕುಲಸಚಿವರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ.

ದೂರವಾಣಿ ಸಂಖ್ಯೆ: 08338–275101 ಇ–ಮೇಲ್ : ee.rdws.ckd@gmail.com

ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು1&2:ಟೆಂಡರ್/2020–21/36/2427 ದಿನಾಂಕ: 16.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಣಿ KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Indent No: 28786, 28474, 28813, 28874, 28475, 28477, 28478, 28483.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz,http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಚೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ. **1) ಟೆಂಡರ್ ಪೂರ್ವಬಾವಿ ಸಭ: 26–03–2021** ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ&ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ **2)** ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ 31–03–2021 ರ ಸಾಯಂಕಾಲ 4:00 ಗಂಟೆಯವರೆಗೆ 3)** ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 01–04–2021 ರ ಸಂಜೆ 4:30 ಗಂಟೆಯ ನಂತರ.**

ಸಹಿ/–
ಕಾರ್ಯನಿರ್ವಾಹ ಅಭಿಯಂತರರು
ಗ್ರಾ.ಕು.ನೀ.&ನೈ. ವಿಭಾಗ. ಚಿಕ್ಕೋಡಿ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ.

ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ./ವಿ.ಜಿ.ಪಿ/ಪಿ.ಬಿ/2059–5054/2020–21/06393 ದಿನಾಂಕ: 30.03.2021

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ **2 ಕಾಮಗಾರಿಗಳಿಗೆ** ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 59.58 ಲಕ್ಷಗಳು** ಹಾಗೂ **ರೂ. 58.00 ಲಕ್ಷಗಳು** & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in priscribed format vide GO No. FD/675/Expenditure/12/2020 Bangalore Dated-11/12/2020). ಸದರಿ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಬದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಟೆಂಡರ್‌ಗಳನ್ನು ಸ್ವೀಕರಿಸುವ **ದಿನಾಂಕ: 12.04.2021 ರ ಸಂಜೆ 4.30 ಗಂಟೆಯವರೆಗೆ,** ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 15.04.2021 ರ ಮುಂಜಾನೆ 11.00 ಗಂಟೆಯ** ನಂತರ ಮತ್ತು ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16.04.2021 ರ ಮುಂಜಾನೆ 11.00 ಗಂಟೆಯ** ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಿಜಯಪುರ/675/ಜಿಎ/2020–21 ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿಬಿಎಂಪಿ,
ಕೆ.ಆರ್. ಪುರ ವಿಭಾಗ, ಹಳೇ ಮದ್ರಾಸು ರಸ್ತೆ,
ಕೆ.ಆರ್. ಪುರ, ಬೆಂಗಳೂರು–560036

ನಂ.: ಕಾಪಾಅ/ಕೆಆರ್‌ಪು/ಟೆಂಡರ್/35/2020–21 ದಿನಾಂಕ: 30.03.2021

ದ್ವಿ ಲಕೋಟೆ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಕೆ.ಆರ್. ಪುರ) ಇವರು ಅರ್ಹ ಟೆಂಡರ್‌ದಾರರಿಂದ ಕೆಳಗಿನ ಕಾಮಗಾರಿಗಳಿಗೆ **ಐಟಂ ರೇಟ್** ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿರುವ ಸೂಕ್ತ ದರ್ಜೆಯ ಟೆಂಡರ್‌ದಾರರು ಈ ಕೆಳಗಿನ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)
1	ಕಲ್ಯಾಣಿ ಅಭಿವೃದ್ಧಿ ಕಾಮಗಾರಿಗಳ ಸುಧಾರಣೆಗಳು. (ಕರೆ–2)	150.00
2	**ವಾರ್ಡ್ ನಂ. 26,** ಆರ್.ಎಂ. ನಗರದ ಶಾಂತಿ ಲೇಔಟ್, ಮುನಿಸ್ವಾಮಿ ರೆಡ್ಡಿ ಲೇಔಟ್, ಪುಣ್ಯಭೂಮಿ ಲೇಔಟ್, ಮಂಜುನಾಥ ನಗರ, ಅಕ್ಷಯನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ.	100.00
3	ದೇವಸಂದ್ರ, **ವಾರ್ಡ್ ನಂ. 55**ರ ಡೀಸೆಲ್ ಶೆಡ್ ರಸ್ತೆ ಮತ್ತು ಟೆಂಟ್ ರಸ್ತೆ ಸುತ್ತಮುತ್ತಲ ಪ್ರದೇಶಗಳ ರಸ್ತೆಗಳು, ಪಾದಚಾರಿ ಮಾರ್ಗಗಳು ಹಾಗೂ ಚರಂಡಿಗಳ ಸುಧಾರಣೆಗಳು.	100.00
4	ವಿಜ್ಞಾನ ನಗರ, **ವಾರ್ಡ್ ನಂ. 81**ರ ಸಾಯಿಬಾಬಾ ಲೇಔಟ್‌ಗೆ ಕಾಂಕ್ರೀಟ್ ರಸ್ತೆಗಳನ್ನು ಒದಗಿಸುವುದು.	53.00
	ಇಎಂಡಿ: ಇಎಂಡಿ ಘೋಷಣೆ	

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆ: **05.04.2021** ರಿಂದ. (3) ಪೂರ್ವಭಾವಿ ಸಭೆಯು **08.04.2021ರ ಬೆಳಗ್ಗೆ 11:30 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ, ಕೆ.ಆರ್. ಪುರದಲ್ಲಿ ನಡೆಯಲಿದೆ. (4) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.04.2021ರ ಸಂಜೆ 4:00 ಗಂಟೆ**ವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ **https://eproc.karnataka.gov.in** ಮೂಲಕ ಕಾರ್ಯಪಾಲಕ ಅಭಿಯಂತರರು ಕಛೇರಿ, ಕೆ.ಆರ್. ಪುರ ವಿಭಾಗದಲ್ಲಿ **17.04.2021ರ ಸಂಜೆ 4:00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆ.ಆರ್. ಪುರ ವಿಭಾಗ, ಬಿಬಿಎಂಪಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್‌ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು-560 038.
ಇ-ಮೇಲ್: msmshastryhr@bmrc.co.in ವೆಬ್‌ಸೈಟ್: www.bmrc.co.in

ದಿನಾಂಕ: 01.04.2021

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು ಕೆಳಕಂಡ ಸೇವೆಗೆ ಅರ್ಹ ಟೆಂಡರ್‌ದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಕಾಮಗಾರಿ ಹೆಸರು	ಅಂದಾಜು ವೆಚ್ಚ	ಟೆಂಡರ್ ಭದ್ರತಾ ಮೊತ್ತ	ಟೆಂಡರ್ ದಸ್ತಾವೇಜು ಮಾರಾಟದ ಅವಧಿ	ಬಿಡ್ ಪೂರ್ವ ಸಭೆ ದಿನಾಂಕ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ಟೆಂಡರ್ ದಸ್ತಾವೇಜು ಬೆಲೆ (ರೂ.)	ಗುತ್ತಿಗೆಯ ಕಾಲಾವಧಿ
1	ಬಿಎಂಆರ್‌ಸಿಎಲ್/ ಒ&ಎಂ/ಟಿಒಎಂ/ ಆರ್2ಇ/2021/3 ದಿನಾಂಕ : 01.04.2021	ರೀಚ್–2ರ ವಿಸ್ತರಿಸಿದ ನಿಲ್ದಾಣಗಳಲ್ಲಿ “ಗ್ರಾಹಕ ಸಂಪರ್ಕ ಕೇಂದ್ರ ಮತ್ತು ಟಿಕೆಟ್ ಆಫೀಸ್ ಮೆಷಿನ್ (ಟಿಓಎಂ)” ಸೇವೆಗಳನ್ನು ಒದಗಿಸುವುದು	ರೂ. 4.17 ಕೋಟಿ	ಇರುವುದಿಲ್ಲ ಬಿಡ್‌ದಾರರು ಬಿಡ್ ಭದ್ರತಾ ಘೋಷಣೆ ಫಾರಂ ಸಲ್ಲಿಸಬೇಕು	01.04.2021 ರಿಂದ 17.04.2021 ರವರೆಗೆ	20.04.2021 ರಂದು ಮಧ್ಯಾಹ್ನ 3.00 ಗಂಟೆಗೆ	30.04.2021 ರಂದು ಮಧ್ಯಾಹ್ನ 2.30 ಗಂಟೆವರೆಗೆ	30.04.2021 ರಂದು ಮಧ್ಯಾಹ್ನ 3.00 ಗಂಟೆಗೆ	29,500/–	36 ತಿಂಗಳು

ಕೆಲಸದ ವ್ಯಾಪ್ತಿ, ಅರ್ಹತಾ ಅಗತ್ಯತೆ, ಇತ್ಯಾದಿಗಾಗಿ ಬಿಎಂಆರ್‌ಸಿಎಲ್ ವೆಬ್‌ಸೈಟ್ **www.bmrc.co.in/Tenders** ಪರಿವೀಕ್ಷಿಸಿ.
ಆಸಕ್ತಿಯುಳ್ಳ ಬಿಡ್‌ದಾರರು ಆನ್‌ಲೈನ್ ಮೂಲಕ ಹಣ ಪಾವತಿ ಮಾಡಿದ ನಂತರ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಒ ಮತ್ತು ಎಂ)

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ* ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A861 B592 C437

16 ಟೋಲ್ ಶುಲ್ಕ ಪರಿಷ್ಕರಣೆ ಸದ್ಯಕ್ಕಿಲ್ಲ ● ಸಚಿವ ಸಂಪುಟ ಒಪ್ಪಿದ ಬಳಿಕವೇ ಜಾರಿ

10 ರಾಜ್ಯ ಹೆದ್ದಾರಿಗಳಲ್ಲಿ ಟೋಲ್‌ಗೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಅಭಿವೃದ್ಧಿಪಡಿಸಿರುವ 10 ರಾಜ್ಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಕ್ಕೆ ಸಿದ್ಧತೆ ನಡೆದಿದ್ದು, ಇದಕ್ಕಾಗಿ ವಿವಿಧ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೋಲ್ ಸಂಗ್ರಹಕ್ಕೆ ಸರ್ಕಾರದ ಅನುಮತಿ ನೀಡಬೇಕಿದ್ದು, ಈ ಸಂಬಂಧದ ಪ್ರಸ್ತಾವನೆಗಳು ಬಂದಿವೆ. ಅಭಿವೃದ್ಧಿಪಡಿಸಿರುವ ಹೆದ್ದಾರಿಗಳ ಸ್ಥಿತಿ ಮತ್ತು ಗುಣಮಟ್ಟ ಪರಿಶೀಲನೆ ನಡೆಸಿದ ಬಳಿಕ ಸಚಿವ ಸಂಪುಟ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಕೆಆರ್‌ಡಿಸಿಎಲ್ ನಿರ್ಮಿಸಿರುವ ರಸ್ತೆಗಳು ಒಪ್ಪಂದದಲ್ಲಿ ಅನುಗುಣವಾಗಿ ಗುಣಮಟ್ಟ ಮತ್ತು ಸೌಲಭ್ಯಗಳನ್ನು ಹೊಂದಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲಾಗುವುದು. ಆ ಬಳಿಕವೇ ಸರ್ಕಾರ ಟೋಲ್ ಸಂಗ್ರಹಕ್ಕೆ ಒಪ್ಪಿಗೆ ನೀಡಬೇಕೆ, ಬಿಡಬೇಕೋ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಇದಕ್ಕೆ ಒಂದಷ್ಟು ಸಮಯ ಹಿಡಿಯುತ್ತದೆ' ಎಂದು ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣಾರೆಡ್ಡಿ ಹೇಳಿದರು.

'ಕೆಆರ್‌ಡಿಸಿಎಲ್ ವಿವಿಧ ಏಜೆನ್ಸಿಗಳಿಂದ ಸಾವಿರಾರು ಕೋಟಿ ಸಾಲ ತಂದು ರಸ್ತೆಗಳನ್ನು ಅಭಿವೃದ್ಧಿಪಡಿಸಿವೆ. ಸಾಲವನ್ನು ತೀರಿಸಬೇಕಾದ ಕಾರಣ ಟೋಲ್ ಸಂಗ್ರಹ ಅನಿವಾರ್ಯ' ಎಂದು ಅವರು ಹೇಳಿದರು.

'ಈಗಾಗಲೇ ಟೋಲ್ ಸಂಗ್ರಹಿಸುತ್ತಿರುವ ಹೆದ್ದಾರಿಗಳಲ್ಲಿ ಶುಲ್ಕವನ್ನು ಪರಿಷ್ಕರಿಸುವ ಏಜೆನ್ಸಿಗಳು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿವೆ. ಪ್ರತಿ ವರ್ಷವೂ ಶುಲ್ಕ ಪರಿಷ್ಕರಣೆ ಆಗುತ್ತದೆ. ಪರಿಷ್ಕರಣೆ ಎಂದರೆ ಹೆಚ್ಚಿಸಬೇಕೆಂದೇನೂ ಇಲ್ಲ. ಕಡಿಮೆ ಮಾಡಬಹುದಾಗಿದೆ. ಪರಿಷ್ಕರಣೆಗೆ ಒಪ್ಪಿಗೆ ನೀಡದ ಕಾರಣ ಏಪ್ರಿಲ್ 1 ರಿಂದ ಪರಿಷ್ಕೃತ ದರ ಜಾರಿಯಾಗುವುದಿಲ್ಲ' ಎಂದರು.

ಟೋಲ್ ಬೂತ್‌ಗಳ ನಿರ್ಮಾಣ: ಟೆಂಡರ್ ಪಡೆಯುವ ಏಜೆನ್ಸಿಗಳು ಟೋಲ್ ಬೂತ್ ನಿರ್ಮಿಸಿ ಶುಲ್ಕ ಸಂಗ್ರಹಿಸಬೇಕು. ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ. ಆ ವೇಳೆಗೆ ಸರ್ಕಾರದ ಒಪ್ಪಿಗೆಯೂ ಸಿಗಬಹುದು. ಆ ಬಳಿಕವೇ ಟೋಲ್ ಸಂಗ್ರಹ ಆರಂಭಿಸಲಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಕೆಆರ್‌ಡಿಸಿಎಲ್ ಒಟ್ಟು 26 ಹೆದ್ದಾರಿಗಳನ್ನು ನಿರ್ಮಿಸಿದ್ದು, ಈಗಾಗಲೇ 16 ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಿಸಲಾಗುತ್ತಿದೆ. 10 ಹೆದ್ದಾರಿಗಳನ್ನು ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ. ಇವುಗಳನ್ನು ಟೋಲ್ ವ್ಯಾಪ್ತಿಗೆ ತರಲಾಗುತ್ತಿದೆ ಎಂದರು.

ಬಳಕೆದಾರರ ಆಕ್ಷೇಪ: ರಾಷ್ಟ್ರೀಯ ಹೆದ್ದಾರಿ ಅಲ್ಲದ, ರಾಜ್ಯ ಹೆದ್ದಾರಿಗಳಲ್ಲೂ ಟೋಲ್ ಸಂಗ್ರಹದ ಬಗ್ಗೆ ಬಳಕೆದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆರ್ಥಿಕ ಸಂಕಷ್ಟದ ಮಧ್ಯೆಯೇ 'ಇಷ್ಟು ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಿಸುವುದರಿಂದ ಹೊರೆ ಆಗುತ್ತದೆ ಎಂದಿದ್ದಾರೆ.

'ಹಕ್ಕ ಬುಕ್ಕರು ವಾಲ್ಮೀಕಿ ಸಮುದಾಯದವರು'

ಹೊಸಪೇಟೆ (ವಿಜಯನಗರ): 'ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರಾದ ಹಕ್ಕ ಬುಕ್ಕರು ವಾಲ್ಮೀಕಿ ಸಮಾಜದವರು. ಆದರೆ, ಕುರುಬ ಸಮಾಜದವರು ಅನಗತ್ಯವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಅವರ ಹೆಸರು ಬಳಸಿಕೊಂಡು ಪರಿಶಿಷ್ಟ ಪಂಗಡದ ಮೀಸಲಾತಿ ಪಡೆಯಲು ಯತ್ನಿಸುತ್ತಿದ್ದಾರೆ' ಎಂದು ಹರಿಹರದ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಬಳ್ಳಾರಿ ಜಿಲ್ಲಾ ಧರ್ಮದರ್ಶಿ ಬಿಜಾಯ್ಯ ನಾಯಕ ಆರೋಪಿಸಿದರು.

'ಹಕ್ಕ ಬುಕ್ಕರ ಸವಿನೆನಪಿನಲ್ಲಿ ಏ. 18ರಂದು ವಿಜಯನಗರ ಸಾಮ್ರಾಜ್ಯ ದಿನ ಆಚರಿಸಲಾಗುವುದು ಎಂದು ಕನಕ ಗುರುಪೀಠ ತಿಂಥಿಣಿ ಬ್ರಿಡ್ಜ್ ಪೀಠಾಧಿಪತಿ ಸಿದ್ಧರಾಮಾನಂದಪುರಿ ಸ್ವಾಮೀಜಿ ಇತ್ತೀಚೆಗೆ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು. ಈ ಸಂಬಂಧ ಏ. 5ರಂದು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗುವುದು' ಎಂದು ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹನ್ನೊಂದು ವರ್ಷಗಳ ಹಿಂದೆ ಮಾಜಿ ಸಂಸದ ವಿರೂಪಾಕ್ಷಪ್ಪ ಅವರು ಇದೇ ರೀತಿ ಹೇಳಿಕೆ ನೀಡಿದ್ದರು. ಆಗ ಕೂಡ ವಾಲ್ಮೀಕಿ ಸಮಾಜ ವಿರೋಧ ವ್ಯಕ್ತಪಡಿಸಿತ್ತು. ಹಕ್ಕ ಬುಕ್ಕರು ವಾಲ್ಮೀಕಿ ಸಮುದಾಯದವರು ಎನ್ನುವುದಕ್ಕೆ ಪೂರಕ ದಾಖಲೆಗಳಿವೆ. ಈ ಕುರಿತು ಚರ್ಚೆಗೂ ಸಿದ್ಧ. ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಹಾಗೂ ಕನಕ ಗುರುಪೀಠದ ಸ್ವಾಮೀಜಿ ಚರ್ಚೆಗೆ ಬರಲಿ' ಎಂದರು.

ಬಿಜೆಪಿ ಮುಖಂಡನ ಕಾಟದಿಂದ ಕುಟುಂಬ ದೂರವಾಯ್ತು; ವಕೀಲ ಜಗದೀಶ್

ವಿಡಿಯೊ ಚಿತ್ರೀಕರಣ; ಅಧಿಕಾರಿಗಳ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಜಗದೀಶ್

ಬೆಂಗಳೂರು: 'ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ವಿಡಿಯೊವನ್ನು ಚಿತ್ರೀಕರಿಸಿ ನಿಯಮ ಉಲ್ಲಂಘಿಸಿದ್ದ ಆರೋಪದಡಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಎಸಿಪಿಗಳಾದ ಧರ್ಮೇಂದ್ರ ಹಾಗೂ ಎಂ.ಸಿ. ಕವಿತಾ ಅವರ ವಿರುದ್ಧ ನ್ಯಾಯಾಲಯಕ್ಕೆ ದೂರು ನೀಡಲಾಗಿದೆ' ಎಂದು ಸಂತ್ರಸ್ತೆ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಹೇಳಿದರು.

ಸಾಮಾಜಿಕ ಜಾಲತಾಣದಲ್ಲಿ ನೇರಪ್ರಸಾರದಲ್ಲಿ ಮಾತನಾಡಿದ ಅವರು, ಎಸ್‌ಐಟಿ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಗೆ ಗರಂ ಆದರು.

'ಸಂತ್ರಸ್ತೆ ಮುಖ, ಫೋಟೊ, ವಿಡಿಯೊ ಹಾಗೂ ಯಾವುದೇ ಗುರುತು ಬಹಿರಂಗಪಡಿಸಬಾರದೆಂದು ನಿರ್ಭಯಾ ಪ್ರಕರಣದಲ್ಲಿ ಹೇಳಲಾಗಿದೆ. ಆದರೆ, ಎಸ್‌ಐಟಿ ಅಧಿಕಾರಿಗಳು ಹೇಳಿಕೆ ನೀಡಲು ನ್ಯಾಯಾಲಯಕ್ಕೆ ಬಂದಿದ್ದ ಸಂತ್ರಸ್ತೆಯ ವಿಡಿಯೊವನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದಾರೆ. ಅದನ್ನೇ ಮಾಧ್ಯಮಗಳಿಗೆ ಕೊಟ್ಟಿದ್ದಾರೆ. ಈ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ದೂರು ನೀಡಲಾಗಿದೆ' ಎಂದು ಹೇಳಿದರು.

'ದೂರಿನ ಸ್ವೀಕೃತ ಪ್ರತಿಯನ್ನು ನಗರ ಪೊಲೀಸ್ ಕಮಿಷನರ್ ಅವರಿಗೆ ಕಳುಹಿಸಲಾಗಿದೆ. ಎಸಿಪಿಗಳಿಗೂ ದೂರಿನ ಪ್ರತಿ ಕಳುಹಿಸಲಾಗುವುದು. ಎಸ್‌ಐಟಿ ಅಧಿಕಾರಿಗಳೇ ಸಂತ್ರಸ್ತೆ ಗುರುತು ಸೋರಿಕೆ ಮಾಡಿದ್ದಾರೆ. ವಕೀಲರಾಗಿ ನಾನು ಕರೆದಿದ್ದಕ್ಕೆ ನ್ಯಾಯಾಲಯಕ್ಕೆ ಬಂದಿದ್ದ ಸೂರ್ಯ ಮುಕುಂದರಾಜ್ ಬಗ್ಗೆಯೂ ಇಲ್ಲಸಲ್ಲದ ಸುದ್ದಿ ಹರಿಬಿಟ್ಟಿದ್ದಾರೆ. ಇಂಥವರಿಗೆ ಕಾನೂನಿನಿಂದಲೇ ತಕ್ಕ ಪಾಠ ಕಲಿಸುತ್ತೇನೆ' ಎಂದೂ ಗುಡುಗಿದರು.

ಬಿಜೆಪಿ ಮುಖಂಡನ ಕಾಟದಿಂದ ಕುಟುಂಬ ದೂರವಾಯ್ತು: ಕುಟುಂಬದ ಹಿನ್ನೆಲೆ ಬಗ್ಗೆ ಮಾತನಾಡಿದ ಜಗದೀಶ್, 'ಬಿಜೆಪಿ ಮುಖಂಡ ಮತ್ತು ಪೊಲೀಸರು ಕೊಟ್ಟ ಕಾಟದಿಂದಾಗಿ ನಾನು ಕುಟುಂಬದಿಂದ ದೂರವಾದೆ' ಎಂದರು.

'ಕೊಡಿಗೇಹಳ್ಳಿ ಲೋಕ ಕಲ್ಯಾಣ ಟ್ರಸ್ಟ್ ಜಮೀನು ಪರಭಾರೆ ಮಾಡಿದ್ದ ಈಗಿನ ಸಚಿವ ಆರ್. ಅಶೋಕ ಅವರ ಭಾಮೈದ ಅವರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದಕ್ಕೆ ನನ್ನ ಕುಟುಂಬಕ್ಕೆ ಕೈಹಾಕಿದರು. ನನ್ನ ಮೇಲೆ 13 ಪ್ರಕರಣ ದಾಖಲಿಸಿದರು. ಅವರು ಕೊಟ್ಟ ಹಿಂಸೆಯಿಂದ ನನ್ನ ಹೆಂಡತಿ ದೂರವಾದಳು. ನನ್ನ ಬೆಳೆದ ಮಗ, ತಮ್ಮಂದಿರು ದೂರವಾದರು. ನನ್ನ ತಾಯಿ ಕ್ಯಾನ್ಸರ್ ಬಂದು ಮೃತಪಟ್ಟರು. ಒಂಟಿಯಾಗಿಯೇ ನಾನು ಈ ಷಡ್ಯಂತ್ರಗಳ ವಿರುದ್ಧ ಹೋರಾಟ ಮಾಡಿದ್ದೇನೆ' ಎಂದರು.

'ನನಗೆ ವಿಷ ಹಾಕಿದ್ದರು. ಮಾತು ನಿಂತುಹೋಗಿತ್ತು. ಹಿಮಾಲಯಕ್ಕೆ ಹೋಗಿ ಚಿಕಿತ್ಸೆ ಪಡೆದು ಬಂದಿದ್ದೇನೆ' ಎಂದ ಜಗದೀಶ್, 'ಸಂತ್ರಸ್ತೆ ಪರ ನಿಲ್ಲುವವನು ರೌಡಿ ಶೀಟರ್ ಎನ್ನುವುದಾದರೆ ನಾನು ರೆಡಿ. ಬಿಟ್ಟು ಹೋದ ಮಗ, ಕಳೆದು ಹೋದ ದಿನಗಳ ಬಗ್ಗೆ ಚಿಂತೆ ಇಲ್ಲ. ನಾನು ಹಾಳಾಗುವುದಕ್ಕೂ ರೆಡಿ ಆಗಿದ್ದೇನೆ. ನೀವು ಸಿದ್ಧರಿದ್ದೀರಾ?' ಎಂದು ಪ್ರಶ್ನಿಸಿದರು.

'ನನ್ನ ವಿರುದ್ಧದ ಪ್ರಕರಣಗಳನ್ನು ನಾನೇ ನಿಂತು ವಾದ ಮಾಡಿ ಖುಲಾಸೆಯಾಗಿದ್ದೇನೆ. ನನ್ನ ವಿರುದ್ಧ ಪ್ರಕರಣ ದಾಖಲಿಸಿದ್ದರ ರೂವಾರಿ ಬಿಜೆಪಿ ಮಾಜಿ ಕಾರ್ಪೊರೇಟರ್. ಇದೇ ಕಾರಣಕ್ಕೆ ಬಿಜೆಪಿ ವಿರುದ್ಧ ಧ್ವನಿ ಎತ್ತುತ್ತಿದ್ದೇನೆ. ಹೆಚ್ಚಿನ ಮಾಹಿತಿ ಬೇಕಾದರೆ ಆರ್. ಅಶೋಕ್ ಅವರನ್ನು ಕೇಳಿ. ಇಲ್ಲಿದ್ದ ಮಾಜಿ ಡಿಸಿಪಿ ಕೇಳಿ, ಇನ್‌ಸ್ಪೆಕ್ಟರ್ ಪುನೀತ್‌ನನ್ನು ಕೇಳಿ. ನ್ಯಾಯಾಲಯವೇ ನನ್ನನ್ನು ಖುಲಾಸೆಗೊಳಿಸಿದೆ. ಆದರೆ, ನೀವು ರೌಡಿ ಶೀಟರ್ ಎಂದು ಟ್ವೀಟ್ ಮಾಡುತ್ತಿದ್ದೀರಾ? ಹಾಗಾದರೆ, ನ್ಯಾಯಾಲಯದ ಆದೇಶಕ್ಕೆ ಬೆಲೆ ಇಲ್ಲವೇ? ನನ್ನ ತಂಟೆಗೆ ಬಂದರೆ ಸುಮ್ಮನೆ ಬಿಡಲ್ಲ. ಭ್ರಷ್ಟ ಅಧಿಕಾರಿಗಳಿಗೆ ತಕ್ಕ ಪಾಠ ಕಲಿಸುತ್ತೇನೆ' ಎಂದು ಎಚ್ಚರಿಸಿದರು.

ನಲಪಾಡ್ ಆಪ್ತನ ಕಾರಿನಲ್ಲಿ ಸಂತ್ರಸ್ತೆ

ಸಿ.ಡಿ. ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹೇಳಿಕೆ ನೀಡಲು ಸಂತ್ರಸ್ತೆ, ಕಾಂಗ್ರೆಸ್ ಯುವ ಮುಖಂಡ ಮೊಹಮ್ಮದ್ ನಲಪಾಡ್ ಅವರ ಆಪ್ತ ನಫಿ ಕಾರಿನಲ್ಲಿ ಬಂದಿದ್ದರು ಎಂಬ ಮಾಹಿತಿ ಹೊರಬಿದ್ದಿದೆ.

ಸಿಆರ್‌ಪಿಸಿ 164ರಡಿ ಹೇಳಿಕೆ ದಾಖಲಿಸಲು ಮಂಗಳವಾರ ಮಧ್ಯಾಹ್ನ ಸಂತ್ರಸ್ತೆಗೆ ಅನುಮತಿ ಸಿಕ್ಕಿತ್ತು. ಆಗಲೇ ನಫಿ ಕಾರಿನಲ್ಲಿ (ಕೆಎ 51 ಎಂಬಿ 7634) ಸಂತ್ರಸ್ತೆ, ವಸಂತನಗರದ ವಿಶೇಷ ನ್ಯಾಯಾಲಯಕ್ಕೆ ಬಂದಿಳಿದಿದ್ದರು. ಹೇಳಿಕೆ ದಾಖಲು ನಂತರ ಅದೇ ಕಾರಿನಲ್ಲಿ ಯುವತಿ, ಆಡುಗೋಡಿಯಲ್ಲಿರುವ ಸಿಸಿಬಿ ತಾಂತ್ರಿಕ ವಿಭಾಗಕ್ಕೆ ಹೋಗಿ ಧ್ವನಿ ಮಾದರಿ ನೀಡಿದರು. ತನಿಖಾಧಿಕಾರಿ ಕವಿತಾ ಅವರ ವಿಚಾರಣೆ ಎದುರಿಸಿದರು.

ವಿಚಾರಣೆ ಮುಗಿದ ನಂತರ ನಫಿ ಕಾರಿನಲ್ಲೇ ಯುವತಿ ಹೊರಟು ಹೋದರು. ನ್ಯಾಯಾಲಯಕ್ಕೆ ಬಂದಿದ್ದ ನಲಪಾಡ್; ಯುವತಿ ಹಾಜರು ಸುದ್ದಿ ಹರಿದಾಡುತ್ತಿದ್ದಂತೆ ಮೊಹಮ್ಮದ್ ನಲಪಾಡ್ ಅವರು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಬಂದಿದ್ದರು.

'ಯುವತಿಗೆ ನೈತಿಕ ಸ್ಥೈರ್ಯ ನೀಡಲು ನ್ಯಾಯಾಲಯಕ್ಕೆ ಬಂದಿದ್ದೇನೆ. ಅನ್ಯಾಯಕ್ಕೊಳಗಾದ ಯುವತಿ ಪರ ನಾವಿದ್ದೇವೆ' ಎಂದೂ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದರು.

ಬದುಕಿಗಾಗಿ... ಹಳೆಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಅಂಗವಾಗಿ ದುರ್ಗದ ಬೈಲ್ ಮಾರುಕಟ್ಟೆಯಲ್ಲಿ ವ್ಯಾಪಾರಿಯೊಬ್ಬರು ಮುಖವಾಡ ಹಾಕಿಕೊಂಡು ಮಾರಾಟ ಮಾಡಿದರು – ಪ್ರಜಾವಾಣಿ ಚಿತ್ರ

ಸಿ.ಎಂ ವಿರುದ್ಧ ಈಶ್ವರಪ್ಪ ಬಂಡಾಯ

ಒಂದನೇ ಪುಟದಿಂದ...

'2020–21 ರ ಬಜೆಟ್‌ನಲ್ಲಿ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ಅಭಿವೃದ್ಧಿಪಡಿಸುವ 'ಗ್ರಾಮೀಣ ಸುಮಾರ್ಗ' ಯೋಜನೆ ಪ್ರಕಟಿಸಲಾಗಿತ್ತು. ಈ ಯೋಜನೆಯಡಿ 5 ವರ್ಷಗಳಲ್ಲಿ 20 ಸಾವಿರ ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲು ₹780 ಕೋಟಿ ನಿಗದಿ ಮಾಡಲಾಗಿತ್ತು. ಇದನ್ನು ಕಾರ್ಯಗತಗೊಳಿಸಲು ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ನಿಗದಿ ಮಾಡಿದ ಮೊತ್ತವನ್ನು ಹಣಕಾಸು ಇಲಾಖೆ ಬಿಡುಗಡೆ ಮಾಡಲೇ ಇಲ್ಲ. ಇದಕ್ಕೆ ಕಾರಣವೇನೆಂದು ಗೊತ್ತಿಲ್ಲ' ಎಂದು ಹೇಳಿದ್ದಾರೆ.

ಅಲ್ಲದೆ, ಹಣಕಾಸು ಇಲಾಖೆ 2020–21 ರ ಬಜೆಟ್‌ನಲ್ಲಿ ಪ್ರಕಟಿಸಿದ ಇತರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಅನುದಾನವನ್ನೂ ಬಿಡುಗಡೆ ಮಾಡಲಿಲ್ಲ. ಆದರೆ, ಕಳೆದ ಒಂದೂವರೆ ವರ್ಷದಲ್ಲಿ ವಿಶೇಷ ಅನುದಾನದ ಹೆಸರಿನಲ್ಲಿ (ಬಜೆಟ್ ಹೊರತುಪಡಿಸಿ) ₹1,439.25 ಕೋಟಿಗೆ ಅನುಮೋದನೆ (ಹಿಂದಿನ ಸರ್ಕಾರದ ಬಿಡುಗಡೆ ಮಾಡಿದ ₹973.80 ಕೋಟಿ ಬಿಟ್ಟು) ನೀಡಿದೆ ಎಂದು ಅವರು ಹೇಳಿದ್ದಾರೆ.

ಇತ್ತೀಚೆಗೆ (17.02.21) ರಂದು ಹಣಕಾಸು ಇಲಾಖೆ 81 ವಿಧಾನಸಭಾ ಕ್ಷೇತ್ರಗಳಿಗೆ ₹775 ಕೋಟಿ ಅನುಮೋದನೆ ನೀಡಿದೆ. ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ₹5 ಕೋಟಿಯಿಂದ ₹23 ಕೋಟಿವರೆಗೆ ಅನುದಾನ ಹಂಚಿಕೆ ಮಾಡಿದೆ. ಬೇಕಾಬಿಟ್ಟಿ ಹಣ ನೀಡುವುದರಿಂದ ಗ್ರಾಮೀಣ ಮೂಲಸೌಕರ್ಯ ಯೋಜನೆಗಳ ಮೇಲೆ ದೀರ್ಘಾವಧಿಯಲ್ಲಿ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ವಿಶೇಷ ಅನುದಾನ ಯೋಜನೆಯಡಿ ₹5 ಲಕ್ಷದೊಳಗೆ ರಸ್ತೆ ಕಾಮಗಾರಿ ಕೈಗೊಳ್ಳುವ ಯೋಜನೆ ಜಾರಿ ಮಾಡಲಾಗಿದೆ. ಇದರಿಂದ ರಸ್ತೆಗಳ ಗುಣಮಟ್ಟದ ಮೇಲೆ ಪರಿಣಾಮ ಬೀರುವುದಲ್ಲದೆ, ಅಕ್ರಮದ ಆರೋಪಕ್ಕೂ ಒಳಗಾಗಬೇಕಾಗುತ್ತದೆ ಎಂದಿದ್ದಾರೆ.

'ಇಲ್ಲಿಯವರೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ₹3,998.56 ಕೋಟಿ ಅನುಮೋದನೆ ನೀಡಿದ್ದು, ಅದರಲ್ಲಿ ₹1,600.42 ಕೋಟಿ ಮಾತ್ರ ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಆಗದೇ ಇರುವ ಮೊತ್ತ ₹2,398.18 ಕೋಟಿ. ಇದರ ಅರ್ಥ ನನ್ನ ಇಲಾಖೆಯ ಯೋಜನೆಗಳನ್ನು ಕಡೆಗಣಿಸಲಾಗುತ್ತಿದೆ. ಈಗಿನ ಆರ್ಥಿಕ ಬಿಕ್ಕಟ್ಟಿನ ಮಧ್ಯೆ ಸಾರ್ವಜನಿಕರ ಹಣ ದುರುಪಯೋಗ ಎಂದೇ ಕರೆಯಬೇಕಾಗುತ್ತದೆ' ಎಂದಿದ್ದಾರೆ.

ಆಡಳಿತ ಶೈಲಿ ಬದಲಿಸಲೇಬೇಕು

'ಹಣಕಾಸು ಇಲಾಖೆಯ ಈ ವರ್ತನೆಯಿಂದ ನಮ್ಮ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರ ಮುಂದೆ ನಾನು ಮುಜುಗರಕ್ಕೆ ಒಳಗಾಗಿದ್ದೇನೆ. ಪಕ್ಷ ಅಧಿಕಾರದಲ್ಲಿದ್ದರೂ, ನಮ್ಮ ಪಕ್ಷದ ಶಾಸಕರ ಕ್ಷೇತ್ರಗಳನ್ನು ಕಡೆಗಣಿಸಿ, ವಿರೋಧ ಪಕ್ಷಗಳ ಶಾಸಕರಿಗೆ ಅತಿ ಹೆಚ್ಚಿನ ವಿಶೇಷ ಅನುದಾನವನ್ನು ನೀಡಲಾಗುತ್ತಿದೆ. ರಾಜ್ಯ ಮತ್ತು ಪಕ್ಷದ ಹಿತ ದೃಷ್ಟಿಯಿಂದ ಈಗಿನ ಆಡಳಿತ ಶೈಲಿಯನ್ನು ಬದಲಿಸಲೇಬೇಕು' ಎಂದು ಕೆ.ಎಸ್.ಈಶ್ವರಪ್ಪ ಆಗ್ರಹಿಸಿದ್ದಾರೆ.

ಕೊಟ್ಟ ದೂರಿಗೆ ಬದ್ಧ: ಸಂತ್ರಸ್ತೆ

ಒಂದನೇ ಪುಟದಿಂದ...

'ಎಂಜಿನಿಯರಿಂಗ್ ಮುಗಿಸಿದ್ದೇನೆಂದು ತಿಳಿದುಕೊಂಡು ಕೆಲಸ ಕೊಡಿಸುವ ಭರವಸೆ ನೀಡಿದ್ದರು. ನಂತರ, ತಾವು ಹೇಳಿದಂತೆ ಸಹಕರಿಸುವಂತೆ ಹೇಳಿದ್ದರು. ಸಚಿವರಾಗಿದ್ದರಿಂದ ಕೆಲಸ ಸಿಗಬಹುದೆಂಬ ಆಸೆಯಿಂದ ಅವರು ಹೇಳಿದ್ದಕ್ಕೆಲ್ಲ ಒಪ್ಪಿದೆ. ಲೈಂಗಿಕವಾಗಿ ನನ್ನನ್ನು ಬಳಸಿಕೊಂಡರು' ಎಂದೂ ಸಂತ್ರಸ್ತೆ ತಿಳಿಸಿದ್ದಾರೆ.

'ಆರಂಭದಲ್ಲೇ ಅವರು ನನಗೆ ಉಡುಗೊರೆ ನೀಡಲಾರಂಭಿಸಿದ್ದರು. ಚಿನ್ನಾಭರಣ ಖರೀದಿಸಿ ಕೊಟ್ಟರು. ಅದರ ರಶೀದಿ ಇಲ್ಲಿದೆ. ಜೊತೆಗೆ, ಮೊಬೈಲ್ ಸಹ ಕೊಟ್ಟರು. ಅದನ್ನೂ ನಿಮಗೆ ನೀಡುತ್ತೇನೆ. ನನಗೆ ಸಾಕಷ್ಟು ಅನ್ಯಾಯವಾಗಿದೆ. ಪ್ರಭಾವಿ ಜೊತೆ ಹೋರಾಟ ಮಾಡುವುದು ತುಂಬಾ ಕಷ್ಟವೆಂದು ತಿಳಿದು ಹಲವರನ್ನು ಸಂಪರ್ಕಿಸಿದ್ದೆ. ನನ್ನನ್ನೇ ಕೊಲ್ಲಬಹುದೆಂದು ಹೆದರಿ ಅಜ್ಞಾತ ಸ್ಥಳದಲ್ಲಿದ್ದೆ. ನಾನು ನೀಡಿರುವ ದೂರಿಗೆ ಸದಾ ಬದ್ಧ. ದಯವಿಟ್ಟು ನನಗೆ ನ್ಯಾಯ ಕೊಡಿಸಿ' ಎಂದೂ ಸಂತ್ರಸ್ತೆ ಕೋರಿರುವುದಾಗಿ ಗೊತ್ತಾಗಿದೆ.

'ರಮೇಶ ಜಾರಕಿಹೊಳಿ ಅವರನ್ನು ಯಾವೆಲ್ಲ ಸ್ಥಳದಲ್ಲಿ ಭೇಟಿಯಾಗಿದ್ದೀರಾ? ಆ ಸ್ಥಳಗಳನ್ನು ಗುರುತು ಹಿಡಿಯುತ್ತೀರಾ. ನಮ್ಮ ಮಹಜರು ಪ್ರಕ್ರಿಯೆ ಸಹಕರಿಸುತ್ತೀರಾ ?' ಎಂದು ಕೇಳಿದ್ದಕ್ಕೆ, 'ಖಂಡಿತ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ' ಎಂದೂ ಸಂತ್ರಸ್ತೆ ಹೇಳಿದ್ದಾರೆ.

'ಸಂತ್ರಸ್ತೆ ಧೈರ್ಯದಿಂದಲೇ ಉತ್ತರಿಸುತ್ತಿದ್ದಾರೆ. ಕೆಲ ಪ್ರಶ್ನೆಗಳಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದು ಪ್ರಾಥಮಿಕ ವಿಚಾರಣಾ ಹೇಳಿಕೆ. ಇದನ್ನು ಪರಿಶೀಲನೆ ನಡೆಸಲಾಗುತ್ತಿದೆ. ಗುರುವಾರ ಬೆಳಿಗ್ಗೆ ಪುನಃ ವಿಚಾರಣೆಗೆ ಬರುವಂತೆ ಸಂತ್ರಸ್ತೆಗೆ ತಿಳಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ರಮೇಶ ವಿಚಾರಣೆ ನಾಳೆ

ನ್ಯಾಯಾಲಯದಲ್ಲಿ ಸಂತ್ರಸ್ತೆ ಹೇಳಿಕೆ ನೀಡುತ್ತಿದ್ದಂತೆ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಬಂಧನದ ಭೀತಿ ಶುರುವಾಗಿದೆ. ಏಪ್ರಿಲ್ 2ರಂದು ಅವರು ತನಿಖೆಗೆ ಹಾಜರಾಗಬೇಕಿದ್ದು, ಅಂದೇ ಅವರನ್ನು ತನಿಖಾಧಿಕಾರಿ, ವೈದ್ಯಕೀಯ ಪರೀಕ್ಷೆಗೆ ಕರೆದೊಯ್ಯುವ ಸಾಧ್ಯತೆ ಇದೆ.

ಮಾರ್ಚ್ 29ರಂದು ಪ್ರಕರಣದ ವಿಚಾರಣೆಗಾಗಿ ರಮೇಶ ಜಾರಕಿಹೊಳಿ ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗಿದ್ದರು. ತನಿಖಾಧಿಕಾರಿಯವರ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿರಲಿಲ್ಲ. ಏಪ್ರಿಲ್ 2ರಂದು ಮತ್ತೆ ವಿಚಾರಣೆಗೆ ಬರುವುದಾಗಿ ಕೋರಿದ್ದರು. ಹೀಗಾಗಿ, ಅದೇ ದಿನ ವಿಚಾರಣೆ ನಡೆಸಲು ತನಿಖಾಧಿಕಾರಿ ಸಿದ್ಧತೆ ಮಾಡಿಕೊಂಡಿದ್ದಾರೆ.

ಈಶ್ವರಪ್ಪ ಸಿಡಿದೇಳುವುದು ಇದೇ ಮೊದಲಲ್ಲ

ಒಂದನೇ ಪುಟದಿಂದ...

'ಕುಟುಂಬ ರಾಜಕಾರಣಕ್ಕೆ ನಮ್ಮ ಪಕ್ಷದಲ್ಲಿ ಅವಕಾಶ ಇಲ್ಲ; ಪಕ್ಷದ ಕಾರ್ಯಕರ್ತರಿಗೆ ಟಿಕೆಟ್ ಕೊಡಬೇಕು' ಎಂದು ಬಹಿರಂಗವಾಗಿಯೇ ಆಗ್ರಹಿಸಿದ್ದರು. ಅದಕ್ಕೆ ಮಣಿಯದ ಯಡಿಯೂರಪ್ಪ ತಮ್ಮ ಮಗನನ್ನು ಚುನಾವಣೆಗೆ ನಿಲ್ಲಿಸಿಯೇ ಬಿಟ್ಟರು. 'ಹಣ–ಹೆಂಡ ಹಂಚಿ ಚುನಾವಣೆ ಮಾಡುವುದು ನಮ್ಮ ಸಂಸ್ಕೃತಿಯಲ್ಲ, ಅದು ಬಿಜೆಪಿಗೆ ಒಗ್ಗುವುದಿಲ್ಲ' ಎಂದು ಈಶ್ವರಪ್ಪ ಹರಿಹಾಯ್ದಿದ್ದರು. ಚುನಾವಣೆಯಲ್ಲಿ ರಾಘವೇಂದ್ರ ಗೆದ್ದರು. ಇಬ್ಬರ ಮಧ್ಯದ ವ್ಯಾಜ್ಯ ತಾರಕಕ್ಕೇರಿತು. ಇಂಧನ ಇಲಾಖೆಯಲ್ಲಿ ಯಡಿಯೂರಪ್ಪ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಈಶ್ವರಪ್ಪ ಆಗ ತಮ್ಮ ಆಪ್ತರ ಬಳಿ ಆಪಾದಿಸಿದ್ದುಂಟು.

ಈ ಜಗಳ ಬಿರುಸುಗೊಂಡು 2010ರ ಜನವರಿಯಲ್ಲಿ ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಚುಕ್ಕಾಣಿ ಹಿಡಿದರು. ಆಗ ರೈಲು ನಿಲ್ದಾಣದಲ್ಲಿ ಮುಖಾಮುಖಿಯಾದರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡದಷ್ಟು ಸಂಬಂಧ ಹಳಸಿತ್ತು.

ಗಣಿ ಹಗರಣದ ಆರೋಪಕ್ಕೆ ಗುರಿಯಾಗಿ ಯಡಿಯೂರಪ್ಪ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಟ್ಟರು. ಆಗ, ಈಶ್ವರಪ್ಪ ಅವರು ಅನಂತ್ ಕುಮಾರ್ ಬಣದಲ್ಲಿ ಗುರುತಿಸಿಕೊಂಡು, ಜಗದೀಶ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡುವಲ್ಲಿ ಮುಂಚೂಣಿಯಲ್ಲಿದ್ದರು. ಆದರೆ, ಆಗ ನಡೆದ ರೆಸಾರ್ಟ್ ರಾಜಕೀಯದ ಮೇಲಾಟದಲ್ಲಿ ಯಡಿಯೂರಪ್ಪ ಗೆದ್ದು, ತಮ್ಮ ಆಪ್ತರಾಗಿದ್ದ ಡಿ.ವಿ. ಸದಾನಂದಗೌಡರನ್ನು ಮುಖ್ಯಮಂತ್ರಿ ಮಾಡಿದರು.

ಈ ಎಲ್ಲ ಬೆಳವಣಿಗೆಗಳ ಬಳಿಕ ಯಡಿಯೂರಪ್ಪ ಬಿಜೆಪಿಯನ್ನೇ ತೊರೆದರು. ಆಗ, ಯಡಿಯೂರಪ್ಪ ಅವರನ್ನು ಹಿಗ್ಗಾಮುಗ್ಗಾ ಝಾಡಿಸುತ್ತಿದ್ದವರ ಪೈಕಿ ಮುಂಚೂಣಿಯಲ್ಲಿದ್ದವರು ಈಶ್ವರಪ್ಪ. ಇದರ ಪರಿಣಾಮವಾಗಿ 2013ರ ಚುನಾವಣೆಯಲ್ಲಿ ಈಶ್ವರಪ್ಪ ಶಿವಮೊಗ್ಗದಲ್ಲಿ ಸೋಲು ಕಂಡರು.

ಕಾಲ ಹಾಗೆಯೇ ಇರಲಿಲ್ಲ; 2014ರ ಲೋಕಸಭೆ ಚುನಾವಣೆ ಹೊತ್ತಿಗೆ ಯಡಿಯೂರಪ್ಪ ತಾವೇ ಕಟ್ಟಿದ್ದ ಕೆಜೆಪಿಯನ್ನು ಕೈಬಿಟ್ಟು ಬಿಜೆಪಿಗೆ ಬಂದು ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ, ಸಂಸದರೂ ಆದರು. ಬಿಜೆಪಿಯ ಅಧ್ಯಕ್ಷರೂ ಆದರು.

ಮತ್ತೆ ಈಶ್ವರಪ್ಪ ಬಂಡಾಯ ಸಾರಿದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಕಟ್ಟಿಕೊಂಡು ಯಡಿಯೂರಪ್ಪ ವಿರುದ್ಧ ಸೆಣೆಸಲು ನಿಂತರು. ಹಿಂದುಳಿದ ಸಮುದಾಯದ ನಾಯಕತ್ವ ವಹಿಸಿಕೊಂಡು ಯಡಿಯೂರಪ್ಪನವರಿಗೆ ಸೆಡ್ಡು ಹೊಡೆಯಲು ಹತ್ತಾರು ಸಮಾವೇಶಗಳನ್ನು ನಡೆಸಿದರು. ಇದೇ ಹೊತ್ತಿಗೆ ಈಶ್ವರಪ್ಪನವರ ಜತೆಗೆ ಗುರುತಿಸಿಕೊಂಡಿದ್ದ ಮೂಲ ಬಿಜೆಪಿಗರು ತಮ್ಮದೇ ಒಂದು ವೇದಿಕೆ ರಚಿಸಿ, ಯಡಿಯೂರಪ್ಪನವರ ವಿರುದ್ಧ ಸಮರವನ್ನೂ ಸಾರಿದರು. ಈಶ್ವರಪ್ಪ–ಯಡಿಯೂರಪ್ಪ ಬಣದ ಮಧ್ಯೆ ಯುದ್ಧದ ವಾತಾವರಣ ನಿರ್ಮಾಣವಾಗಿ, ಬಿಜೆಪಿ ದುರ್ಬಲವಾಗತೊಡಗಿತ್ತು.

2018ರ ಚುನಾವಣೆ ಸಮೀಪಿಸುವ ಹೊತ್ತಿಗೆ ಎಚ್ಚೆತ್ತುಕೊಂಡ ಬಿಜೆಪಿಯ ಅಂದಿನ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ, ಇಬ್ಬರನ್ನೂ ದೆಹಲಿಗೆ ಕರೆಸಿಕೊಂಡು, ಒಂದಾಗಿ ಹೋಗುವಂತೆ ಇಬ್ಬರಿಗೂ ತಾಕೀತು ಮಾಡಿದರು. ರಾಯಣ್ಣ ಬ್ರಿಗೇಡ್ ಬಾಗಿಲು ಹಾಕುವಂತೆ ಈಶ್ವರಪ್ಪಗೆ ಸೂಚಿಸಿದರು. 2018ರಲ್ಲಿ ಇಬ್ಬರೂ ಜತೆ ಸೇರಿಯೇ ಚುನಾವಣೆ ಎದುರಿಸಿದರು. ಆದರೆ, ಪಕ್ಷ ಅಧಿಕಾರಕ್ಕೆ ಬರಲಿಲ್ಲ.

ಪಕ್ಷ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆಯುವ ಹೊತ್ತಿಗೆ ಮತ್ತೆ ಈಶ್ವರಪ್ಪ ಮತ್ತೆ ಬಂಡಾಯ ಸಾರಿದ್ದಾರೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ ವಿವರ

- **ಜಿ. ಕುಮಾರ್ ನಾಯ್ಕ್**– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಜವಾಬ್ದಾರಿ.
- **ಕಪಿಲ್ ಮೋಹನ್**– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.
- **ಪಂಕಜ್ ಕುಮಾರ್ ಪಾಂಡೆ**– ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಗಣಿ).
- **ವಿ. ಪೊನ್ನುರಾಜ್**– ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ).
- **ಸಿಂಧೂ ಬಿ. ರೂಪೇಶ್**– ನಿರ್ದೇಶಕಿ, ಪ್ರವಾಸೋದ್ಯಮ ಇಲಾಖೆ.
- **ಹೊನ್ನಾಂಬ**– ನಿರ್ದೇಶಕಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ.
- **ಬಿ.ಆರ್. ಮಮತಾ**– ಹೆಚ್ಚುವರಿ ಮಿಷನ್ ನಿರ್ದೇಶಕಿ, ಸಕಾಲ ಮಿಷನ್.
- **ಎಚ್.ಎನ್. ಗೋಪಾಲಕೃಷ್ಣ**– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಮತ್ತು ಐಟಿ–ಬಿಟಿ ಇಲಾಖೆ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಹೊಣೆ.
- **ಗಂಗಾಧರಸ್ವಾಮಿ ಜಿ.ಎಂ.**– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮ ಮತ್ತು ಹೆಚ್ಚುವರಿಯಾಗಿ ಕೆಪಿಟಿಸಿಎಲ್ ಆಡಳಿತ ವಿಭಾಗದ ಪ್ರಧಾನ ವ್ಯವಸ್ಥಾಪಕರ ಹುದ್ದೆ.
- **ವಿದ್ಯಾಕುಮಾರಿ ಕೆ.**– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತುಮಕೂರು ಜಿಲ್ಲಾ ಪಂಚಾಯಿತಿ.
- **ಜಯವಿಭವಸ್ವಾಮಿ**– ವ್ಯವಸ್ಥಾಪಕ ನಿರ್ದೇಶಕ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಮತ್ತು ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಜವಾಬ್ದಾರಿ.

ಸಂತ್ರಸ್ತೆ ತಂದೆಯಿಂದ ಹೈಕೋರ್ಟ್‌ಗೆ ಅರ್ಜಿ

ಮಗಳ ಹೇಳಿಕೆ ಪರಿಗಣಿಸದಂತೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮಗಳು ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರ ಎದುರು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 164ರ ಅಡಿಯಲ್ಲಿ ದಾಖಲಿಸಿರುವ ಹೇಳಿಕೆಯನ್ನು ಪರಿಗಣನೆಗೆ ತೆಗೆದುಕೊಳ್ಳದಂತೆ ಕೋರಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಪ್ರಕರಣ ದಾಖಲಿಸಿರುವ ಸಂತ್ರಸ್ತೆಯ ತಂದೆ ಹೈಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಿದ್ದಾರೆ.

ರಿಟ್ ಅರ್ಜಿ ಸಲ್ಲಿಸಿರುವ ಅವರು, 'ನಮ್ಮ ಮಗಳು ಸ್ವಯಂ ಇಚ್ಛೆಯಿಂದ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲ. ಪ್ರಭಾವ, ಒತ್ತಡ ಹಾಗೂ ಬಲವಂತದಿಂದ ಹೇಳಿಕೆ ನೀಡಿದ್ದಾಳೆ. ಕೆಲವು ದಿನಗಳ ಕಾಲ ಆಕೆಯನ್ನು ಏಕಾಂತದಲ್ಲಿ ಇರಿಸಬೇಕು ಅಥವಾ ನ್ಯಾಯಾಂಗದ ಸುಪರ್ದಿಯಲ್ಲಿ ಇರಿಸಬೇಕು. ಇಲ್ಲವೇ, ನ್ಯಾಯಾಲಯ ಸೂಚಿಸುವ ಸ್ವತಂತ್ರ ಸಂಸ್ಥೆಯ ಸುಪರ್ದಿಯಲ್ಲಿ ಇರಿಸಬೇಕು. ಆ ಬಳಿಕವೇ ಮಗಳು ಸ್ವತಂತ್ರವಾಗಿ ಹೇಳಿಕೆ ನೀಡಲು ಸಾಧ್ಯ' ಎಂದು ತಿಳಿಸಿದ್ದಾರೆ.

ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವೈದ್ಯಕೀಯ ಪರೀಕ್ಷೆಯ ಬಳಿಕವೇ ಹೇಳಿಕೆ ದಾಖಲಿಸಬೇಕು. ಆದರೆ, ಈ ಪ್ರಕರಣದಲ್ಲಿ ಪರೀಕ್ಷೆಗೂ ಮುನ್ನ ಹೇಳಿಕೆ ದಾಖಲಿಸಲಾಗಿದೆ. ಕೆಪಿಸಿಸಿ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಸೂರ್ಯ ಮುಕುಂದರಾಜ್ ಉಪಸ್ಥಿತಿಯಲ್ಲಿ ಮಗಳ ಹೇಳಿಕೆ ದಾಖಲಿಸಲಾಗಿದೆ. ಹೈಕೋರ್ಟ್‌ನ ಅಂತಿಮ ಆದೇಶ ಬರುವವರೆಗೂ ಮಗಳ ಹೇಳಿಕೆಯನ್ನು ಪರಿಗಣಿಸಬಾರದು ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ದೇವೇಗೌಡ ದಂಪತಿಗೆ ಕೋವಿಡ್

ಒಂದನೇ ಪುಟದಿಂದ...

ದೇವೇಗೌಡ ಅವರ ಗಂಟಲು ಮತ್ತು ಮೂಗಿನ ದ್ರವದ ಮಾದರಿಗಳನ್ನು ಬುಧವಾರ ಬೆಳಿಗ್ಗೆ ಸಂಗ್ರಹಿಸಿ ರ್‍ಯಾಪಿಡ್ ಆ್ಯಂಟಿಜೆನ್ ಕಿಟ್ ಮೂಲಕ ಪರೀಕ್ಷಿಸಲಾಗಿದೆ. ಈ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿದೆ. ಪ್ರತ್ಯೇಕ ಮಾದರಿ ಸಂಗ್ರಹಿಸಿ ಆರ್‌ಟಿ–ಪಿಸಿಆರ್ ಪರೀಕ್ಷೆಗಾಗಿ ರವಾನಿಸಲಾಗಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಸೋಂಕು ತಗುಲಿರುವುದನ್ನು ದೃಢಪಡಿಸಿ ಟ್ವೀಟ್ ಮಾಡಿರುವ ದೇವೇಗೌಡ, ಕೆಲವು ದಿನಗಳಿಂದ ತಮ್ಮ ಸಂಪರ್ಕಕ್ಕೆ ಬಂದವರು ಕೋವಿಡ್ ಪತ್ತೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಆರೋಗ್ಯ ವಿಚಾರಿಸಿದ ಪ್ರಧಾನಿ: ದೇವೇಗೌಡರಿಗೆ ದೂರವಾಣಿ ಕರೆಮಾಡಿದ ಪ್ರಧಾನಿ ನರೇಂದ್ರ ಮೋದಿ, ದಂಪತಿಯ ಆರೋಗ್ಯ ವಿಚಾರಿಸಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಹಲವು ಮುಖಂಡರು ದೇವೇಗೌಡ ದಂಪತಿ ಬೇಗ ಗುಣಮುಖರಾಗಿ ಬರಲಿ ಎಂದು ಹಾರೈಸಿ ಟ್ವೀಟ್ ಮಾಡಿದ್ದಾರೆ.

ಬಿಎಸ್‌ವೈ ವಿರುದ್ಧ ತನಿಖೆಗೆ ಅಸ್ತು

ಒಂದನೇ ಪುಟದಿಂದ...

ಕಲಬುರ್ಗಿ ಪೀಠದ ಆದೇಶ ಪ್ರಶ್ನಿಸಿ ಶರಣಗೌಡ ಮಧ್ಯಂತರ ಅರ್ಜಿ ಸಲ್ಲಿಸಿದ್ದರು. ಬಳಿಕ ಈ ಅರ್ಜಿ ಚುನಾಯಿತ ಪ್ರತಿನಿಧಿಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗಾಗಿ ಹೈಕೋರ್ಟ್‌ನಲ್ಲಿ ಅಸ್ತಿತ್ವಕ್ಕೆ ತಂದಿರುವ ವಿಶೇಷ ಪೀಠಕ್ಕೆ ವರ್ಗವಾಗಿತ್ತು.

ಆರು ಬಾರಿ ನಡೆದ ವಿಚಾರಣೆಯಲ್ಲಿ ಅರ್ಜಿದಾರರ ಪರವಾಗಿ ವಕೀಲ ಪ್ರೊ.ರವಿವರ್ಮ ಕುಮಾರ್ ವಾದ ಮಂಡಿಸಿದ್ದರು. ಬುಧವಾರ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ ವಿಶೇಷ ಪೀಠದ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ, ಯಡಿಯೂರಪ್ಪ ಮತ್ತು ಇತರ ಆರೋಪಿಗಳ ವಿರುದ್ಧದ ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿದರು.

'ಈ ಪ್ರಕರಣವು ಸಂಜ್ಞೇಯ ಅಪರಾಧ ಕೃತ್ಯವನ್ನು ಒಳಗೊಂಡಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ತನಿಖೆಗೆ ತಡೆ ನೀಡಲಾಗದು' ಎಂದು ನ್ಯಾಯಾಲಯ ಹೇಳಿದೆ.

ಶಿವಕುಮಾರ ಸ್ವಾಮೀಜಿ 114ನೇ ಜಯಂತ್ಯುತ್ಸವ ಇಂದು

ಪ್ರಜಾವಾಣಿ ವಾರ್ತೆ



ತುಮಕೂರು: ಸಿದ್ಧಗಂಗಾ ಮಠದಲ್ಲಿ ದಿ. ಶಿವಕುಮಾರ ಸ್ವಾಮೀಜಿ 114ನೇ ಜನ್ಮ ದಿನಾಚರಣೆಯನ್ನು ಗುರುವಾರ ಸರಳವಾಗಿ ಆಚರಣೆ ಮಾಡಲಾಗುತ್ತಿದೆ.

ಪ್ರತಿ ವರ್ಷವೂ ಸ್ವಾಮೀಜಿ ಹುಟ್ಟು ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಕೋವಿಡ್–19ನಿಂದಾಗಿ ಸರಳವಾಗಿ ಆಚರಣೆ ಮಾಡಲಾಗುತ್ತಿದೆ ಎಂದು ಮಠದ ಮೂಲಗಳು ತಿಳಿಸಿವೆ. 114ನೇ ಜನ್ಮದಿನಾಚರಣೆ ಅಂಗವಾಗಿ 114 ಮಕ್ಕಳಿಗೆ ಲಿಂಗ ದೀಕ್ಷೆ ಮಾಡಲಾಗುತ್ತದೆ.

ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಸಮಿತಿ ವತಿಯಿಂದ ಗುರುವಾರ ಸಂಜೆ 6 ಗಂಟೆಗೆ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಉತ್ಸವದಲ್ಲಿ ನಾಡಿನ ವಿವಿಧ ಮಠಾಧೀಶರು, ಸಾಧು, ಸಂತರು, ಭಕ್ತರು ಪಾಲ್ಗೊಳ್ಳಲಿದ್ದಾರೆ.

ಕೊಯಮತ್ತೂರು: 'ಅನ್ಯ' ಹಣೆಪಟ್ಟಿಯೇ ಕಮಲ್‌ಗೆ ಸವಾಲು

• ಇ.ಟಿ.ಬಿ ಶಿವಪ್ರಿಯನ್

ಗಮನ ಸೆಳೆದ ಕ್ಷೇತ್ರ

ಕೊಯಮತ್ತೂರು: ತಮಿಳು ಸಿನಿಮಾ ತಾರೆ ಕಮಲ್‌ಹಾಸನ್ ಅವರು ತಮ್ಮ ಆರು ದಶಕಗಳ ಅಭಿನಯ ಜೀವನದಲ್ಲಿ ವೈವಿಧ್ಯಮಯ ಪಾತ್ರಗಳಿಗೆ ಜೀವ ತುಂಬಿದವರು. ತಮ್ಮ ಚೊಚ್ಚಲ ಸ್ಪರ್ಧೆಗೆ ಅವರು ಅತ್ಯಂತ ವೈವಿಧ್ಯಮಯ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ.

ವ್ಯಾಪಾರ ಕೇಂದ್ರ, ಪ್ರತಿಷ್ಠಿತ ಬಡಾವಣೆಗಳೆಲ್ಲವೂ ಹೊಂದಿರುವ ದಕ್ಷಿಣ ಭಾರತದ ಮ್ಯಾಂಚೆಸ್ಟರ್ ಎಂದು ಕರೆಸಿಕೊಳ್ಳುವ ನಗರ ಕೊಯಮತ್ತೂರು. ಕಮಲ್‌ಹಾಸನ್ ಸ್ಪರ್ಧೆಯಿಂದಾಗಿ ಕೊಯಮತ್ತೂರು ದಕ್ಷಿಣ ಕ್ಷೇತ್ರದ ಚುನಾವಣೆಯು ಕಮಲ್ ಅವರ ಬ್ಲಾಕ್ ಬಸ್ಟರ್ ಸಿನಿಮಾ ರೀತಿಯಲ್ಲಿಯೇ ಇದೆ. ಅವರ ರಂಗ ಪ್ರವೇಶವು ಇಡೀ ಕ್ಷೇತ್ರದಲ್ಲಿ ತರಂಗಗಳನ್ನು ಎಬ್ಬಿಸಿದೆ. ಗೌಂಡರ್, ನಾಯ್ಕರ್, ಚೆಟ್ಟಿಯಾರ್, ಮುಕುಲತೋರ್, ಮುಸ್ಲಿಂ, ಕ್ರೈಸ್ತ ಮತ್ತು ಉತ್ತರ ಭಾರತೀಯ ಸಮುದಾಯದ ಜನರು ಇಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಬಿಜೆಪಿಯ ವನತಿ ಶ್ರೀನಿವಾಸನ್ ಮತ್ತು ಕಾಂಗ್ರೆಸ್‌ನ ಮಯೂರ ಎಸ್. ಜಯಕುಮಾರ್ ಅವರೇ ಕಮಲ್‌ಗೆ ಇಲ್ಲಿ ಮುಖ್ಯ ಎದುರಾಳಿಗಳು.

ಕಮಲ್‌ಹಾಸನ್

ಎಐಎಡಿಎಂಕೆ ಮತ್ತು ಡಿಎಂಕೆಗೆ ತಮ್ಮ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷ ಪರ್ಯಾಯ ಎಂದು ಕಮಲ್ ಹೇಳಿಕೊಳ್ಳುತ್ತಿದ್ದಾರೆ. ವಿರೋಧಾಭಾಸ ಎಂದರೆ ಅವರು ಈ ಎರಡೂ ಪಕ್ಷಗಳ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸುತ್ತಿಲ್ಲ. ಡಿಎಂಕೆ ಈ ಕ್ಷೇತ್ರವನ್ನು ಮಿತ್ರ ಪಕ್ಷ ಕಾಂಗ್ರೆಸ್‌ಗೆ ಮತ್ತು ಎಐಎಡಿಎಂಕೆ ಈ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಟ್ಟಿವೆ. ಎಎಂಎಂಕೆ ಮತ್ತು ಎನ್‌ಟಿಕೆಯ ಅಭ್ಯರ್ಥಿಗಳೂ ಕಣದಲ್ಲಿ ಇದ್ದಾರೆ.

ಕಳೆದ ಲೋಕಸಭಾ ಚುನಾವಣೆಯ ಹೊತ್ತಿಗೆ ಎಂಎನ್‌ಎಂ ಸ್ಥಾಪನೆಯಾಗಿ ಒಂದು ವರ್ಷವಷ್ಟೇ ಆಗಿತ್ತು. ಆಗ ನಡೆದ ಲೋಕಸಭಾ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದ ಎಂಎನ್‌ಎಂ ಅಭ್ಯರ್ಥಿ ಆರ್. ಮಹೇಂದ್ರನ್ ಅವರು ಇಲ್ಲಿ 1.45 ಲಕ್ಷ ಮತ ಪಡೆದಿದ್ದರು. ಕಮಲ್ ಅವರು ಇಲ್ಲಿಂದ ಸ್ಪರ್ಧಿಸಲು ಇದೂ ಒಂದು ಕಾರಣ. ತಮ್ಮ ಜನಪ್ರಿಯತೆಯ ಜತೆಗೆ, ಪಕ್ಕದ ಕ್ಷೇತ್ರ ಸಿಂಗಾನಲ್ಲೂರ್‌ನಲ್ಲಿ ಸ್ಪರ್ಧಿಸುತ್ತಿರುವ ಮಹೇಂದ್ರನ್ ಅವರು ಗೆಲುವಿಗೆ ನೆರವಾಗಬಹುದು ಎಂಬುದು ಕಮಲ್ ಲೆಕ್ಕಾಚಾರ. ಅಲ್ಪಸಂಖ್ಯಾತ ಸಮುದಾಯದ ಗಣನೀಯ ಪ್ರಮಾಣದ ಮತಗಳು ತಮಗೆ ಸಿಗಬಹುದು ಎಂದು ಎಂಎನ್‌ಎಂ ಮುಖಂಡರು ಭಾವಿಸಿದ್ದಾರೆ.

ನಗರ ಪ್ರದೇಶದ ಜನರು ಮತ್ತು ಯುವ ಮತದಾರರಿಗೆ ಕಮಲ್ ಬಗ್ಗೆ ಹೆಚ್ಚು ಒಲವು ಇದೆ. ಕಮಲ್ ಅವರು ತಮ್ಮನ್ನು 'ಬದಲಾವಣೆಯ ಹರಿಕಾರ' ಎಂದು ಬಿಂಬಿಸಿಕೊಂಡಿದ್ದಾರೆ. ಬದಲಾವಣೆ ಬೇಕಾಗಿದೆ ಎಂಬ ಮನೋಭಾವ ಯುವ ಮತದಾರರಲ್ಲಿಯೂ ಇದೆ.

'ಕಮಲ್ ಅವರೇ ಉತ್ತಮ ಅಭ್ಯರ್ಥಿ. ಅವರು ಸಂವೇದನೆಯಿಂದ ಮಾತಾಡುತ್ತಾರೆ. ಅವರ ಚಿಂತನೆಗಳು ತಾಜಾ ಇವೆ. ಅವರು ನಮ್ಮ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ ಎಂಬುದೇ ನನ್ನಲ್ಲಿ ಪುಳಕ ಮೂಡಿಸಿದೆ' ಎನ್ನುತ್ತಾರೆ 24 ವರ್ಷದ ಅಶ್ರಫ್.

ಪ್ರತಿಷ್ಠಿತ ಬಡಾವಣೆ ಆರ್. ಎಸ್. ಪುರಂನ ಅಂಗಡಿಯೊಂದರ ಮುಂದೆ ಕುಳಿತಿದ್ದ ಕೃಷ್ಣ ಕುಮಾರ್ ಅವರದ್ದೂ ಇದೇ ಅಭಿಪ್ರಾಯ. ಆದರೆ, 50 ವರ್ಷ ವಯಸ್ಸಿನ ಶ್ರೀನಿವಾಸನ್ ಇದನ್ನು ಒಪ್ಪುವುದಿಲ್ಲ. 'ಕೊಯಮತ್ತೂರಿನ ಸ್ಥಳೀಯರೇ ಶಾಸಕರಾದರೆ ಉತ್ತಮ. ಸಿನಿಮಾ ತಾರೆಗಿಂತ ಸ್ಥಳೀಯ ರಾಜಕಾರಣಿಯನ್ನು ಸಂಪರ್ಕಿಸುವುದು ಸುಲಭ' ಎಂಬುದು ಅವರ ವಾದ.

ವನತಿ ಮತ್ತು ಜಯಕುಮಾರ್ ಅವರಿಬ್ಬರೂ ಕಳೆದ ಬಾರಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದವರು. ಹಾಗಾಗಿ, ಮತದಾರರಿಗೆ ಪರಿಚಿತರು. ಈ ಇಬ್ಬರೂ ಜನರ ಕೈಗೆ ಸಿಗುತ್ತಾರೆ ಹಾಗೂ ನಗರದಲ್ಲಿಯೇ ನೆಲೆಸಿದ್ದಾರೆ ಎಂಬುದು ಇವರಿಗೆ ಇರುವ ಅನುಕೂಲ. ಆದರೆ, ಯಾರು ಗೆಲ್ಲಬಹುದು ಎಂದು ಊಹಿಸುವ ಕೆಲಸವನ್ನು ಯಾರೂ ಮಾಡುತ್ತಿಲ್ಲ.

ವನತಿ ಶ್ರೀನಿವಾಸನ್

ಎಐಎಡಿಎಂಕೆ ಮತ್ತು ಬಿಜೆಪಿಯ ಸಂಘಟನಾ ಬಲ ತಮಗೆ ನೆರವಾಗಬಹುದು ಎಂದು ವನತಿ ಭಾವಿಸಿದ್ದಾರೆ. ತಮ್ಮ ಗೌಂಡರ್ ಸಮುದಾಯದ ಜತೆಗೆ ನಿಲ್ಲಬಹುದು ಎಂಬ ನಿರೀಕ್ಷೆ ಅವರಲ್ಲಿದೆ. ಗಣನೀಯ ಸಂಖ್ಯೆಯಲ್ಲಿ ಇರುವ ಉತ್ತರ ಭಾರತೀಯರ ಮತವೂ ಸಿಗಬಹುದು ಎಂಬುದು ಅವರ ಲೆಕ್ಕಾಚಾರ.

ಡಿಎಂಕೆ ಜತೆಗಿನ ಮೈತ್ರಿ, ಅಲ್ಪಸಂಖ್ಯಾತರ ಮತಗಳ ಕ್ರೋಡೀಕರಣ ಈ ಬಾರಿ ತಮ್ಮ ಕೈ ಹಿಡಿಯಬಹುದು ಎಂಬುದು ಜಯಕುಮಾರ್ ವಿಶ್ವಾಸ. ಅಲ್ಪಸಂಖ್ಯಾತರು ಈ ಬಾರಿ ಕಮಲ್‌ಗೆ ಮತ ಹಾಕುತ್ತಾರೆ ಎಂಬುದು ಎಂಎನ್‌ಎಂ ವಾದ.

'ಇದು ಅತ್ಯಂತ ವೈವಿಧ್ಯಮಯ ಮತ್ತು ಸಂಕೀರ್ಣ ಕ್ಷೇತ್ರ. ಏನಾಗಬಹುದು ಎಂದು ಊಹಿಸಲಾಗದು. ಯಾವ ಸಮುದಾಯದ ಮತವೂ ಇಡಿಯಾಗಿ ಒಂದು ಪಕ್ಷಕ್ಕೆ ಹೋಗುವುದಿಲ್ಲ. ಮುಸ್ಲಿಮರು ಕೂಡ ಒಂದೇ ಪಕ್ಷವನ್ನು ಬೆಂಬಲಿಸುತ್ತಿಲ್ಲ. 1998ರ ಸ್ಫೋಟದ ನಂತರ ಅವರು ಡಿಎಂಕೆಗೆ ಮತ ಹಾಕುವುದನ್ನೇ ನಿಲ್ಲಿಸಿದ್ದಾರೆ. ಆಗ ಬಂಧನಕ್ಕೆ ಒಳಗಾದ ಕೆಲವು ಯುವಕರು ಈಗಲೂ ಜೈಲಿನಲ್ಲಿದ್ದಾರೆ. ಮುಸ್ಲಿಮರು ಈ ಬಾರಿ ಹೇಗೆ ಮತ ಚಲಾಯಿಸುತ್ತಾರೆ ಎಂಬುದೂ ತಿಳಿಯದು' ಎನ್ನುತ್ತಾರೆ ಈ ಕ್ಷೇತ್ರದ ಮತದಾರ ಸೆಂಥಿಲ್‌ನಾಥನ್.

ಕಳೆದ ಬಾರಿ ಗೆದ್ದವರು

ಕೆ. ಅಮ್ಮನ್ ಅರ್ಜುನನ್ (ಎಐಎಡಿಎಂಕೆ)
2ನೇ ಸ್ಥಾನ: ಎಸ್. ಮಯೂರ ಜಯಕುಮಾರ್
ಅಂತರ: **17,419**

ಈ ಬಾರಿಯ ಅಭ್ಯರ್ಥಿಗಳು

ಕಮಲ್‌ಹಾಸನ್ (ಎಂಎನ್‌ಎಂ)
ವನತಿ ಶ್ರೀನಿವಾಸನ್ (ಬಿಜೆಪಿ)
ಮಯೂರ ಎಸ್. ಜಯಕುಮಾರ್ (ಕಾಂಗ್ರೆಸ್)
ದೊರೆಸ್ವಾಮಿ (ಎಎಂಎಂಕೆ)
ಅಬ್ದುಲ್ ವಹಾಬ್ (ಎನ್‌ಟಿಕೆ)
ಮತದಾರರ ಸಂಖ್ಯೆ: **2,51389**

ಪ್ರಭು ಚವಾಣ್ ವಿರುದ್ಧ ಆರೋಪ; ಸಚಿವರ ವಿಷಾದ

'ಹಡಪದ ಸಮಾಜಕ್ಕೆ ಅವಮಾನ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವಾಣ್ ಅವರು ಮಂಗಳವಾರ ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಹಡಪದರು ಶಾಸಕರಾಗಿ ಆಯ್ಕೆಯಾದರೆ ದಾಡಿ, ಕಟಿಂಗ್ ಮಾಡುತ್ತ ತಿರುಗುತ್ತಾರೆಯೇ ಎಂದು ಹೇಳಿ ನಮ್ಮ ಸಮಾಜಕ್ಕೆ ಅವಮಾನ ಮಾಡಿದ್ದಾರೆ' ಎಂದು ಹಡಪದ ಸಮಾಜ ಸಂಘದ ಕಲಬುರ್ಗಿ ವಿಭಾಗೀಯ ಘಟಕದ ಅಧ್ಯಕ್ಷ ಹಾಗೂ ಈ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಈರಣ್ಣ ಹಡಪದ ಆರೋಪಿಸಿದ್ದಾರೆ.

ಈರಣ್ಣ ಹಡಪದ

ಪ್ರಭು ಚವಾಣ್

'ಕಾಯಕ ಸಮಾಜಕ್ಕೆ ಈ ರೀತಿ ಅವಮಾನ ಮಾಡುವುದು ಸರಿಯಲ್ಲ. ಸಚಿವರು ತಕ್ಷಣ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಅವರ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ, ವಿಧಾನಸೌಧದ ಎದುರು ಧರಣಿ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದ್ದಾರೆ.

ಖೂಬಾ ಖಂಡನೆ: 'ಹಡಪದ ಸಮಾಜದವರೊಬ್ಬರು ಇಲ್ಲಿನ ಉಪ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಅಂಥವರು ಆಯ್ಕೆಯಾದರೆ ಏನು ಶೇವಿಂಗ್ ಮಾಡುತ್ತಾರೆಯೇ? ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವಾಣ್ ಅಪಹಾಸ್ಯ ಮಾಡಿರುವುದನ್ನು ಖಂಡಿಸುತ್ತೇನೆ' ಎಂದು ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಹೇಳಿದ್ದಾರೆ.

ಸಚಿವರ ಹೇಳಿಕೆ: 'ಪ್ರಚಾರ ಸಭೆಯಲ್ಲಿ ಹಡಪದ ಸಮಾಜದ ವಿರುದ್ಧ ಮಾತನಾಡಿಲ್ಲ. ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆದುಕೊಳ್ಳಲು ಕೆಲ ಕಿಡಿಗೇಡಿಗಳು ತಪ್ಪು ಸಂದೇಶಗಳನ್ನು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿಬಿಡುತ್ತಿದ್ದಾರೆ' ಎಂದು ಸಚಿವ ಪ್ರಭು ಚವಾಣ್ ಹೇಳಿದ್ದಾರೆ.

'ಹಡಪದ ಸಮಾಜದ ಬಗ್ಗೆ ನನಗೆ ಅಪಾರ ಗೌರವ ಇದೆ. ಹಿಂದಿಯಲ್ಲಿ ಭಾಷಣ ಮಾಡುವಾಗ ಕೆಲವರಿಗೆ ತಪ್ಪು ಗ್ರಹಿಕೆ ಆಗಿದ್ದರೆ ವಿಷಾದಿಸುತ್ತೇನೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಶರಣು ಸಲಗರ ಪತ್ನಿ, ಕೆಎಎಸ್ ಅಧಿಕಾರಿ ಬಳಿ ₹ 60 ಲಕ್ಷ ಮೌಲ್ಯದ ಚಿನ್ನ

ಬೀದರ್: ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಶರಣು ಸಲಗರ ₹ 6.30 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ.

ಕೆಎಎಸ್ ಅಧಿಕಾರಿಯಾಗಿರುವ ಅವರ ಪತ್ನಿ ಸಾವಿತ್ರಿ ಸಲಗರ ವಾರ್ಷಿಕ ₹ 5.31 ಲಕ್ಷ ಆದಾಯ ಹೊಂದಿದ್ದು, ಅವರ ಬಳಿ ₹ 60 ಲಕ್ಷ ಮೌಲ್ಯದ 1 ಕೆ.ಜಿ 308 ಗ್ರಾಂ ಚಿನ್ನ ಮತ್ತು ₹ 4 ಲಕ್ಷ ಮೌಲ್ಯದ ಬೆಳ್ಳಿಯ ಆಭರಣಗಳಿವೆ.

ತಾವು ಒಟ್ಟು ₹ 1.59 ಕೋಟಿ ಚರಾಸ್ತಿ, ₹ 1.05 ಕೋಟಿ ಸ್ಥಿರಾಸ್ತಿ ಹಾಗೂ ₹ 10.71 ಲಕ್ಷ ವೈಯಕ್ತಿಕ ವಾರ್ಷಿಕ ಆದಾಯ ಹೊಂದಿರುವುದಾಗಿ ಶರಣು ಅವರು ಮಂಗಳವಾರ ನಾಮಪತ್ರದೊಂದಿಗೆ ನೀಡಿರುವ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಾವಿತ್ರಿ ಹೆಸರಲ್ಲಿ ₹ 79.79 ಲಕ್ಷ ಚರಾಸ್ತಿ, ₹ 1.85 ಕೋಟಿ ಸ್ಥಿರಾಸ್ತಿ ಇದೆ. ಕಲಬುರ್ಗಿಯಲ್ಲಿ ಮನೆ ಇದ್ದು, ₹ 17.47 ಲಕ್ಷ ಗೃಹಸಾಲ ಇದೆ.

ಶರಣು ವಿರುದ್ಧ ಎರಡು ಕ್ರಿಮಿನಲ್ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ.

ಬೆಳಗಾವಿಯಲ್ಲಿ 18 ಅಭ್ಯರ್ಥಿಗಳು ಕಣದಲ್ಲಿ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರ, ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ನಾಮಪತ್ರ ಪರಿಶೀಲನೆ ಪ್ರಕ್ರಿಯೆ ಬುಧವಾರ ಪೂರ್ಣಗೊಂಡಿದೆ.

ಬೆಳಗಾವಿಯಲ್ಲಿ ಬಿಜೆಪಿಯ ಮಂಗಳಾ ಅಂಗಡಿ, ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಸೇರಿ ಒಟ್ಟು 18 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ.

ಮಸ್ಕಿಯಲ್ಲಿ ಬಿಜೆಪಿಯ ಪ್ರತಾಪಗೌಡ ಪಾಟೀಲ, ಕಾಂಗ್ರೆಸ್‌ನ ಬಸನಗೌಡ ಸೇರಿ 10 ಮಂದಿ, ಬಸವಕಲ್ಯಾಣದಲ್ಲಿ ಕಾಂಗ್ರೆಸ್‌ನ ಮಾಲಾ ಬಿ.ನಾರಾಯಣರಾವ್, ಬಿಜೆಪಿಯ ಶರಣು ಸಲಗರ, ಜೆಡಿಎಸ್‌ನ ಸೈಯ್ಯದ್ ಯಸಬರ ಆಲಿ ಖಾದರಿ, ಬಿಜೆಪಿ ಬಂಡಾಯ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಸೇರಿ 14 ಅಭ್ಯರ್ಥಿಗಳ ನಾಮಪತ್ರ ಸಿಂಧುವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಮಸ್ಕಿ: ಮೊದಲ ಬಾರಿ ಪಕ್ಷಗಳ ಪ್ರತಿಷ್ಠೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ರಾಯಚೂರು: ಮಸ್ಕಿ ಉಪಚುನಾವಣೆ ಗೆಲುವು ಕಾಂಗ್ರೆಸ್ ಮತ್ತು ಬಿಜೆಪಿಗೆ ಪ್ರತಿಷ್ಠೆಯಾಗಿರುವುದು ಇದೇ ಮೊದಲು.

2008 ರಲ್ಲಿ ಮಸ್ಕಿ ವಿಧಾನಸಭೆ ಕ್ಷೇತ್ರವು ಅಸ್ತಿತ್ವಕ್ಕೆ ಬಂದಿದ್ದು, ಇದುವರೆಗೂ ನಡೆದ ಮೂರು ಚುನಾವಣೆಗಳಲ್ಲೂ ಪ್ರತಾಪಗೌಡ ಪಾಟೀಲ ಜಯ ಸಾಧಿಸಿದ್ದಾರೆ. ಒಂದು ಬಾರಿ ಬಿಜೆಪಿಯಿಂದ ಮತ್ತು ಎರಡು ಸಲ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಪಕ್ಷ ಬದಲಿಸಿದ್ದರೂ 'ವ್ಯಕ್ತಿ ನೋಡಿ' ಮತದಾರರು ಮತ ನೀಡಿದ್ದರು.

ಆದರೆ, ಈ ಉಪಚುನಾವಣೆಯಲ್ಲಿ ಪಕ್ಷದ ಹೆಸರು ಮುನ್ನೆಲೆಯಲ್ಲಿದ್ದು, ರಾಜ್ಯಮಟ್ಟದ ನಾಯಕರು ಭಾಗಿಯಾಗಿ ಕ್ಷೇತ್ರದಾದ್ಯಂತ ಸಂಚರಿಸಿ ಮತಯಾಚನೆ ಮಾಡುತ್ತಿದ್ದಾರೆ.

ಸಚಿವ ಬಿ.ಶ್ರೀರಾಮುಲು, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಮಸ್ಕಿಯಲ್ಲಿಯೇ ಬೀಡುಬಿಟ್ಟಿದ್ದಾರೆ. ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಏಪ್ರಿಲ್ 1 ರಿಂದ ಪ್ರಚಾರಕ್ಕೆ ಬರುತ್ತಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಅವರು ವಾರದಿಂದ ಕ್ಷೇತ್ರ ಸುತ್ತುತ್ತಿದ್ದಾರೆ.

2018ರಲ್ಲಿ ಮೊದಲ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಸನಗೌಡ ತುರ್ವಿಹಾಳ ಅವರು 213 ಮತಗಳ ಅಂತರದಿಂದ ಸೋತಿದ್ದರು. ಈಗ ಇಬ್ಬರೂ ಪಕ್ಷ ಬದಲಿಸಿದ್ದಾರೆ.

ದಾಖಲೆ ಇಲ್ಲದ ₹ 42.71 ಲಕ್ಷ ವಶಕ್ಕೆ

ಘಟಪ್ರಭಾ (ಬೆಳಗಾವಿ ಜಿಲ್ಲೆ): ಸಮರ್ಪಕ ದಾಖಲೆಗಳಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ ₹ 42.71 ಲಕ್ಷವನ್ನು ಸಮೀಪದ ಚೆಕ್ ಪೋಸ್ಟ್‌ನಲ್ಲಿ ಬುಧವಾರ ವಶಪಡಿಸಿಕೊಳ್ಳಲಾಗಿದೆ.

ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆಯಲ್ಲಿ ಸ್ಥಾಪಿಸಿರುವ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಕಾರ್ಯನಿರತ ತಂಡವು ಮಹಾರಾಷ್ಟ್ರ ಮೂಲದ ಕಾರು ತಪಾಸಣೆ ನಡೆಸಿದಾಗ ನಗದು ಪತ್ತೆಯಾಗಿದೆ.

ಕೇಂದ್ರ, ಬಿಜೆಪಿ ವಿರುದ್ಧ ಮಮತಾ ಆಕ್ರೋಶ: ಬಿಜೆಪಿಯೇತರ ಪಕ್ಷಗಳ ಮುಖಂಡರಿಗೆ ಪತ್ರ

'ಒಕ್ಕೂಟ ವ್ಯವಸ್ಥೆಗೆ ಬಿಜೆಪಿ ಪ್ರಹಾರ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವಣ ತೀವ್ರ ಹಣಾಹಣಿ ಮತ್ತೊಂದು ಮಜಲಿಗೆ ಹೋಗಿದೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಬಿಜೆಪಿಯೇತರ ಪಕ್ಷಗಳ ನಾಯಕರಿಗೆ ಪತ್ರ ಬರೆದು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. ಸ್ವಾತಂತ್ರ್ಯಾನಂತರ ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧ ಇಷ್ಟು ಹದಗೆಟ್ಟಿರುವುದು ಇದೇ ಮೊದಲು ಎಂದಿದ್ದಾರೆ. ಬಿಜೆಪಿ ಪ್ರಜಾಪ್ರಭುತ್ವದ ಮೇಲೆ ಪ್ರಹಾರ ನಡೆಸುತ್ತಿದೆ ಎಂದಿದ್ದಾರೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೂ ಮಮತಾ ಅವರು ಪತ್ರ ಕಳುಹಿಸಿದ್ದಾರೆ.

ಸತತ 10 ವರ್ಷಗಳಿಂದ ಸರ್ಕಾರ ನಡೆಸುತ್ತಿರುವ ಮಮತಾ ಅವರನ್ನು ಅಧಿಕಾರದಿಂದ ಇಳಿಸಲು ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಇದರಿಂದ ಕೆರಳಿರುವ ಮಮತಾ ಅವರು ಬಿಜೆಪಿ ವಿರುದ್ಧ ವಿರೋಧ ಪಕ್ಷಗಳನ್ನು ಒಟ್ಟಾಗಿಸುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಈ ಪತ್ರವನ್ನು ವಿಶ್ಲೇಷಿಸಲಾಗಿದೆ.

'ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆ ಮೇಲೆ ಬಿಜೆಪಿ ಮತ್ತು ಕೇಂದ್ರ ಸರ್ಕಾರ ನಡೆಸಿರುವ ಸರಣಿ ಪ್ರಹಾರದತ್ತ ನಿಮ್ಮೆಲ್ಲರ ಗಮನ ಸೆಳೆಯುವುದಕ್ಕಾಗಿ ಈ ಪತ್ರ ಬರೆಯುತ್ತಿದ್ದೇನೆ' ಎಂದು ಮಮತಾ ಅವರು ಪತ್ರದಲ್ಲಿ ಹೇಳಿದ್ದಾರೆ.

ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ (ತಿದ್ದುಪಡಿ) ಮಸೂದೆಯನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದ್ದು ಅತ್ಯಂತ ಕಳವಳಕಾರಿ ಬೆಳವಣಿಗೆ ಎಂದು ಅವರು ಬಣ್ಣಿಸಿದ್ದಾರೆ.

'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ದೆಹಲಿ ಸರ್ಕಾರದ ಎಲ್ಲ ಅಧಿಕಾರಗಳನ್ನು ಈ ಕಾನೂನಿನ ಮೂಲಕ ಕೇಂದ್ರವು ಕಸಿದುಕೊಂಡಿದೆ. ಈ ಎಲ್ಲ ಅಧಿಕಾರಗಳನ್ನು ಕೇಂದ್ರವು ನಿಯೋಜಿಸುವ ಲೆಫ್ಟಿನೆಂಟ್ ಜನರಲ್ ಅವರ ಕೈಗೆ ಕೊಟ್ಟಿದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

ಸೋನಿಯಾ ಅವರಲ್ಲದೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಡಿಎಂಕೆಯ ಎಂ.ಕೆ. ಸ್ಟಾಲಿನ್, ಎಸ್‌ಪಿಯ ಅಖಿಲೇಶ್ ಯಾದವ್, ಆರ್‌ಜೆಡಿಯ ತೇಜಸ್ವಿ ಯಾದವ್, ಶಿವಸೇನಾದ ಉದ್ಧವ್ ಠಾಕ್ರೆ, ಎಎಪಿಯ ಅರವಿಂದ ಕೇಜ್ರಿವಾಲ್, ವೈಎಸ್‌ಆರ್ ಕಾಂಗ್ರೆಸ್‌ನ ಜಗನ್ ರೆಡ್ಡಿ, ಎನ್‌ಸಿಯ ಫಾರೂಕ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ ಮುಂತಾದವರಿಗೆ ಪತ್ರವನ್ನು ಕಳುಹಿಸಲಾಗಿದೆ.

ಮುಫ್ತಿ ಬೆಂಬಲ: ಮಮತಾ ಅವರಿಗೆ ಮೆಹಬೂಬಾ ಮುಫ್ತಿ ಅವರು ಬೆಂಬಲ ಸೂಚಿಸಿದ್ದಾರೆ. ದೇಶದ ಪ್ರಜಾಪ್ರಭುತ್ವ ಉಳಿಯಬೇಕಿದ್ದರೆ ವಿರೋಧ ಪಕ್ಷಗಳೆಲ್ಲ ಒಂದಾಗಲೇಬೇಕಿರುವ ಅನಿವಾರ್ಯ ಸೃಷ್ಟಿಯಾಗಿದೆ ಎಂದು ಹೇಳಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಸಿಂಗೂರ್‌ನಲ್ಲಿ ಬುಧವಾರ ನಡೆಸಿದ ಚುನಾವಣಾ ಪ್ರಚಾರ ಸಭೆಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು ಪಿಟಿಐ ಚಿತ್ರ

ಮಮತಾ ಬೆದರಿಕೆ: ಬಿಜೆಪಿ ದೂರು

'ವಿಧಾನಸಭಾ ಚುನಾವಣೆ ಮುಗಿಸಿ ಭದ್ರತಾ ಪಡೆಗಳು ರಾಜ್ಯವನ್ನು ತೊರೆದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಹೇಳುವ ಮೂಲಕ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಬೆಂಬಲಿಗರಿಗೆ ಬೆದರಿಕೆ ಹಾಕಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

'ಮಮತಾ ಅವರ ಇಂತಹ ಮಾತುಗಳಿಂದಾಗಿ ಕಳೆದ ಹಲವು ದಿನಗಳಲ್ಲಿ ದೊಡ್ಡ ಪ್ರಮಾಣದ ಹಿಂಸಾಚಾರ ವರದಿಯಾಗುತ್ತಿದೆ. ಮಾರ್ಚ್ 29ರಂದು ನಂದಿಗ್ರಾಮದಲ್ಲಿ ಮಮತಾ ಮಾಡಿದ ಭಾಷಣ ಇದಕ್ಕೆ ಪುಷ್ಟಿ ನೀಡುವಂತಿದೆ. ಕೇಂದ್ರೀಯ ಭದ್ರತಾಪಡೆಗಳು ಒಂದು ದಿನ ರಾಜ್ಯದಿಂದ ಹೊರನಡೆದಾಗ, ತಾನು ಬಂಗಾಳದಲ್ಲೇ ಇರುತ್ತೇನೆ ಎಂದು ಮಮತಾ ಹೇಳಿದ್ದಾರೆ. ಹಾಗಾದರೆ ಮಮತಾ ವಿರೋಧಿಗಳ ರಕ್ಷಣೆ ಯಾರು ಮಾಡುತ್ತಾರೆ' ಎಂದು ಆಯೋಗಕ್ಕೆ ಬರೆದ ಪತ್ರದಲ್ಲಿ ಬಿಜೆಪಿ ಪ್ರಶ್ನಿಸಿದೆ.

'ರಾಜ್ಯಕ್ಕೆ ಗೂಂಡಾಗಳು ಬಂದಿದ್ದಾರೆ': ನಂದಿಗ್ರಾಮದಲ್ಲಿ ಮತದಾರರನ್ನು ಬೆದರಿಸಲು ಇತರ ರಾಜ್ಯಗಳ ಗೂಂಡಾಗಳು ಬಂದಿದ್ದಾರೆ ಎಂದು ಮಮತಾ ಬ್ಯಾನರ್ಜಿ ಅವರು ದೂರಿದ್ದು, ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಪೂರ್ವ ಮೇದಿನಿಪುರ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಿಂದ ಸ್ಥಳೀಯರನ್ನು ಹೊರಗೆ ಹಾಕಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ನಂದಿಗ್ರಾಮದಲ್ಲಿ ನಿಷೇಧಾಜ್ಞೆ

ಗುರುವಾರ ಮತದಾನ ನಡೆಯಲಿರುವ ನಂದಿಗ್ರಾಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬುಧವಾರದಿಂದ ನಿಷೇಧಾಜ್ಞೆ ಜಾರಿ ಮಾಡಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ಶುಕ್ರವಾರ ಮಧ್ಯರಾತ್ರಿಯವರೆಗೆ ಇದು ಜಾರಿಯಲ್ಲಿರುತ್ತದೆ.

'ಹೆಲಿಕಾಪ್ಟರ್ ಮೂಲಕವೂ ಕ್ಷೇತ್ರದ ಮೇಲೆ ಕಣ್ಗಾವಲು ಇಡಲಾಗಿದೆ. ಕ್ಷೇತ್ರದ ಮತದಾರರಲ್ಲದವರು ಕ್ಷೇತ್ರ ವ್ಯಾಪ್ತಿಯೊಳಗೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ಮಮತಾ ಹಾಗೂ ಸುವೇಂದು ಅವರ ಸ್ಪರ್ಧೆಯಿಂದಾಗಿ ನಂದಿಗ್ರಾಮವು ಅತ್ಯಂತ ಸೂಕ್ಷ್ಮ ಕ್ಷೇತ್ರವೆನಿಸಿದೆ. ಯಾವ ಕಾರಣಕ್ಕೂ ಇಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಾರದು, ಜನರು ಭಯಮುಕ್ತರಾಗಿ ಬಂದು ಮತಚಲಾಯಿಸುವುದನ್ನು ಖಚಿತಪಡಿಸಲು ಇಚ್ಛಿಸುತ್ತೇವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಂದಿಗ್ರಾಮದಲ್ಲಿ ಬುಧವಾರ ಕೆಲವೇ ಕೆಲವು ಅಂಗಡಿಗಳು ತೆರೆದಿದ್ದವು. ವಾಹನ ಸಂಚಾರವೂ ವಿರಳವಾಗಿದ್ದುದರಿಂದ ಇಡೀ ಕ್ಷೇತ್ರ ನಿರ್ಜನ ಪ್ರದೇಶದಂತೆ ಕಂಡುಬಂದಿತು.

ಇಂದು ಎರಡನೇ ಹಂತದ ಮತದಾನ

ಒಂದನೇ ಪುಟದಿಂದ...

ನಂದಿಗ್ರಾಮದಲ್ಲಿ, ಮಮತಾ ಬ್ಯಾನರ್ಜಿ ಹಾಗೂ ಒಂದು ಕಾಲದಲ್ಲಿ ಅವರ ಆಪ್ತರೆನಿಸಿಕೊಂಡಿದ್ದ ಸುವೇಂದು ಅಧಿಕಾರಿ ಕಣದಲ್ಲಿದ್ದಾರೆ. ಈ ಕ್ಷೇತ್ರದ ಎಲ್ಲಾ ಮತಗಟ್ಟೆಗಳನ್ನೂ ಸೂಕ್ಷ್ಮ ಮತಗಟ್ಟೆಗಳೆಂದು ಚುನಾವಣಾ ಆಯೋಗ ಘೋಷಿಸಿದೆ. ಕೇಂದ್ರೀಯ ಪಡೆಗಳ 651 ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟಿಎಂಸಿ ಹಾಗೂ ಬಿಜೆಪಿ ಎಲ್ಲಾ 30 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಇದಲ್ಲದೆ, ಸಿಪಿಎಂ 15 ಹಾಗೂ ಅದರ ಮಿತ್ರಪಕ್ಷಗಳು 15 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ.

ಅಸ್ಸಾಂನ 39 ಕ್ಷೇತ್ರಗಳಲ್ಲಿ 26 ಮಹಿಳೆಯರೂ ಸೇರಿದಂತೆ ಒಟ್ಟು 345 ಮಂದಿ ಕಣದಲ್ಲಿದ್ದಾರೆ. ಬಿಜೆಪಿ 34 ಕ್ಷೇತ್ರ, ಅದರ ಮಿತ್ರಪಕ್ಷ ಅಸ್ಸಾಂ ಗಣ ಪರಿಷತ್ ಹಾಗೂ ಯುಪಿಪಿಎಲ್ ಕ್ರಮವಾಗಿ ಆರು ಹಾಗೂ ಮೂರು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದಿವೆ. ಕೆಲವು ಕ್ಷೇತ್ರಗಳಲ್ಲಿ ಈ ಪಕ್ಷದ ಅಭ್ಯರ್ಥಿಗಳೇ ಪರಸ್ಪರರ ವಿರುದ್ಧ ಸೌಹಾರ್ದ ಸ್ಪರ್ಧೆಯಲ್ಲಿದ್ದಾರೆ.

ಮಹಾಮೈತ್ರಿಯ ಪಕ್ಷಗಳಲ್ಲಿ ಕಾಂಗ್ರೆಸ್ 28 ಕ್ಷೇತ್ರಗಳು, ಎಐಯುಡಿಎಫ್ 7 ಹಾಗೂ ಬೋಡೊ ಪೀಪಲ್ಸ್ ಫ್ರಂಟ್ ನಾಲ್ಕು ಕ್ಷೇತ್ರಗಳಲ್ಲಿ ಕಣಕ್ಕಿಳಿದಿವೆ. ಹೊಸ ಪಕ್ಷ ಅಸ್ಸಾಂ ಜಾತೀಯ ಪರಿಷತ್ 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ.

ನುಡಿ–ಕಿಡಿ

ನಂದಿಗ್ರಾಮದಲ್ಲಿ ನನ್ನ ಕಾರಿನ ಮೇಲೆ ಹಲ್ಲೆ ನಡೆಸಿದವರ ಚಿತ್ರ ಮತ್ತು ವಿಡಿಯೊ ಇವೆ. ಚುನಾವಣೆಯ ನಂತರ ಈ ವಿಷಯವನ್ನು ಕೈಗೆತ್ತಿಕೊಳ್ಳುತ್ತೇನೆ. ಅವರಿಗೆ ನನ್ನ ಕಾರಿನ ಮೇಲೆ ದಾಳಿ ಮಾಡಲು ಎಷ್ಟು ಧೈರ್ಯ! ಚುನಾವಣೆ ಇರುವುದರಿಂದ ನಾನು ಸುಮ್ಮನಿದ್ದೇನೆ. ಇಲ್ಲದಿದ್ದರೆ ಅವರು ಎಷ್ಟು ದೊಡ್ಡವರೆಂದು ನೋಡೇಬಿಡುತ್ತಿದ್ದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಬಿಜೆಪಿ ಆರೋಪಿಸಿರುವಂತೆ ಬಾಂಗ್ಲಾದೇಶದಿಂದ ಪಶ್ಚಿಮ ಬಂಗಾಳಕ್ಕೆ ಒಳನುಸುಳುವಿಕೆ ನಡೆಯುತ್ತಿದ್ದರೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಎಸ್‌ಎಫ್ ಮಹಾನಿರ್ದೇಶಕರು ರಾಜೀನಾಮೆ ನೀಡಬೇಕು. ಏಕೆಂದರೆ ದೇಶದ ಗಡಿಯನ್ನು ಭದ್ರಪಡಿಸುವುದು ಅವರ ಕರ್ತವ್ಯವೇ ಹೊರತು ಮಮತಾ ಬ್ಯಾನರ್ಜಿ ಸರ್ಕಾರದ್ದಲ್ಲ

ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಮುಖಂಡ

ಮಮತಾ ಆಟ ಮುಗಿಯಿತು. ಮೊದಲ ಹಂತದಲ್ಲಿ ದಾಖಲೆ ಮತದಾನ ಆಗಿರುವುದನ್ನು ನೋಡಿದರೆ, ಜನರು ಬದಲಾವಣೆಗೆ ಹಂಬಲಿಸುತ್ತಿದ್ದಾರೆ ಎಂದು ತಿಳಿಯುತ್ತದೆ. ಚುನಾವಣೆ ಶಾಂತಿಯುತವಾಗಿ ನಡೆದಿರುವುದು ಹಾಗೂ ಟಿಎಂಸಿ ಗೂಂಡಾಗಳಿಗೆ ಏನೂ ಮಾಡಲು ಆಗದಿರುವುದು ಮಮತಾ ಅವರಲ್ಲಿ ಆತಂಕ ಮೂಡಿಸಿದೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದಲ್ಲಿ ನೆಲೆ ಕಳೆದುಕೊಂಡಿರುವುದನ್ನು ಮನಗಂಡಿದ್ದಾರೆ. ಈ ಹತಾಶೆಯಿಂದಲೇ ಅವರು ತಮ್ಮ ಗೋತ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಈ ನಾಟಕವು ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಅವರ ನೆರವಿಗೆ ಬರುವುದಿಲ್ಲ

ಪ್ರಕಾಶ್ ಜಾವಡೇಕರ್, ಕೇಂದ್ರ ಸಚಿವ

ಮೋದಿ ಅವರಂತೆ ಸುಳ್ಳು ಹೇಳಲ್ಲ: ರಾಹುಲ್ ಗಾಂಧಿ

ಛಾಯಾಗಾಂವ್/ಭರ್ಕೆತ್ರಿ (ಅಸ್ಸಾಂ) (ಪಿಟಿಐ): ಬಿಜೆಪಿ ವಿರುದ್ಧದ ವಾಗ್ದಾಳಿಯನ್ನು ಇನ್ನಷ್ಟು ಹರಿತಗೊಳಿಸಿರುವ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ತಾವು ಪ್ರಧಾನಿ ನರೇಂದ್ರ ಮೋದಿಯವರ ಹಾಗೆ ದಿನದ 24 ತಾಸೂ ಸುಳ್ಳು ಹೇಳುವ ಕೆಲಸ ಮಾಡುವುದಿಲ್ಲ ಎಂದಿದ್ದಾರೆ.

ಸತ್ಯ ಏನು ಎಂದು ಅರಿಯಬೇಕಿದ್ದರೆ ತಮ್ಮ ಮಾತು ಕೇಳುವಂತೆ ಅಸ್ಸಾಂನ ಛಾಯಾಗಾಂವ್ ಕ್ಷೇತ್ರದಲ್ಲಿನ ಪ್ರಚಾರ ಭಾಷಣದಲ್ಲಿ ಅವರು ಹೇಳಿದರು.

'ನಾನು ಸುಳ್ಳು ಹೇಳುವುದಕ್ಕಾಗಿ ಇಲ್ಲಿಗೆ ಬಂದಿಲ್ಲ. ಏಕೆಂದರೆ ನನ್ನ ಹೆಸರು ನರೇಂದ್ರ ಮೋದಿ ಅಲ್ಲ. ಅಸ್ಸಾಂ, ರೈತರು ಅಥವಾ ಇನ್ನಾವುದೇ ವಿಷಯದ ಬಗ್ಗೆ ಅವರು ಹೇಳುವ ಸುಳ್ಳನ್ನು ಕೇಳಲು ಬಯಸಿದರೆ ಟಿ.ವಿ. ಹಾಕಿ ನೋಡಿ. ವಾರದ ಎಲ್ಲ ದಿನವೂ ಅವರು ಸುಳ್ಳು ಹೇಳುತ್ತಿರುತ್ತಾರೆ. ಸತ್ಯ ಏನೆಂದು ತಿಳಿಯಬೇಕಿದ್ದರೆ ನನ್ನ ಮಾತು ಕೇಳಿ' ಎಂದು ರಾಹುಲ್ ಹೇಳಿದ್ದಾರೆ.

'ವಿವಿಧ ಭಾಷೆ, ಜನಾಂಗ, ಸಿದ್ಧಾಂತಗಳ ಜನರು ಶಾಂತಿಯುತವಾಗಿ ನನ್ನ ಮಾತು ಕೇಳಿದ್ದಾರೆ. ಇದು ಅಸ್ಸಾಂ. ಆದರೆ ಸಹೋದರರು ಪರಸ್ಪರ ಬಡಿದಾಡುವಂತೆ ಬಿಜೆಪಿ ಮಾಡುತ್ತಿದೆ. ದ್ವೇಷ ಹರಡುತ್ತಿದೆ' ಎಂದು ರಾಹುಲ್ ಆರೋಪಿಸಿದ್ದಾರೆ.

ರಾಹುಲ್ ಗಾಂಧಿ ಅವರು ಪ್ರಚಾರ ರ‍್ಯಾಲಿಗೂ ಮುನ್ನ ಕಾಮಾಕ್ಯ ದೇವಸ್ಥಾನಕ್ಕೆ ಭೇಟಿನೀಡಿದರು –ಪಿಟಿಐ ಚಿತ್ರ

ದೇಗುಲ ಭೇಟಿ: ರಾಹುಲ್ ಗಾಂಧಿ ಅವರು ಗುರುವಾರ ಕಾಮಾಕ್ಯ ದೇವಸ್ಥಾನಕ್ಕೆ ಭೇಟಿನೀಡಿದರು. ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ, 'ಕೊಟ್ಟ ಭರವಸೆಗಳನ್ನು ಈಡೇರಿಸಿದ ಇತಿಹಾಸ ನಮ್ಮ ಪಕ್ಷಕ್ಕೆ ಇದೆ' ಎಂದರು.

'ಸಿಎಎ ರದ್ದತಿ, ಐದು ವರ್ಷಗಳಲ್ಲಿ ಐದು ಲಕ್ಷ ಯುವಕರಿಗೆ ಸರ್ಕಾರಿ ಉದ್ಯೋಗ, ಪ್ರತಿ ಮನೆಗೆ 200 ಯೂನಿಟ್‌ಗಳಷ್ಟು ಉಚಿತ ವಿದ್ಯುತ್, ಚಹಾ ತೋಟದ ಕಾರ್ಮಿಕರ ವೇತನ ಹೆಚ್ಚಳ ಹಾಗೂ ಗೃಹಿಣಿಯರಿಗೆ ಮಾಸಿಕ ₹ 2000 ಸಹಾಯಧನಗಳ ಐದು 'ಖಾತರಿ'ಗಳನ್ನು (ಗ್ಯಾರಂಟಿ) ನಾವು ನೀಡಿದ್ದೇವೆ. ಕೊಟ್ಟ ಮಾತನ್ನು ನಾವು ಉಳಿಸಿಕೊಳ್ಳುತ್ತೇವೆ. ಪಂಜಾಬ್, ಕರ್ನಾಟಕ ಹಾಗೂ ಛತ್ತೀಸಗಡದಲ್ಲಿ ರೈತರ ಸಾಲ ಮನ್ನಾದ ಭರವಸೆ ನೀಡಿದ್ದೆವು, ಅದರಂತೆ ನಡೆದುಕೊಂಡಿದ್ದೇವೆ' ಎಂದರು.

ನುಸುಳುಕೋರರನ್ನು ಬಿಡೆವು: ಗೃಹ ಸಚಿವ ಶಾ

ಬಿಜನಿ (ಪಿಟಿಐ): 'ಅಸ್ಸಾಂ ಅನ್ನು ನುಸುಳುಕೋರರ ಅಡ್ಡೆಯಾಗಿಸಲು ಬಿಡುವುದಿಲ್ಲ' ಎಂದು ಕೇಂದ್ರದ ಗೃಹಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ.

ಇಲ್ಲಿ ಆಯೋಜಿಸಲಾಗಿದ್ದ ಪ್ರಚಾರ ರ‍್ಯಾಲಿಯಲ್ಲಿ, ಎಐಯುಡಿಎಫ್‌ನ ಮುಖ್ಯಸ್ಥ ಬದ್ರುದ್ದೀನ್ ಅಜ್ಮಲ್ ವಿರುದ್ಧ ನೇರ ವಾಗ್ದಾಳಿ ನಡೆಸಿದ ಶಾ, 'ನುಸುಳುಕೋರರು ಒತ್ತುವರಿ ಮಾಡಿದ್ದ ಜಾಗವನ್ನು ಕಳೆದ ಐದು ವರ್ಷಗಳಲ್ಲಿ ತೆರವು ಮಾಡಲಾಗಿದೆ. ಅಸ್ಸಾಂ ಅನ್ನು ಪುನಃ ನುಸುಳುಕೋರರ ಕೇಂದ್ರವಾಗಿಸಲು ಬಿಜೆಪಿ ಬಿಡುವುದಿಲ್ಲ' ಎಂದರು.

ಅಮಿತ್ ಶಾ ಜತೆಗೆ ಅಭಿಮಾನಿಯೊಬ್ಬ ಅಸ್ಸಾಂನ ಕಾಮರೂಪ್‌ನಲ್ಲಿ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ ಕ್ಷಣ

'ಮುಂದಿನ ಸರ್ಕಾರದ ಬೀಗ ಮತ್ತು ಕೀ ನನ್ನ ಕೈಯಲ್ಲಿದೆ, ಅಸ್ಸಾಂನ ಮುಂದಿನ ಸರ್ಕಾರ ಯಾರದ್ದಾಗಬೇಕು ಎಂಬುದನ್ನು ನಾನು ನಿರ್ಧರಿಸಲಿದ್ದೇನೆ' ಎಂದು ಅಜ್ಮಲ್ ಹೇಳುತ್ತಾರೆ. ವಾಸ್ತವದಲ್ಲಿ ಬೀಗ ಮತ್ತು ಕೀ ಜನರ ಕೈಯಲ್ಲಿದೆ ಎಂಬುದನ್ನು ಅವರು ಮರೆತಿದ್ದಾರೆ' ಎಂದು ಶಾ ಹೇಳಿದರು (ಬೀಗ ಮತ್ತು ಕೀ ಎಐಯುಡಿಎಫ್‌ನ ಚುನಾವಣಾ ಚಿಹ್ನೆಯಾಗಿದೆ). ಕಾಂಗ್ರೆಸ್ ವಿರುದ್ಧವೂ ಟೀಕೆಗಳನ್ನು ಮಾಡಿದ ಶಾ, 'ಆ ಪಕ್ಷ ನುಸುಳುಕೋರರನ್ನು ತಡೆಯಲು ವಿಫಲವಾಗಿದೆ. ನಮಗೆ ಇನ್ನೂ ಐದು ವರ್ಷ ಕೊಡಿ, ಮನುಷ್ಯರೇನು, ಹಕ್ಕಿಗಳು ಸಹ ಒಳಗೆ ಬಾರದಂತೆ ನೋಡಿಕೊಳ್ಳುತ್ತೇವೆ ಎಂದರು.

ಚುನಾವಣಾ ಕಣದಲ್ಲಿ

- **ಘರ್ಷಣೆ:** ಪಶ್ಚಿಮ ಬಂಗಾಳದ ಬಿಜ್‌ಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶುಭ್ರಾಂಗ್ಶು ರಾಯ್ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಬಿಜೆಪಿ ಹಾಗೂ ಟಿಎಂಸಿ ಕಾರ್ಯಕರ್ತ ನಡುವೆ ಘರ್ಷಣೆ ನಡೆದಿದೆ. ಗಲಭೆ ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿ ಗುಂಡು ಹಾರಿಸಿದ ಘಟನೆಯೂ ನಡೆದಿದೆ.
- **ಚಾಂಡಿ ವಿಶ್ವಾಸ:** ಕೇರಳ ಹಾಗೂ ಇತರ ರಾಜ್ಯಗಳ ಚುನಾವಣಾ ಫಲಿತಾಂಶವು 2024ರಲ್ಲಿ ಕೇಂದ್ರದಲ್ಲಿ ಮತ್ತೆ ಅಧಿಕಾರ ಹಿಡಿಯುವತ್ತ ಕಾಂಗ್ರೆಸ್‌ನ ಪ್ರಯಾಣದ ಆರಂಭವಾಗಿದೆ ಎಂಬುದರ ಸೂಚನೆಯಾಗಲಿದೆ ಎಂದು ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಹೇಳಿದ್ದಾರೆ.
- **₹110 ಕೋಟಿ ಮೌಲ್ಯದ ವಸ್ತು ವಶ:** ಅಸ್ಸಾಂನಲ್ಲಿ ಈವರೆಗೆ ಒಟ್ಟಾರೆ ₹110 ಕೋಟಿಗೂ ಹೆಚ್ಚಿನ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚಿತ್ರ- ಇರ್ಷಾದ್ ಮಹಮ್ಮದ್

ಸಂವಿಧಾನ ಅಧ್ಯಯನ ಹೇಗಿರಬೇಕು?

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಾಗಿರಲಿ, ಅದರಲ್ಲಿ ಭಾರತದ ಸಂವಿಧಾನ ಕುರಿತಾದ ಪ್ರಶ್ನೆಗಳು ಕಡ್ಡಾಯವಾಗಿ ಬಂದೇ ಬರುತ್ತವೆ. ಹೀಗಾಗಿ ಇದರ ಸೂಕ್ತ ಅಧ್ಯಯನ ಅಗತ್ಯ.



ಚನ್ನಬಸಪ್ಪ ರೊಟ್ಟಿ

ನಮ್ಮ ಸಂವಿಧಾನ ನಮ್ಮ ದೇಶದ ಸರ್ವಶ್ರೇಷ್ಠ ಕಾನೂನು. ಹೀಗಾಗಿ, ಸರ್ಕಾರಿ ಹುದ್ದೆಯಲ್ಲಿರುವ ಎಲ್ಲರಿಗೂ ಸಂವಿಧಾನದ ಅರಿವು ಇರಬೇಕು ಎಂಬುದು ಅಪೇಕ್ಷಿತ. ಅದರಲ್ಲೂ ಐಎಎಸ್, ಕೆಎಎಸ್, ಪಿಎಸ್ಐ, ಎಫ್‌ಡಿಎ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಜವಾಬ್ದಾರಿಯುತ ಹುದ್ದೆಗಳನ್ನು ಹೊಂದುವವರಿಗೆ ಸಂವಿಧಾನದ ಪರಿಜ್ಞಾನ ಅನಿವಾರ್ಯ.

ಈ ನಿಟ್ಟಿನಲ್ಲಿ, ಯಾವುದೇ ಹುದ್ದೆಯ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಯಾಗಿರಲಿ ಅದರಲ್ಲಿ ಭಾರತದ ಸಂವಿಧಾನ ಕುರಿತಾದ ಪ್ರಶ್ನೆಗಳು ಕಡ್ಡಾಯವಾಗಿ ಬಂದೇ ಬರುತ್ತವೆ. ಅದರಲ್ಲೂ 2011 ರಿಂದ ಇಲ್ಲಿಯವರೆಗಿನ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿದರೆ ಶೇ 8 ರಿಂದ ಶೇ 21 ರಷ್ಟು ಪ್ರಶ್ನೆಗಳು ಭಾರತದ ಸಂವಿಧಾನಕ್ಕೆ ಸಂಬಂಧಿಸಿ ಬಂದಿರುವುದನ್ನು ನಾವು ಗಮನಿಸಬಹುದು.

ಭಾರತೀಯ ಸಂವಿಧಾನದಲ್ಲಿ ಏನು ಓದಬೇಕು?

ಸಂವಿಧಾನದ ಐತಿಹಾಸಿಕ ಹಿನ್ನೆಲೆ (ಈಸ್ಟ್ ಇಂಡಿಯಾ ಕಂಪನಿ ಕಾಯ್ದೆಗಳು: 1700 ರಿಂದ 1857 ರವರೆಗೆ ಹಾಗೂ ಬ್ರಿಟಿಷ್- ಭಾರತ ಸರ್ಕಾರದ ಕಾಯ್ದೆಗಳು: 1858 ರಿಂದ 1947 ರವರೆಗೆ- 1935 ರ ಬ್ರಿಟಿಷ್- ಭಾರತ ಸರ್ಕಾರದ ಕಾಯ್ದೆಗೆ ಆದ್ಯತೆ ಅಗತ್ಯ), ಸಂವಿಧಾನದ ಆಕರಗಳು (60 ದೇಶದ ಎರವಲುಗಳು), ಪ್ರಸ್ತಾವನೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು, ರಾಜ್ಯ ನೀತಿ ನಿರ್ದೇಶಕ ತತ್ವಗಳು, ಕಾರ್ಯಾಂಗ, ಶಾಸಕಾಂಗ, ಸಾಂವಿಧಾನಿಕ ಸ್ವತಂತ್ರ ಸಂಸ್ಥೆಗಳು (ಉದಾ: ಚುನಾವಣಾ ಆಯೋಗ, ನೀತಿ ಆಯೋಗ, ಇತ್ಯಾದಿ...), ಕೇಂದ್ರ- ರಾಜ್ಯಗಳ ಸಂಬಂಧ, ಸಂವಿಧಾನದ ಪ್ರಮುಖ ತಿದ್ದುಪಡಿಗಳು, ಪಂಚಾಯತ ರಾಜ್ ವ್ಯವಸ್ಥೆ, ಆಡಳಿತ ವಿಕೇಂದ್ರೀಕರಣ (73 ಮತ್ತು 74 ನೇ ತಿದ್ದುಪಡಿ ಅತ್ಯಂತ ಮುಖ್ಯ), ಸಂವಿಧಾನ ಮತ್ತು ರಾಜಕೀಯಕ್ಕೆ ಸಂಬಂಧಿಸಿದ ಪ್ರಚಲಿತ ವಿದ್ಯಮಾನಗಳು (ಉದಾ: 371 ನೇ ವಿಧಿ, ಒಂದು ದೇಶ ಒಂದು ಚುನಾವಣೆ, ಚುನಾವಣಾ ಸುಧಾರಣಾ ಕ್ರಮಗಳು, ಮೀಸಲಾತಿ ಹೋರಾಟ ಮತ್ತು ತೀರ್ಪುಗಳು, ಇತ್ಯಾದಿ...) ಇವೆಲ್ಲವುಗಳಿಗೆ ಆದ್ಯತೆ ನೀಡಬೇಕು.

ಟಿಪ್ಪಣಿ ಮೂಲಕ ಪರಿಕಲ್ಪನೆಗಳನ್ನು ಸಂಬಂಧೀಕರಿಸಿ: ಭಾರತೀಯ ಸಂವಿಧಾನ ವಿಷಯವನ್ನು ಓದುವಾಗ ನಿಮ್ಮದೇ ಆದ ಟಿಪ್ಪಣಿ ಮಾಡಿಕೊಳ್ಳಬೇಕು. ಆಯಾ ವಿಧಿಗಳು, ಪರಿಚ್ಛೇದಗಳಲ್ಲಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಸಹಸಂಬಂಧೀಕರಿಸಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಇಂಗ್ಲಿಷ್ ಪದಗಳ ಬಳಕೆ ಅನಿವಾರ್ಯ: ಸಂವಿಧಾನದಲ್ಲಿ ಬಳಕೆಯಾಗಿರುವ ಕೆಲ ಇಂಗ್ಲಿಷ್ ಪದಗಳ ಯಥಾರ್ಥ ಕನ್ನಡೀಕರಣ ಸಾಧ್ಯವಿಲ್ಲ. ಉದಾಹರಣೆಗೆ: ರಾಷ್ಟ್ರಪತಿಗಳ ಅಧಿಕಾರಕ್ಕೆ ಸಂಬಂಧಿಸಿ ಬಳಕೆಯಾಗಿರುವ 'Pocket VISA' ಪದವನ್ನು ನಾವು 'ಜೇಬು ಪರಮಾಧಿಕಾರ' ಎಂದು ಉಲ್ಲೇಖಿಸಿದರೆ ಆಭಾಸವಾಗುತ್ತದೆ. ಇಂಥ ಸಂದರ್ಭದಲ್ಲಿ ಇಂಗ್ಲಿಷ್ ಪದಗಳನ್ನೇ ಬಳಸಬೇಕು.

ಸಂಕ್ಷೇಪಾಕ್ಷರಗಳ ಮೂಲಕ ಸ್ಮರಣೆಯಲ್ಲಿ ಇಟ್ಟುಕೊಳ್ಳಿ: ಆರಂಭದಲ್ಲಿ 395 ವಿಧಿಗಳು, 22 ಭಾಗಗಳು ಹಾಗೂ 8 ಪರಿಚ್ಛೇದಗಳನ್ನು ಹೊಂದಿದ್ದ ಭಾರತದ ಸಂವಿಧಾನ ಪ್ರಸ್ತುತ 103 ತಿದ್ದುಪಡಿಗಳ ಬಳಿಕ 448 ವಿಧಿಗಳು, 25 ಭಾಗಗಳು ಹಾಗೂ 12 ಪರಿಚ್ಛೇದಗಳನ್ನು ಹೊಂದಿದೆ. ಇವೆಲ್ಲವುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ನಿಮ್ಮದೇ ಆದ ಸಂಕ್ಷೇಪಾಕ್ಷರಗಳ ಬಳಕೆ ಉತ್ತಮ.

ಉದಾಹರಣೆಗೆ: 'U Can Fly Directly From US' ಎಂಬ ವಾಕ್ಯವನ್ನು ಸಂಕ್ಷೇಪಾಕ್ಷರವಾಗಿ ಬಳಸಿಕೊಂಡು ನೀವು- U- Union and it's Territory (ಒಕ್ಕೂಟ ವ್ಯವಸ್ಥೆ ಮತ್ತು ಅದರ ಅಂಗಗಳು- ಭಾಗ 1), Can- Citizenship (ಪೌರತ್ವ- ಭಾಗ 2), Fly- Fundamental Rights (ಮೂಲಭೂತ ಹಕ್ಕುಗಳು- ಭಾಗ 3), Directly- Directive Principles of State Policy (ರಾಜ್ಯ ನೀತಿ ನಿರ್ದೇಶಕ ತತ್ವಗಳು- ಭಾಗ 4), From- Fundamental Duties (ಮೂಲಭೂತ ಕರ್ತವ್ಯಗಳು- ಭಾಗ 4 ಎ), U- Union Government (ಕೇಂದ್ರ ಸರ್ಕಾರ- ಭಾಗ 5), S- State Government (ರಾಜ್ಯ ಸರ್ಕಾರ- ಭಾಗ 6) ಪರಿಕಲ್ಪನೆಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬಹುದು.

(ಲೇಖಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಗುಣಮಟ್ಟದ ಪುಸ್ತಕಗಳನ್ನು ಓದಿ

ಭಾರತದ ಸಂವಿಧಾನಕ್ಕೆ ಸಂ ಬಂಧಿಸಿ ಕೆಲವು ಗುಣಮಟ್ಟದ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದ ಮೂಲ ಆಕರ ಗ್ರಂಥಗಳನ್ನು ಓದುವುದು ಒಳಿತು. Indian Polity- ಎಂ.ಲಕ್ಷ್ಮೀಕಾಂತ್, Introduction to Indian Constitution- ದುರ್ಗಾ ದಾಸ್ ಬಸು, Our Parliament- ಸುಭಾಷ್ ಕಶ್ಯಪ್, ಭಾರತದ ರಾಜಕೀಯ & ಸಂವಿಧಾನ - ಗಂಗಾಧರ ಪಿ.ಎಸ್., ಸಾರ್ವಜನಿಕ ಆಡಳಿತ - ಹಾಲಪ್ಪ... ಈ ಪುಸ್ತಕಗಳು ಕೆಲ ಉತ್ತಮ ಆಕರ ಗ್ರಂಥಗಳಾಗಿದ್ದು, ಇವುಗಳ ಜೊತೆಗೆ NCERT ಪಠ್ಯಕ್ರಮದನ್ವಯ ರಚನೆಗೊಂಡಿರುವ ಸಿಬಿಎಸ್‌ಇ ಹಾಗೂ ರಾಜ್ಯ ಪಠ್ಯಕ್ರಮದ ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ಪೌರನೀತಿ ಭಾಗವನ್ನು ಕಡ್ಡಾಯವಾಗಿ ಓದಬೇಕು. ಇದಲ್ಲದೇ ಕನಿಷ್ಠ 10 ವರ್ಷಗಳ ಹಳೆಯ / ಮಾದರಿ ಪ್ರಶ್ನೆ ಪತ್ರಿಕೆಗಳ ಅವಲೋಕನ ಮರೆಯಬಾರದು.

ಪರೀಕ್ಷೆ ತಯಾರಿಗೆ ವೃತ್ತಪತ್ರಿಕೆ ಓದು

ಸ್ಪರ್ಧಾತ್ಮಕ ಪರೀಕ್ಷೆಗೆ ವೃತ್ತಪತ್ರಿಕೆ ಓದುವುದೂ ಒಂದು ಕಲೆ. ಇದು ನಿಮ್ಮ ಅಧ್ಯಯನಕ್ಕೆ ಪೂರಕವಾದ ಭಿನ್ನ ಮಾಹಿತಿಯನ್ನು ನೀಡುತ್ತದೆ. ಕ್ರಮಬದ್ಧವಾದ ಹಾಗೂ ನಿಯಮಿತವಾದ ಪತ್ರಿಕಾ ಓದು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಖಚಿತವಾದ ಅಧ್ಯಯನ ಸಂಪನ್ಮೂಲವಾಗಿದೆ.

ಆರ್.ಬಿ. ಗುರುಬಸವರಾಜ

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವ ಬಹುತೇಕ ಸ್ಪರ್ಧಾರ್ಥಿಗಳು ಮಾರುಕಟ್ಟೆಯಲ್ಲಿ ಸಿಗುವ ಸಿದ್ಧ ನೋಟ್ಸ್/ ಗೈಡ್‌ಗಳನ್ನು ಅಲವಂಬಿಸುತ್ತಾರೆ. ಆದರೆ ಒಂದಿಷ್ಟು ಪೂರ್ವ ತಯಾರಿ ಮಾಡಿಕೊಂಡರೆ ಅಂತಹ ನೂರಾರು ಟಿಪ್ಪಣಿಗಳನ್ನು ತಮಗೆ ಅನುಕೂಲಕರ ರೀತಿಯಲ್ಲಿ ತಾವೇ ಸಿದ್ಧಪಡಿಸಿಕೊಳ್ಳಬಹುದು. ಪರೀಕ್ಷಾ ತಯಾರಿಗೆ ಇರುವ ಒಂದು ಪ್ರಬಲ ಸಂಗ್ರಹಯೋಗ್ಯ ಆಕರವೆಂದರೆ ವೃತ್ತಪತ್ರಿಕೆಗಳು.

ಪತ್ರಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿಯೂ ಸುಲಭವಾಗಿ ದೊರೆಯುವುದರಿಂದ ಎಲ್ಲಾ ಪರೀಕ್ಷಾರ್ಥಿಗಳಿಗೆ ಬಹುದೊಡ್ಡ ಜ್ಞಾನ ಸಂಪನ್ಮೂಲಗಳಾಗಿವೆ. ಪತ್ರಿಕಾ ಓದಿನ ಕಾರ್ಯತಂತ್ರ ಖಂಡಿತವಾಗಿ ನಿಮ್ಮ ಯಶಸ್ಸಿಗೆ ಕಾರಣವಾಗುತ್ತದೆ. ಹಾಗಾದರೆ ಪತ್ರಿಕೆ ಹೇಗೆ ಓದುವುದು? ಯಾವ ಪತ್ರಿಕೆ ಓದಬೇಕು? ಎಷ್ಟು ಸಮಯ ಓದಬೇಕು? ಇತ್ಯಾದಿ ಪ್ರಶ್ನೆಗಳು ಸಹಜ. ಇಂತಹ ಕೆಲವು ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡೋಣ.

ಪತ್ರಿಕೆ ಓದು ಏಕೆ ಮುಖ್ಯ?

ವೃತ್ತಪತ್ರಿಕೆಗಳನ್ನು ನಿಯಮಿತವಾಗಿ ಓದುವುದರಿಂದ ಪರೀಕ್ಷೆಯ ಗುರಿ ಸ್ಪಷ್ಟವಾಗುತ್ತದೆ. ಅನುಭವಿ ಪತ್ರಕರ್ತರು ಹಾಗೂ ಅಂಕಣಕಾರರು ಬರೆಯುವ ಬರಹಗಳು ಪರೀಕ್ಷಾ ದೃಷ್ಟಿಯಿಂದ ಮಹತ್ವ ಪಡೆದಿವೆ. ಅಲ್ಲದೇ ಕೆಲವು ಪತ್ರಿಕೆಗಳು ವಿದ್ಯಾರ್ಥಿಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಹೊರ ತರುವ ಪುರವಣಿಗಳೂ ಸಹ ಉತ್ತಮ ಬರಹಗಳನ್ನು ಒಳಗೊಂಡಿರುತ್ತವೆ. ಈ ಬರಹಗಳು ನಿರ್ದಿಷ್ಟ ಪರಿಕಲ್ಪನೆಯ ಮೇಲೆ ದೀರ್ಘಕಾಲದ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತವೆ. ಜೊತೆಗೆ ಉನ್ನತ ಹಂತದ ನವೀನ ಮಾಹಿತಿಗಳು ಹಾಗೂ ದತ್ತಾಂಶಗಳನ್ನು ಹೊಂದಿರುತ್ತವೆ. ಪ್ರಚಲಿತ ಘಟನೆಗಳು ಹಾಗೂ ಅದಕ್ಕೆ ಪೂರಕವಾದ ಸಂಗತಿಗಳು, ಅಂಕಿ- ಅಂಶಗಳನ್ನು ಹೊಂದಿರುತ್ತವೆ. ಲೇಖನಗಳಲ್ಲಿ ಬಳಸಿರುವ ಭಾಷೆ, ವ್ಯಾಕರಣ ಬಳಕೆ ಉನ್ನತ ಗುಣಮಟ್ಟದ್ದಾಗಿರುತ್ತದೆ. ವಿವಿಧ ಪರೀಕ್ಷೆಗಳ ಮೌಖಿಕ ಮತ್ತು ಲಿಖಿತ ಸಾಮರ್ಥ್ಯದ ಪರೀಕ್ಷೆಗೆ ಅಗತ್ಯ ಮಾಹಿತಿ ನೀಡುತ್ತವೆ.

ಪತ್ರಿಕೆಯಲ್ಲಿ ಏನನ್ನು ಓದಬೇಕು?: ಪತ್ರಿಕೆ ಓದಲು ಪ್ರಾರಂಭಿಸುವ ಮೊದಲು ನೀವು ಗುರಿಯಿರಿಸಿರುವ ಪರೀಕ್ಷೆಯ 3-4 ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಗಮನಿಸಿ. ಅಲ್ಲಿ ಕೇಳಲಾಗಿರುವ ಪ್ರಶ್ನೆಗಳ ಸ್ವರೂಪವನ್ನು ಅರಿಯಿರಿ. ನಂತರ ವೃತ್ತಪತ್ರಿಕೆ ಓದಲು ಪ್ರಾರಂಭಿಸಿ. ಪತ್ರಿಕೆಯಲ್ಲಿ ಸಾಮಾನ್ಯವಾಗಿ ವಿವಿಧ ವಿಭಾಗಗಳು ಕಂಡುಬರುತ್ತವೆ. ಪರೀಕ್ಷೆಗೆ ಅಗತ್ಯವಾದ ವಿಭಾಗವನ್ನು ಓದಲು ಹೆಚ್ಚು ಪ್ರಾಶಸ್ತ್ಯ ನೀಡಿ.

ಪತ್ರಿಕೆಯ ಅಧ್ಯಯನ ಹೇಗೆ?: ಪರೀಕ್ಷಾರ್ಥಿಗಳು ಪತ್ರಿಕೆಗಳನ್ನು ಕಾದಂಬರಿಯಂತೆ ವೇಗವಾಗಿ ಓದಬಾರದು. ಬದಲಾಗಿ ನಿಧಾನವಾಗಿ ಪತ್ರಿಕೆಯ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಓದಬೇಕು. ಪತ್ರಿಕಾ ಓದಿಗಾಗಿ ಪ್ರತಿದಿನ ಕನಿಷ್ಠ 90- 120 ನಿಮಿಷಗಳನ್ನು ಮೀಸಲಿಡಬೇಕು. ಓದಿನ ವೇಳೆ ಪ್ರತಿ ವಿಭಾಗಗಳ ಮಾಹಿತಿಯನ್ನು ಪ್ರತ್ಯೇಕವಾಗಿ ಟಿಪ್ಪಣಿ ಮಾಡಿಕೊಂಡರೆ ಪರೀಕ್ಷಾ ಸಮಯದಲ್ಲಿ ತುಂಬಾ ಸಹಕಾರಿಯಾಗುತ್ತದೆ.

ಆರ್ಥಿಕತೆ ಮತ್ತು ವ್ಯವಹಾರ: ಈ ವಿಭಾಗದಲ್ಲಿ ಇತ್ತೀಚಿನ ಬಜೆಟ್, ಹಣದುಬ್ಬರ, ಜಿಡಿಪಿ, ಅಂತರರಾಷ್ಟ್ರೀಯ ವ್ಯವಹಾರಗಳು, ಉದ್ಯಮಗಳ ವಿಲೀನ ಮತ್ತು ಸ್ವಾಧೀನಗಳು, ವ್ಯವಹಾರದ ಮುಖ್ಯಸ್ಥರ ಹೆಸರು, ಹೊಸ ನೇಮಕಾತಿಗಳು ಮುಂತಾದ ಸ್ಥೂಲ ಆರ್ಥಿಕ ಸೂಚಕಗಳ ವಿವರಗಳನ್ನು ಓದಿ ಟಿಪ್ಪಣಿ ಮಾಡಿಕೊಳ್ಳಿ. ಈ ವಿಭಾಗದಲ್ಲಿ ಹಣದುಬ್ಬರ ಮತ್ತು ಅಂಕಿ-ಅಂಶ ಸಂಗ್ರಹದ ಮೇಲೆ ಪ್ರಶ್ನೆಯನ್ನು ಕೇಳುವ ಸಾಧ್ಯತೆ ಇರುವುದಿಲ್ಲ. ಹಾಗಾಗಿ ಅದಕ್ಕಾಗಿ ಹೆಚ್ಚು ಸಮಯ ವ್ಯರ್ಥ ಮಾಡಬೇಡಿ.

ರಾಜಕೀಯ: ಈ ವಿಭಾಗದಲ್ಲಿ ಹೊಸ ಕಾನೂನುಗಳು, ಮಸೂದೆಗಳು ಮತ್ತು ಸಾಂವಿಧಾನಿಕ ತಿದ್ದುಪಡಿಗಳನ್ನು ಗಮನಿಸಿ. ಅಲ್ಲದೇ ಇತ್ತೀಚೆಗೆ ನಡೆದ ಅಥವಾ ಮುಂಬರುವ ಚುನಾವಣೆಗಳ ಬಗ್ಗೆ ಮತ್ತು ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರಗಳು ಇತ್ತೀಚೆಗೆ ಪ್ರಾರಂಭಿಸಿದ ಯೋಜನೆಗಳ ಬಗ್ಗೆ ಓದಿ ಟಿಪ್ಪಣಿ ಮಾಡಿಕೊಳ್ಳಿ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿನ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳ ಹೆಸರು ಮತ್ತು ಅವರ ಕಾರ್ಯ ವಿಧಾನಗಳ ಬಗ್ಗೆ ಇರುವ ಮಾಹಿತಿ ಗಮನಿಸಿ.

ಅಂತರರಾಷ್ಟ್ರೀಯ: ಅಂತರರಾಷ್ಟ್ರೀಯ ಚುನಾವಣೆಗಳು, ಪ್ರಾದೇಶಿಕ ಒಪ್ಪಂದಗಳು, ಜಾಗತಿಕ ಸಭೆಗಳು, ಅಂತರರಾಷ್ಟ್ರೀಯ ಸಂಬಂಧಗಳು, ವಿದೇಶಿ ವ್ಯವಹಾರಗಳು, ಆರ್ಥಿಕ ವಿನಿಮಯಗಳು, ರಾಜಕೀಯ ಹಾಗೂ ಇನ್ನಿತರೇ ಸಂಘರ್ಷಗಳು, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಂಬಂಧಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಲ್ಲಿರುವ ವ್ಯಕ್ತಿಗಳು ಇನ್ನಿತರೇ ಮಾಹಿತಿಗಳನ್ನು ಈ ವಿಭಾಗದಿಂದ ಓದಿ ಟಿಪ್ಪಣಿ ಮಾಡಿಕೊಳ್ಳಿ.

ಕ್ರೀಡೆ: ಈ ವಿಭಾಗದಿಂದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ವಿವಿಧ ಕ್ರೀಡಾಪಟುಗಳ ಹೆಸರು, ಸಾಧನೆಯ ವಿವರಗಳು, ಇತ್ತೀಚೆಗೆ ನಡೆದ ಕ್ರೀಡೆ ಮತ್ತು ಪಂದ್ಯಾವಳಿಗಳ ವಿಜೇತರ ಹೆಸರುಗಳನ್ನು ಗಮನಿಸಿ ಟಿಪ್ಪಣಿ ಮಾಡಿಕೊಳ್ಳಿ.

ಇತರೆ: ಹೊಸ ತಾಂತ್ರಿಕ ಬೆಳವಣಿಗೆಗಳು, ವಿಜ್ಞಾನದ ಹೊಸ ಆವಿಷ್ಕಾರಗಳು, ಸಾಂಸ್ಕೃತಿಕ ಉತ್ಸವಗಳು, ಸಾಹಿತ್ಯಿಕ ಬೆಳವಣಿಗೆಗಳು, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ದಿನಾಚರಣೆಗಳು ಇತ್ಯಾದಿ ಮಾಹಿತಿಗಳನ್ನು ಗಮನಿಸಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್‌ನಲ್ಲಿ ವಿವಿಧ ಹುದ್ದೆಗಳು

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಜನರಲ್ ಮ್ಯಾನೇಜರ್ ಹಾಗೂ ಸೀನಿಯರ್ ಅರ್ಬನ್ ಪ್ಲಾನರ್.
- ಸ್ಥಳ: ಶಿವಮೊಗ್ಗ.
- ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ 64 ವರ್ಷ ಮೀರಿರಬಾರದು.
- ಅರ್ಜಿ ಶುಲ್ಕ: ಇಲ್ಲ.
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 9, 2021
- ಹೆಚ್ಚಿನ ಮಾಹಿತಿಗೆ: http://shivamoggasmartcity.co.in/

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

THE SONG OF INDIA by V.K.Gokak

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

The song of India is a poem written by V.K.Gokak. In this poem, we have two speakers. One is the poet himself and the other is the mother of India. This poem goes on with the conversation between the poet and Mother India. In their conversation, the poet wants to glorify India by singing the song of mother India with its glory. In contrast, mother India wants to purify herself by telling the poet to sing a song with a sense of purification. The conversation goes on like this.

The poet wants to sing a song of the Himalayas with their snow-born peaks, a song of the three seas, which wash the palm of mother India, and the song of the clear dawn with its pure gold-streaks. But mother India very calmly told the poet to sing a song of the beggars and leapers who rush into her streets and told him to sing the song of filth and dirt that disturb the peaceful atmosphere. Then, the poet expressed his desire to sing a song of rock-cut temples, which are epics in stone, the song of freedom fighters who gave their lives for mother India, and song of the seers and prophets, who showed the path of eternity.


V.K.Gokak

In reaction, the mother India with a little anger told the poet to sing a song of million people who work very hard every day to earn their bread and then told the poet to sing a song of the people who have a wrinkled face. She further moves on to tell him to sing the song of the helpless child who was born in a dark and black home. The poet was very nervous at this moment, but he continued and said that he would sing the song of Dams and lakes, of the steel mills, the shipbuilding yard, of the men who work very hard to make India technologically sound. But mother India told him to sing the song of strikes, of iron men, and class war.

Thus, mother India every time rejected the wish of the poet to glorify India. The poet with a sense of dissatisfaction became querulous and asked the mother, Is there any song for him? To sing of mother India that will not be useless? There, mother India rose, dressed in a blue sari, as a result of divinity, the milk-white oceans surrounded her. The waves of the oceans spread the light everywhere. The mother India sat on the waves and wrote the book of future India. She opened her forehead, through which the poet saw the earth's destiny. He understood that there would be a bright future for India.

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಪೈಥಾಗೊರಸ್ ಥಿಯರಮ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/39MC3XV

ದ್ರವ್ಯದ ಅಲೆ ಸ್ವಭಾವ
(ದ ಬ್ರಾಯ್ ವಿಕಿರಣ ಉಭಯ ಸ್ವಭಾವ)

ದ್ವಿತೀಯ ಪಿಯುಸಿ

ಭೌತಶಾಸ್ತ್ರ

ಬೆಳಕು ಕೆಲ ವಿದ್ಯಮಾನಗಳ ವ್ಯತಿಕರಣ, ವಿವರ್ತನೆ ಹಾಗೂ ಧ್ರುವೀಕರಣದಲ್ಲಿ ಅಲೆ ಸ್ವರೂಪವನ್ನು ತೋರಿಸಿದರೆ, ಇನ್ನು ಕೆಲ ವಿದ್ಯಮಾನಗಳಾದ ದ್ಯುತಿ ವಿದ್ಯುತ್ ಪರಿಣಾಮ ಹಾಗೂ ಕಾಂಪ್ಟನ್ ಪರಿಣಾಮಗಳಲ್ಲಿ ಕಣ ಸ್ವರೂಪವನ್ನು ತೋರಿಸುತ್ತದೆ. ಇದನ್ನು ದ ಬ್ರಾಯ್ ಚಲಿಸುತ್ತಿರುವ ವಸ್ತುವಿನ ಕಣವು, ಸೂಕ್ತ ಪರಿಸ್ಥಿತಿಯಲ್ಲಿ ತರಂಗ ಸದೃಶವನ್ನು ಪ್ರದರ್ಶಿಸುತ್ತದೆ ಎಂದು ಪ್ರಸ್ತುತಪಡಿಸಿದರು.

ಸಂವೇಗ p - ಹೊಂದಿರುವ ಹಣದ ತರಂಗ ದೂರ λ ವು

$$\lambda = \frac{h}{p} = \frac{h}{mv}$$

ಇಲ್ಲಿ m- ಕಣದ ರಾಶಿ ಮತ್ತು v- ಸಂವೇಗವಾಗಿದೆ.

ಇದು ದ ಬ್ರಾಯ್‌ಯ ಸಂಬಂಧವಾಗಿದ್ದು ದ್ರವ್ಯದ ಉಭಯ ಸ್ವಭಾವವನ್ನು ಸ್ಪಷ್ಟಪಡಿಸುತ್ತದೆ.

ಇಲ್ಲಿ ಎಡಭಾಗದ λ ವು ತರಂಗ ಲಕ್ಷಣವನ್ನು ತೋರಿಸಿದರೆ, ಬಲಭಾಗದಲ್ಲಿರುವ ಸಂವೇಗ p ವು ಕಣದ ಲಕ್ಷಣಗಳನ್ನು ತೋರಿಸುತ್ತದೆ. h ಈ ಎರಡೂ ಲಕ್ಷಣಗಳನ್ನು ಸಂಯೋಜನೆ ಮಾಡುತ್ತದೆ.

ಡೇವಿಸ್ ಹಾಗೂ ಜರ್ಮರ್ ಪ್ರಯೋಗ



ಬೇರಿಯಂ ಆಕ್ಸೈಡ್ ಲೇಪಿತ ಹಾಗೂ ಕಡಿಮೆ ವಿದ್ಯುತ್ ವಿಭವ ಪೂರೈಕೆಯಿಂದ (L.T) ಬಿಸಿ ಮಾಡಿದ ಟಂಗ್‌ಸ್ಟನ್‌ನ ತಂತಿ F ಅನ್ನು ಒಳಗೊಂಡಿದೆ. ಯಾವುದೇ ಅಧಿಕ ವಿಭವ ಸಾಮರ್ಥ್ಯದ ವಿದ್ಯುತ್ ಸಂಗ್ರಹ ಸಾಧನ (H.T) ದಿಂದ ಸೂಕ್ತ ವಿಭವವನ್ನು ಅಳವಡಿಸಿದ ತಂತಿಗಳಿಂದ ಉತ್ಸರ್ಜಿತ ಎಲೆಕ್ಟ್ರಾನ್‌ಗಳನ್ನು ಅಪೇಕ್ಷಿತ ಜವಕ್ಕೆ ವೇಗವರ್ಧಿಸುವಂತೆ ಅಳವಡಿಸಲಾಗಿದೆ.

ಅಕ್ಷದ ಉದ್ದಕ್ಕೂ ರಂಧ್ರಗಳಿರುವ ಸಿಲಿಂಡರ್ ಮೂಲಕ ಹಾದು ಹೋಗುವಂತೆ ಮಾಡಿ ಉತ್ತಮವಾಗಿ ಸಮಾಂತರೀಕರಿಸಿದ ಕಿರಣ ಗುಚ್ಛವನ್ನು ಉತ್ಪಾದಿಸಲಾಗುತ್ತದೆ. ಈ ಕಿರಣ ಗುಚ್ಛವನ್ನು ನಿಕ್ಕಲ್ ಸ್ಫಟಿಕದ ಮೇಲೆ ಬೀಳುವಂತೆ ಮಾಡಿದಾಗ ಎಲೆಕ್ಟ್ರಾನ್‌ಗಳು ಸ್ಫಟಿಕದ ಪರಮಾಣುಗಳಿಂದ ಎಲ್ಲಾ ದಿಕ್ಕಿನಲ್ಲೂ ಚದುರಿದವು. ಚದುರಿದ ಎಲೆಕ್ಟ್ರಾನ್ ಕಿರಣ ಗುಚ್ಛದ ತೀವ್ರತೆಯನ್ನು ಗೆಲ್ವನೋಮೀಟರ್ ಸಂಪರ್ಕಿಸಲಾದ ವೃತ್ತಾಕಾರವಾಗಿ ಸರಿಸುವಂತಹ ಶೋಧಕದ ಮೂಲಕ ಅಳೆಯಲಾಗುತ್ತದೆ. ಈ ಎಲ್ಲಾ ಉಪಕರಣಗಳನ್ನು ನಿರ್ವಾತದಲ್ಲಿ ಇಡಲಾಗುತ್ತದೆ. ಗೆಲ್ವನೋ ಮೀಟರ್‌ನಲ್ಲಿ ವಿದ್ಯುತ್ ಪ್ರವಾಹ ವಿಕಿರಣದ ತೀವ್ರತೆಗೆ ನೇರಾನುಪಾತದಲ್ಲಿರುತ್ತದೆ.

ವಿವಿಧ ವೇಗವರ್ಧಕ ವಿಭವಕ್ಕೆ ಚದುರುವಿಕೆಯ ಕೋನ 'θ' ಹೊಂದಿರುವ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಯ ಬದಲಾವಣೆಯನ್ನು ಪಡೆಯಬಹುದಾಗಿದೆ.

ವೇಗವರ್ಧಕ ವಿಭವವನ್ನು ಬದಲಾಯಿಸುವುದರೊಂದಿಗೆ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಯನ್ನು ಗಮನಿಸಲಾಗುತ್ತದೆ.

ವೇಗವರ್ಧಕ ವಿಭವ V = 54V

ದ ಬ್ರಾಯ್ ತರಂಗಾಂತರವು

$$\lambda = \frac{h}{p} = 0.167\ nm$$

ಇದರಿಂದ ಎಲೆಕ್ಟ್ರಾನ್‌ಗಳ ತರಂಗ ಸ್ವರೂಪ ಹಾಗೂ ದ ಬ್ರಾಯ್ ಸಂಬಂಧವನ್ನು ಪುಷ್ಟೀಕರಿಸಬಹುದು.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೊ ಮ್ಯಾಗ್ನೆಟಿಕ್ ಇಂಡಕ್ಷನ್_ಮೋಷನಲ್ ಇಎಂಎಫ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3wc1HPc



ಸುಭಾಷಿತ

ಮೂರ್ಖರೊಂದಿಗೆ ಎಂದಿಗೂ ವಾದಕ್ಕೆ ಇಳಿಯಬೇಡಿ. ಅವರು ತಮ್ಮ ಮಟ್ಟಕ್ಕೆ ನಿಮ್ಮನ್ನು ಎಳೆಯುತ್ತಾರೆ ಮತ್ತು ನಿಮ್ಮ ಯಾವುದೇ ಅನುಭವವು ಅವರ ಮುಂದೆ ಉಪಯೋಗಕ್ಕೆ ಬಾರದಂತೆ ಮಾಡುತ್ತಾರೆ.

–ಮಾರ್ಕ್ ಟ್ವೇಯ್ನ್

ಬಿಬಿಎಂಪಿ ಬಜೆಟ್: ವಾಸ್ತವಕ್ಕೆ ಹತ್ತಿರ ಅಭಿವೃದ್ಧಿ ಆಶಯಗಳಿಗೆ ಬಲು ದೂರ

ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲದ ಸಂದರ್ಭದಲ್ಲಿ ಆಡಳಿತಾಧಿಕಾರಿಯ ಉಸ್ತುವಾರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 2021–22ನೇ ಸಾಲಿನ ಬಜೆಟ್‌ನ ಮಂಡನೆ ಆಗಿದೆ. ವಾಸ್ತವಿಕ ಲೆಕ್ಕಾಚಾರಗಳಿಗೆ ಈ ಬಾರಿ ಒತ್ತು ನೀಡಲಾಗಿದ್ದು, 2020–21ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಬಜೆಟ್ ಗಾತ್ರ ₹ 2,400 ಕೋಟಿಯಷ್ಟು ಕಡಿಮೆಯಾಗಿದೆ. ಆರ್ಥಿಕ ನಿರ್ವಹಣೆಯ ಹೊಣೆಯನ್ನು ವಾರ್ಡ್ ಮತ್ತು ವಲಯ ಮಟ್ಟಕ್ಕೆ ವಿಕೇಂದ್ರೀಕರಿಸುವ, ಅನವಶ್ಯಕ ವೆಚ್ಚವನ್ನು ನಿಯಂತ್ರಿಸುವ ಹಾಗೂ ಸಾರ್ವಜನಿಕ ಭಾಗವಹಿಸುವಿಕೆಗೆ ಉತ್ತೇಜನ ನೀಡುವ ಅಂಶಗಳಿಗೆ ಒತ್ತು ನೀಡಲಾಗಿದೆ ಎನ್ನುವುದು ಬಿಬಿಎಂಪಿ ಪ್ರತಿಪಾದನೆ. ಈ ಪ್ರತಿಪಾದನೆಗೆ ಪೂರಕವಾದ ಕೆಲವು ಅಂಶಗಳು ಬಜೆಟ್‌ನಲ್ಲಿ ಕಾಣುತ್ತಿವೆ. ಹೊಸ ಯೋಜನೆಗಳ ಘೋಷಣೆಗಿಂತ, ಘೋಷಿಸಿದ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಿರುವುದು ಒಳ್ಳೆಯ ನಿರ್ಧಾರ. ಪಾದಚಾರಿ ಮಾರ್ಗಗಳು, ಉದ್ಯಾನಗಳು ಮತ್ತು ಶೌಚಾಲಯಗಳ ನಿರ್ವಹಣೆ ಹಾಗೂ ಪರಿಸರ ಸಂರಕ್ಷಣೆ ಕಾರ್ಯಗಳಿಗೆ ಅನುದಾನ ಹೆಚ್ಚಿಸಿರುವುದು ಕೂಡ ಸ್ವಾಗತಾರ್ಹ ಹೆಜ್ಜೆ. ಕೋವಿಡ್‌ನಂತಹ ಸಾಂಕ್ರಾಮಿಕದ ನಿಯಂತ್ರಣಕ್ಕೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿತ್ತು. ಆರೋಗ್ಯ ಸೇವೆ ಸುಧಾರಣೆಗಾಗಿ ಹೆಚ್ಚಿನ ಅನುದಾನ ಒದಗಿಸಿರುವುದೂ ಸಮಂಜಸ ನಿರ್ಧಾರವೇ. ಆದರೆ, 1.20 ಕೋಟಿಗೂ ಅಧಿಕ ಜನಸಂಖ್ಯೆ ಇರುವ ಬೆಂಗಳೂರಿನ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಅವಲೋಕಿಸಿದಾಗ ಈ ಬಜೆಟ್‌ನಲ್ಲಿ ಅನೇಕ ಕೊರತೆಗಳು ಕಾಣುತ್ತವೆ.

ಅನವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕುವುದರ ಜೊತೆಗೆ ಅಭಿವೃದ್ಧಿ ಕೆಲಸಗಳು ಕಡೆಗಣನೆಗೆ ಒಳಗಾಗದಂತೆ ನೋಡಿಕೊಳ್ಳುವ ಹೊಣೆ ಬಿಬಿಎಂಪಿ ಮೇಲಿದೆ

ಘನತ್ಯಾಜ್ಯ ನಿರ್ವಹಣೆಗೆ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ದೊಡ್ಡ ಮೊತ್ತದ ಹಣವನ್ನು ಬಿಬಿಎಂಪಿ ವಿನಿಯೋಗಿಸಿದೆ. ಖರ್ಚು ಮಾಡಿದ್ದಕ್ಕೆ ತಕ್ಕಂತೆ ತ್ಯಾಜ್ಯ ಸಂಸ್ಕರಣಾ ಘಟಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದರೆ ಈ ಸಲ ಬಜೆಟ್ ಮೊತ್ತದಲ್ಲಿ ಶೇ 17ರಷ್ಟನ್ನು ಕಸ ನಿರ್ವಹಣೆಗೇ ಎತ್ತಿಡುವ ಪ್ರಸಂಗ ಬರುತ್ತಿರಲಿಲ್ಲವೇನೋ. ಈ ಬಾಬತ್ತಿನ ಪಾಲು ಹೆಚ್ಚುವುದೆಂದರೆ ಅಭಿವೃದ್ಧಿ ಚಟುವಟಿಕೆಗಳಿಗೆ ಬಿದ್ದ ಏಟು ಎಂತಲೇ ಲೆಕ್ಕ. ಈಗ ಆಗಿದ್ದು ಕೂಡ ಅದೇ. ಬೆಂಗಳೂರು ನಗರದಲ್ಲಿ ಈ ಹಿಂದೆ ಕೈಗೊಂಡ ಹಾಗೂ ಸದ್ಯ ಅನುಷ್ಠಾನದ ಹಂತದಲ್ಲಿರುವ ಕಾಮಗಾರಿಗಳ ಬಿಲ್ ಮೊತ್ತ ₹ 10 ಸಾವಿರ ಕೋಟಿ. ಅಂದರೆ, ಬಜೆಟ್ ಗಾತ್ರಕ್ಕೂ ಮಿಗಿಲು! ಹಣಕಾಸಿನ ವಿಷಯವಾಗಿ ಬಿಬಿಎಂಪಿ ಇದುವರೆಗೆ ಹೊಣೆಗೇಡಿತನದಿಂದ ವರ್ತಿಸಿದುದರ ದ್ಯೋತಕ ಇದು. ವರಮಾನ ನಿರೀಕ್ಷೆಯ ಲೆಕ್ಕಾಚಾರವನ್ನು ಉತ್ಪ್ರೇಕ್ಷೆಯಿಂದ ಮಾಡುವುದು, ವರ್ಷ ವರ್ಷವೂ ಕಾಮಗಾರಿ ಬಿಲ್‌ಗಳ ಬಾಕಿ ಉಳಿಸುತ್ತಾ ಹೋಗುವುದು ಅದು ಬೆಳೆಸಿಕೊಂಡು ಬಂದಿರುವ ಚಾಳಿ. ಬಾಕಿ ಹೊರೆಯೇ ಬೆಟ್ಟದಷ್ಟಿದ್ದಾಗ ಹೊಸ ಮೂಲಸೌಕರ್ಯ ಕಾಮಗಾರಿಗಳಿಗೆ ಎಲ್ಲಿಂದ ಸಿಗಲಿದೆ ಅನುದಾನ? ಹೀಗಿದ್ದೂ ವಾರ್ಡ್ ಒಂದರಲ್ಲಿ ಪ್ರತಿಮೆಗಳಿಗೆ ಪಾಲಿಷ್ ಮಾಡುವುದಕ್ಕೆ ₹ 20 ಲಕ್ಷ ಹಣ ಕಾಯ್ದಿರಿಸಲಾಗಿದೆ. ಆರ್ಥಿಕ ಸಂಕಷ್ಟದ ವೇಳೆ ಇಂತಹ ಉದ್ದೇಶಗಳಿಗೆ ಇಷ್ಟೊಂದು ಮೊತ್ತವನ್ನು ವೆಚ್ಚ ಮಾಡಬೇಕೇ? ಬಿಬಿಎಂಪಿ ಸರಹದ್ದನ್ನು ವಿಸ್ತರಿಸುವುದಾಗಿ ಸರ್ಕಾರ ಪ್ರಕಟಿಸಿದ್ದರೂ ಹೊಸತಾಗಿ ಅಸ್ತಿತ್ವಕ್ಕೆ ಬರಲಿರುವ ವಾರ್ಡ್‌ಗಳ ಅಭಿವೃದ್ಧಿಗೆ ಕಾರ್ಯಕ್ರಮ ಹಾಕಿಕೊಳ್ಳುವ ಉತ್ಸಾಹವನ್ನು ಬಿಬಿಎಂಪಿ ತೋರಿಲ್ಲ. ಆರ್ಥಿಕ ದುರ್ಬಲರಿಗೆ ಹಣಕಾಸಿನ ನೆರವು ಒದಗಿಸುತ್ತಿದ್ದ 'ಒಂಟಿಮನೆ' ಕಾರ್ಯಕ್ರಮದ ಬಾಕಿ ಮೊತ್ತ ₹ 900 ಕೋಟಿಯಷ್ಟು ಇರುವುದನ್ನೇ ಮುಂದೆ ಮಾಡಿಕೊಂಡು ಈಗ ಆ ಕಾರ್ಯಕ್ರಮವನ್ನೇ ಸ್ಥಗಿತಗೊಳಿಸಿರುವುದು ಸರಿಯಲ್ಲ. 'ಬಿ ಖಾತಾ' ನಿರ್ವಹಣೆಯನ್ನು ಸ್ಥಗಿತಗೊಳಿಸುವ ಬಗ್ಗೆ ಮತ್ತೆ ಬಜೆಟ್‌ನಲ್ಲಿ ಪುನರುಚ್ಚರಿಸಲಾಗಿದೆ. ಹಿಂದಿನ ಬಜೆಟ್‌ಗಳಲ್ಲೂ ವರ್ಷದ ವಿಧಿಯಂತೆ ಈ ಕುರಿತು ಉಲ್ಲೇಖಿಸಲಾಗಿತ್ತಾದರೂ ಕಾಗದದ ಘೋಷಣೆಯಾಗಿ ಉಳಿಯುತ್ತಿದೆ. ಕಾನೂನು ಬಿಕ್ಕಟ್ಟುಗಳಿಗೆ ಆಸ್ಪದ ಇಲ್ಲದಂತೆ 'ಬಿ ಖಾತಾ' ಗೊಂದಲಗಳನ್ನು ಬಗೆಹರಿಸಲು ಸರ್ಕಾರ ತುರ್ತುಕ್ರಮ ಕೈಗೊಳ್ಳಬೇಕಿದೆ. ತಾನು ಘೋಷಿಸಿರುವಂತೆ ಅನವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕುವುದರ ಜೊತೆಗೆ ಅಭಿವೃದ್ಧಿ ಕೆಲಸಗಳು ಕಡೆಗಣನೆಗೆ ಒಳಗಾಗದಂತೆ ನೋಡಿಕೊಳ್ಳುವ ಹೊಣೆ ಬಿಬಿಎಂಪಿ ಮೇಲಿದೆ.

ದಿನದ ಟ್ವೀಟ್

ಆಸಕ್ತಿಕರ ಸಂಗತಿ

ಕೋವಿಡ್ ಸೋಂಕು ವ್ಯಾಪಿಸಿರುವ ಮುಂಬೈನಲ್ಲಿ ಆಸಕ್ತಿಕರ ಅಂಶವೊಂದು ಬೆಳಕಿಗೆ ಬಂದಿದೆ. ಅದೆಂದರೆ, ಹೊಸದಾಗಿ ಕೋವಿಡ್ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿರುವುದು ಬಹುಮಹಡಿ ಕಟ್ಟಡಗಳು ಮತ್ತು ಮಧ್ಯಮ ವರ್ಗದವರು ನೆಲೆಸಿರುವ ಕಾಲೊನಿಗಳಲ್ಲಿಯೇ ವಿನಾ ಕೊಳೆಗೇರಿಗಳಲ್ಲಿ ಅಲ್ಲ. ಉಳ್ಳವರನ್ನು ಈಗ ಹೆಚ್ಚು ಬಾಧಿಸತೊಡಗಿದೆ ಅದು. ಅಲ್ಲದೆ, ಮೃತಪಟ್ಟ 267 ಮಂದಿಯಲ್ಲಿ 220ಕ್ಕೂ ಹೆಚ್ಚು ಮಂದಿ 65 ವರ್ಷಕ್ಕಿಂತ ಮೇಲ್ಪಟ್ಟವರು.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 1-4-1996

- **ಚುನಾವಣೆಗೆ 500 ಕೋಟಿ ರೂ. ವೆಚ್ಚ**

ನವದೆಹಲಿ, ಮಾರ್ಚ್ 31 (ಪಿಟಿಐ)– ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚಕ್ಕೆ ಮಿತಿ ಹೇರಿಕೊಳ್ಳಲಿ, ಬಿಡಲಿ. ಭಾರತೀಯ ತೆರಿಗೆದಾರ ಮಾತ್ರ ಈ ಬೇಸಿಗೆಯಲ್ಲಿ ನಡೆಯಲಿರುವ ಚುನಾವಣೆಗಳಿಗೆ ತನ್ನ ಕಾಣಿಕೆಯನ್ನಂತೂ ಸಲ್ಲಿಸಲೇಬೇಕು. ಇದು ಸಾರ್ವಜನಿಕ ಬೊಕ್ಕಸಕ್ಕೆ ಸುಮಾರು ರೂ 500 ಕೋಟಿಯಷ್ಟು ಹೊರೆ ಹಾಕಲಿದೆ ಎಂದು ಅಂದಾಜಿಸಲಾಗಿದೆ.

ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದ ಚಕ್ರಗಳ ಚಾಲನೆಯ ವೆಚ್ಚ 1952ರಿಂದಲೂ ಪ್ರತಿವರ್ಷ ಹೆಚ್ಚುತ್ತಲೇ ನಡೆದಿದೆ ಎಂಬುದನ್ನು ಚುನಾವಣಾ ಆಯೋಗದ ಅಂಕಿ ಅಂಶಗಳು ದೃಢಪಡಿಸಿವೆ. ಈವರೆಗೆ ನಡೆದಿರುವ ಚುನಾವಣೆಗಳಲ್ಲಿ 1991ರ ಚುನಾವಣೆ ಅತ್ಯಂತ ದುಬಾರಿಯದು. ಈ ಸಂದರ್ಭದಲ್ಲಿ ಸರ್ಕಾರ ಸುಮಾರು 400 ಕೋಟಿ ರೂಪಾಯಿಗಳನ್ನು ವ್ಯಯಿಸಿತ್ತು.

- **ತಮಿಳುನಾಡಿನಲ್ಲಿ ಕಾಂಗ್ರೆಸ್ ಇಬ್ಭಾಗ ಡಿಎಂಕೆ ಜತೆ ಭಿನ್ನ ಬಣ ಮೈತ್ರಿ**

ಮದ್ರಾಸ್, ಮಾರ್ಚ್ 31 (ಯು ಎನ್ಐ)– ಆಡಳಿತಾರೂಢ ಎಐಎಡಿಎಂಕೆ ಜೊತೆ ತಮಿಳುನಾಡಿನ ಕಾಂಗ್ರೆಸ್ ಸಮಿತಿಯು ಮೈತ್ರಿ ಮಾಡಿಕೊಳ್ಳಬೇಕು ಎಂಬ ಹೈಕಮಾಂಡ್‌ನ ಆದೇಶವನ್ನು ಧಿಕ್ಕರಿಸಿ, ಕಾಂಗ್ರೆಸ್‌ನ ಹಿರಿಯ ನಾಯಕ ಜಿ.ಕೆ.ಮೂಪನಾರ್ ಅವರು ಡಿಎಂಕೆಯೊಂದಿಗೆ ಸ್ಥಾನ ಹೊಂದಾಣಿಕೆಗೆ ನಿರ್ಧರಿಸಿರುವುದರಿಂದ ಕಾಂಗ್ರೆಸ್ ಇಬ್ಭಾಗ ಆಗಿದೆ. ಒಂದು ವರ್ಷದಲ್ಲಿ ಕಾಂಗ್ರೆಸ್ ವಿಭಜನೆ ಆಗುತ್ತಿರುವುದು ಇದು 2ನೇ ಸಲ.

ಡಿಎಂಕೆ ಹಾಗೂ ಮೂಪನಾರ್ ಬಣದ ಮೈತ್ರಿಗೆ ಚಿತ್ರನಟ ರಜನೀಕಾಂತ್ ಬೆಂಬಲ ವ್ಯಕ್ತಪಡಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 1-4-1971

- **ಬಾಂಗ್ಲಾದೇಶದ ಜನತಾ ವಿಪ್ಲವಕ್ಕೆ ಸಂಸತ್ತಿನ ಸಂಪೂರ್ಣ ಸಮರ್ಥನೆ**

ನವದೆಹಲಿ, ಮಾರ್ಚ್ 31– ಪೂರ್ವ ಬಂಗಾಲದ ಜನತೆ ಜನತಂತ್ರಾತ್ಮಕ ಜೀವನ ವಿಧಾನಕ್ಕಾಗಿ ಕೈಗೊಂಡಿರುವ ಹೋರಾಟಕ್ಕೆ ಭಾರತದ ಸಂಸತ್ ಗಾಢ ಸಹಾನುಭೂತಿಯನ್ನೂ ಪೂರ್ಣ ಸಮರ್ಥನೆಯನ್ನೂ ಇಂದು ಘೋಷಿಸಿತು. ಬಲ ಪ್ರಯೋಗವನ್ನು ಕೂಡಲೇ ನಿಲ್ಲಿಸಬೇಕೆಂದೂ ನಿಶ್ಶಸ್ತ್ರ ಜನತೆಯ ನರಮೇಧ ಕೊನೆಗಾಣಬೇಕೆಂದೂ ಕೇಳಿತು.

ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಜಯಘೋಷಗಳ ನಡುವೆ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯ, 'ಜನರ ಆಸೆ ಆಕಾಂಕ್ಷೆಗಳನ್ನು ತುಳಿಯುವ ಉದ್ದೇಶದಿಂದ ಪೂರ್ವ ಬಂಗಾಳದ ಇಡೀ ಜನತೆಯ ವಿರುದ್ಧ ಪಶ್ಚಿಮ ಪಾಕಿಸ್ತಾನದಿಂದ ರವಾನಿಸಿರುವ ಸಶಸ್ತ್ರ ಪಡೆಗಳ ಸಾಮೂಹಿಕ ದಾಳಿ'ಯನ್ನು ಗಮನಕ್ಕೆ ತಂದುಕೊಂಡಿದೆ.

'ನಿಮ್ಮ ಹೋರಾಟ ಮತ್ತು ತ್ಯಾಗಗಳಿಗೆ ಭಾರತದ ಜನತೆಯ ಹೃತ್ಪೂರ್ವಕ ಸಹಾನುಭೂತಿ ಮತ್ತು ಬೆಂಬಲ ದೊರಕುವುದು' ಎಂದು ನಿರ್ಣಯವು ಪೂರ್ವ ಬಂಗಾಳದ ಏಳೂವರೆ ಕೋಟಿ ಜನರಿಗೆ ಭರವಸೆ ಕೊಟ್ಟಿದೆ.

- **ನಗರ-ದೆಹಲಿಯ ನಡುವೆ ಹೆಚ್ಚು ನೇರ ಡಬ್ಬಿಗಳ ಓಡಾಟ**

ಬೆಂಗಳೂರು, ಮಾರ್ಚ್ 31– ಏಪ್ರಿಲ್ 1ರಿಂದ ಬೆಂಗಳೂರು–ದೆಹಲಿ ನಡುವೆ ನೇರವಾಗಿ ಹೋಗಿ ಬರುವ ಸೌಲಭ್ಯವನ್ನು ದಕ್ಷಿಣ ರೈಲ್ವೆ ಹೆಚ್ಚಿಸಿದೆ.

ಅಂದಿನಿಂದ ಈ ಮಾರ್ಗದಲ್ಲಿ ಒಂದು ಪೂರ್ಣ ಪ್ರಥಮ ದರ್ಜೆ ಡಬ್ಬಿ (22 ಸೀಟು) ಹಾಗೂ ಒಂದು ಪೂರ್ಣ ಮಲಗುವ ಹಾಗೂ ಕೂರುವ ಸೌಕರ್ಯ ಉಳ್ಳ 3ನೇ ತರಗತಿಯ ಡಬ್ಬಿ (40 ಸೀಟು) ನೇರವಾಗಿ ಸಂಚಾರ ಮಾಡುವುದು.

ಬಾಂಗ್ಲಾ ವಿಮೋಚನೆ: ಭಾರತದ ಸಾಮರ್ಥ್ಯವನ್ನು ಜಗತ್ತಿಗೆ ಸಾರಿದ ವಿದ್ಯಮಾನ

ಇಂದಿರಾ ಪರ್ವ, ಅಮೆರಿಕದ ಗರ್ವ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಬಾಂಗ್ಲಾದೇಶ ತನ್ನ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಇತ್ತೀಚೆಗೆ ಆಚರಿಸಿಕೊಂಡಿತು. ಬಾಂಗ್ಲಾ ವಿಮೋಚನೆಗೆ 50 ವರ್ಷ ಎಂದರೆ ಅದು ಇತಿಹಾಸದ ಒಂದು ಮಹತ್ವಪೂರ್ಣ ಅಧ್ಯಾಯವನ್ನು ನೆನಪು ಮಾಡಿಕೊಳ್ಳಬೇಕಾದ ಸಂದರ್ಭ. 'ಬಾಂಗ್ಲಾ ವಿಮೋಚನಾ ಯುದ್ಧ' ಪಾಕ್ ಸೇನೆಯ ಕ್ರೌರ್ಯ, ಅಮೆರಿಕದ ಬೂಟಾಟಿಕೆ, ಭಾರತದ ಸಾಮರ್ಥ್ಯವನ್ನು ಜಗತ್ತಿಗೆ ಕಾಣಿಸಿದ ಐತಿಹಾಸಿಕ ವಿದ್ಯಮಾನ. ಹಾಗಾಗಿ 'ಬಾಂಗ್ಲಾ ವಿಮೋಚನೆ' ಎಂದರೆ ಶೇಕ್ ಮುಜೀಬುರ್ ರಹಮಾನರ ಜೊತೆಗೆ ಇಂದಿರಾ ಗಾಂಧಿ, ನಿಕ್ಸನ್ ಹಾಗೂ ಕಿಸ್ಸಿಂಜರ್ ದ್ವಯರು, ಪಿ.ಎನ್.ಹಕ್ಸರ್, ಎಲ್.ಕೆ.ಝಾ, ಟಿ.ಎನ್.ಕೌಲ್‌ರಂತಹ ರಾಜತಾಂತ್ರಿಕ ನಿಪುಣರು, ಮಾಣೆಕ್ ಷಾರಂತಹ ಸೇನಾನಿಗಳು ಕೂಡ ನೆನಪಾಗಬೇಕು.

ಹಾಗೆ ನೋಡಿದರೆ, 1947ರಲ್ಲಿ ಒಂದು ರಾಷ್ಟ್ರವಾಗಿ ಜನ್ಮತಳೆಯುವಾಗಲೇ ಪಾಕಿಸ್ತಾನ ಒಡೆದುಹೋಗಿತ್ತು. ಪಶ್ಚಿಮ ಪಾಕಿಸ್ತಾನದ ಮುಸ್ಲಿಮರು, ಪೂರ್ವ ಪಾಕಿಸ್ತಾನದ ಮುಸ್ಲಿಮರನ್ನು ತುಚ್ಛವಾಗಿ ಕಾಣುತ್ತಿದ್ದರು. ಲಿಯಾಕತ್ ಅಲಿಖಾನ್ ನೇತೃತ್ವದ ಸರ್ಕಾರಕ್ಕೆ ಆಡಳಿತ ನಿರ್ವಹಣೆ ಅಸಾಧ್ಯ ಎನಿಸಿತ್ತು. 1958ರಲ್ಲಿ ಪಾಕಿಸ್ತಾನ ಸೇನೆ ಆಡಳಿತವನ್ನು ತೆಕ್ಕೆಗೆ ತೆಗೆದುಕೊಂಡಿತು. ಸ್ವತಂತ್ರಗೊಂಡ 23 ವರ್ಷಗಳ ಬಳಿಕ, ಅಂದರೆ 1970ರಲ್ಲಿ ಪಾಕಿಸ್ತಾನ ಮೊದಲ ಸಾರ್ವತ್ರಿಕ ಚುನಾವಣೆಗೆ ಅಣಿಯಾಯಿತು. ಪಶ್ಚಿಮ ಪಾಕಿಸ್ತಾನದಲ್ಲಿ ಭುಟ್ಟೊ ನಾಯಕತ್ವದ 'ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ' ಗೆದ್ದರೆ, ಪೂರ್ವ ಪಾಕಿಸ್ತಾನದಲ್ಲಿ ಮುಜೀಬ್ ನೇತೃತ್ವದ 'ಅವಾಮಿ ಲೀಗ್' ಹೆಚ್ಚಿನ ಸ್ಥಾನ ಗಳಿಸಿತು. ಆದರೆ ಆಡಳಿತವನ್ನು ಪ್ರಜಾ ಸರ್ಕಾರಕ್ಕೆ ಬಿಟ್ಟುಕೊಡಲು ಸೇನಾ ನಾಯಕ ಯಾಹ್ಯಾಖಾನ್ ಸಿದ್ಧರಿರಲಿಲ್ಲ.

ಪೂರ್ವ ಪಾಕಿಸ್ತಾನಕ್ಕೆ ಹೆಚ್ಚಿನ ಸ್ವಾಯತ್ತತೆ ಇರಬೇಕು ಮತ್ತು ಕೇಂದ್ರ ಸರ್ಕಾರ ಕೇವಲ ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರ ವಿಷಯಗಳನ್ನು ಮಾತ್ರ ನಿರ್ವಹಿಸಬೇಕು ಎಂಬ ಆರು ಅಂಶಗಳ ಯೋಜನೆಯನ್ನು 1966ರಲ್ಲಿ ಪ್ರತಿಪಾದಿಸಿದ್ದ ಮುಜೀಬ್, 1971ರ ಮಾರ್ಚ್ 7ರಂದು ಮಹತ್ವದ ಭಾಷಣವನ್ನು ಮಾಡಿ 'ಇದು ನಮ್ಮ ವಿಮೋಚನೆಯ ಹೋರಾಟ, ಸ್ವಾತಂತ್ರ್ಯದ ಹೋರಾಟ. ಪ್ರತೀ ಮನೆಯನ್ನು ಕೋಟೆಯನ್ನಾಗಿ ಮಾಡಿ ಶತ್ರುಗಳನ್ನು ಎದುರಿಸಿ' ಎಂದು ಸ್ವಾತಂತ್ರ್ಯದ ಕಹಳೆ ಊದಿದರು.

ಇದಕ್ಕೆ ಪ್ರತಿಯಾಗಿ ಅವಾಮಿ ಲೀಗನ್ನು ಯಾಹ್ಯಾಖಾನ್ ನಿಷೇಧಿಸಿದರು, ಮುಜೀಬರನ್ನು ಬಂಧಿಸಿ ರಾವಲ್ಪಿಂಡಿ ಜೈಲಿಗಟ್ಟಿದರು. ಹಿಂಸಾಚಾರ ಭುಗಿಲೆದ್ದಿತು. ಸೇನೆ 'ಆಪರೇಷನ್ ಸರ್ಚ್‌ಲೈಟ್' ಕಾರ್ಯಾಚರಣೆಗೆ ಇಳಿಯಿತು. ಹಿಂದೂಗಳನ್ನು ಗುರಿಯಾಗಿಸಿಕೊಂಡ ಜನಾಂಗೀಯ ಹತ್ಯೆ ನಡೆಯಿತು. ಭೀತಿಗೊಂಡ ಜನ ದೊಡ್ಡ ಸಂಖ್ಯೆಯಲ್ಲಿ ಭಾರತದತ್ತ ವಲಸೆ ಬರಲು ಆರಂಭಿಸಿದರು. ಭಾರತ ಮಧ್ಯಪ್ರವೇಶಿಸಿತು. 'ಮುಕ್ತಿ ವಾಹಿನಿ' ಗೆರಿಲ್ಲಾ ಪಡೆಗೆ ಸಾಮರಿಕ ತರಬೇತಿ ನೀಡಿತು. 1971ರ ಮಾರ್ಚ್ 26ರಂದು ಸ್ವಾತಂತ್ರ್ಯ ಘೋಷಿಸಿಕೊಂಡ ಪೂರ್ವ ಪಾಕಿಸ್ತಾನದ ತಾತ್ಕಾಲಿಕ ಸರ್ಕಾರ ಕೊಲ್ಕತ್ತಾಕ್ಕೆ ಸ್ಥಳಾಂತರಗೊಂಡಿತು.

ಇತ್ತ ಭಾರತದಲ್ಲಿ ಪ್ರತಿಪಕ್ಷಗಳು ಪಾಕಿಸ್ತಾನದ ಸೇನಾ ಕ್ರಮವನ್ನು ಖಂಡಿಸಿ ಸತ್ಯಾಗ್ರಹ ನಡೆಸಿದವು. ಯುದ್ಧ ಸಾರುವಂತೆ ಸರ್ಕಾರವನ್ನು ಆಗ್ರಹಿಸಿದವು. ಆದರೆ ಕಾಲ ಪಕ್ವವಾಗಿರಲಿಲ್ಲ. ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ, ಸೇನೆ ಸಿದ್ಧವಾಗಲು ಕೊಂಚ ಸಮಯ ಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಒಂದೊಮ್ಮೆ ಯುದ್ಧ ನಡೆದರೆ ಪಾಕಿಸ್ತಾನದ ಸಹಾಯಕ್ಕೆ ಚೀನಾ ನಿಲ್ಲಲಿದೆ ಮತ್ತು ಅಮೆರಿಕ ಅಗತ್ಯ ಯುದ್ಧ ಸಾಮಗ್ರಿಗಳನ್ನು ಒದಗಿಸಿ ತೆರೆಮರೆಯಲ್ಲಿ ಬೆಂಬಲ ನೀಡಲಿದೆ ಎಂಬುದು ಇಂದಿರಾ ಮತ್ತು ತಂಡಕ್ಕೆ ಮನವರಿಕೆಯಾಗಿತ್ತು. ಆ ತಂಡ ಹೊಸದೊಂದು ಕಾರ್ಯಯೋಜನೆ ರೂಪಿಸಿತು. ಇಂದಿರಾ ಮತ್ತು ಆಪ್ತ ಅಧಿಕಾರಿಗಳು ವಿವಿಧ ದೇಶಗಳಿಗೆ ಭೇಟಿ ಕೊಟ್ಟು ಬಾಂಗ್ಲಾದ ಪರ, ಪಾಕಿಸ್ತಾನದ ವಿರುದ್ಧ ಅಭಿಪ್ರಾಯ ರೂಪಿಸುವ ಮತ್ತು ಭಾರತದ ಮಧ್ಯಪ್ರವೇಶ ಏಕೆ ಎಂದು ವಿವರಿಸುವ ಕೆಲಸ ಮಾಡಿದರು. ಆಗ ಸವಾಲಾಗಿದ್ದೇ ಅಮೆರಿಕ.

ಅಮೆರಿಕದ ಅಧ್ಯಕ್ಷ ನಿಕ್ಸನ್ ಮತ್ತು ಭದ್ರತಾ ಸಲಹೆಗಾರ ಕಿಸ್ಸಿಂಜರ್ ಅದಾಗ ಚೀನಾದೊಂದಿಗೆ ಕೈಕುಲುಕಲು ಹಾತೊರೆಯುತ್ತಿದ್ದರು. ಆ ಪ್ರಕ್ರಿಯೆಗೆ ಪಾಕಿಸ್ತಾನ ಕೊಂಡಿಯಾಗಿತ್ತು. ಮಿಗಿಲಾಗಿ ಪಾಕಿಸ್ತಾನವು ಅಮೆರಿಕಕ್ಕೆ 24 ವರ್ಷಗಳ ಸ್ನೇಹಿತ. ಈ ಎರಡು ಕಾರಣಗಳಿಂದಾಗಿ ಪೂರ್ವ ಪಾಕಿಸ್ತಾನದಲ್ಲಿ ಪಾಕ್ ಸೇನೆ ನರಮೇಧ ನಡೆಸಿದರೂ ಅಮೆರಿಕ ಧ್ವನಿಯೆತ್ತಲಿಲ್ಲ! 'Yahya has not had such fun since the last Hindu massacre' ಎಂಬ ಕೀಳು ಮಟ್ಟದ, ಅಕ್ಷಮ್ಯ ಮಾತನ್ನು ಜನಾಂಗೀಯ ಹತ್ಯೆಯ ಕುರಿತಾಗಿ ಕಿಸ್ಸಿಂಜರ್ ಹೇಳಿದ್ದರು ಎಂಬುದನ್ನು 'ಪೆಂಟಗನ್ ಪೇಪರ್ಸ್' ಜಾಹೀರು ಮಾಡಿತ್ತು. ವ್ಯಕ್ತಿಗತವಾಗಿ ಇಂದಿರಾ ಮತ್ತು ನಿಕ್ಸನ್ ಅವರ ನಡುವೆ ಉತ್ತಮ ಬಾಂಧವ್ಯ ಇರಲಿಲ್ಲ. 'ಇಂದಿರಾ ಕುರಿತು ನಿಕ್ಸನ್ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಮುದ್ರಿಸಲು ಸಾಧ್ಯವಿಲ್ಲ' ಎಂದು ಕಿಸ್ಸಿಂಜರ್ ತಮ್ಮ ಆತ್ಮಕತೆಯಲ್ಲಿ ಬರೆದುಕೊಂಡಿದ್ದಾರೆ.

1971ರ ಆಗಸ್ಟ್ 9ರಂದು ಭಾರತ ಮತ್ತು ಸೋವಿಯತ್ ರಷ್ಯಾ ನಡುವೆ ಸ್ನೇಹ ಒಪ್ಪಂದ ಏರ್ಪಟ್ಟ ಬಳಿಕ ಅಮೆರಿಕ ಜಾಗೃತವಾಯಿತು. ಯಾಹ್ಯಾಖಾನ್ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿತು. ಆಗಲೂ ನಿಕ್ಸನ್ 'To All hands. Don't squeeze Yahya at this time. RN' ಎಂದು ಸ್ವಹಸ್ತಾಕ್ಷರದಲ್ಲಿ ಬರೆದು ಸಂದೇಶ ರವಾನಿಸಿದ್ದರು. 1971ರ ನವೆಂಬರ್ 4 ಮತ್ತು 5ರಂದು ಇಂದಿರಾ ಹಾಗೂ ನಿಕ್ಸನ್ ನಡುವೆ ಮಾತುಕತೆ ನಡೆಯಿತು. ಇಂದಿರಾ ಜೊತೆಗೆ ಪಿ.ಎನ್.ಹಕ್ಸರ್ ಇದ್ದರೆ, ನಿಕ್ಸನ್ ಬಗಲಲ್ಲಿ ಕಿಸ್ಸಿಂಜರ್ ಇದ್ದರು. ವಿಯೆಟ್ನಾಂ ಮತ್ತು ಚೀನಾ ವಿಷಯವನ್ನು ನಿಕ್ಸನ್ ನಿರ್ವಹಿಸಿದ ರೀತಿಯನ್ನು ಪ್ರಶಂಸಿಸುತ್ತಲೇ, ಪಾಕಿಸ್ತಾನದ ಪರವಾಗಿ ನಿಂತ ನಡೆಯನ್ನು ಇಂದಿರಾ ತೀವ್ರವಾಗಿ ಖಂಡಿಸಿದ್ದರು. ಈ ಕುರಿತು ಕಿಸ್ಸಿಂಜರ್ 'ಪ್ರಾಧ್ಯಾಪಕರೊಬ್ಬರು ಅಧ್ಯಯನದಲ್ಲಿ ಹಿಂದುಳಿದ ವಿದ್ಯಾರ್ಥಿಯನ್ನು ಉತ್ತೇಜಿಸುವಂತೆ ಇಂದಿರಾ ಮಾತು ಆರಂಭಿಸಿದರು, ನಿಕ್ಸನ್ ಮತ್ತು ಇಂದಿರಾ ನಡುವಿನ ಮಾತುಕತೆ ಕಿವುಡರಿಬ್ಬರ ನಡುವಿನ ಮಾತುಕತೆಯಂತಿತ್ತು' ಎಂದು ತಮ್ಮ ಅನುಭವ ಕಥನ 'ದಿ ವೈಟ್ ಹೌಸ್ ಇಯರ್ಸ್'ನಲ್ಲಿ ಬಣ್ಣಿಸಿದ್ದಾರೆ. 'ಬಾಂಗ್ಲಾ ವಿಮೋಚನೆಯ ಹೊರತಾಗಿ ಮತ್ತಾವುದೇ ಪರಿಹಾರಕ್ಕೆ ನಮ್ಮ ಸಮ್ಮತಿಯಿಲ್ಲ. ಬಲೂಚಿಸ್ತಾನವೂ ಪಾಕಿಸ್ತಾನಕ್ಕೆ ಸೇರಿದ್ದಲ್ಲ' ಎಂದು ಹೇಳಿ ಇಂದಿರಾ ಸಭೆಯಿಂದ ಎದ್ದಿದ್ದರು.

ಡಿಸೆಂಬರ್ 4ರಂದು ಯಾಹ್ಯಾಖಾನ್ ಯುದ್ಧ ಘೋಷಿಸಿದರು. ಡಿಸೆಂಬರ್ 6ರಂದು ಅಧಿಕೃತವಾಗಿ ಬಾಂಗ್ಲಾದೇಶವನ್ನು ಭಾರತ ಗುರುತಿಸಿತು. ಪೂರ್ವ ಪಾಕಿಸ್ತಾನದ ಬಳಿಕ ಪಾಕ್ ಆಕ್ರಮಿತ ಕಾಶ್ಮೀರದತ್ತ ಭಾರತ ದೃಷ್ಟಿ ನೆಟ್ಟಿತು. ನಿಕ್ಸನ್- ಕಿಸ್ಸಿಂಜರ್ ಜೋಡಿ ಭಾರತದ ಮೇಲೆ ಕೆಂಡವಾಯಿತು. ಆ ಸಂದರ್ಭದಲ್ಲಿ ಅವರು ಬಳಸಿದ ಅಶ್ಲೀಲ ಪದಗಳು ಅಮೆರಿಕಕ್ಕಾದ ಗರ್ವಭಂಗವನ್ನು ಧ್ವನಿಸುತ್ತಿದ್ದವು. ಭಾರತವನ್ನು ಹೇಗಾದರೂ ತಡೆಯಬೇಕೆಂಬ ದಿಸೆಯಲ್ಲಿ ಸೋವಿಯತ್ ಮೂಲಕ ಅಮೆರಿಕ ಒತ್ತಡ ಹೇರಿತು. ಪರಮಾಣು ವಿಮಾನವಾಹಕ ನೌಕೆ ಯುಎಸ್ಎಸ್ ಎಂಟರ್‌ಪ್ರೈಸ್ ಅನ್ನು ಬಂಗಾಳ ಕೊಲ್ಲಿಯತ್ತ ಕಳುಹಿಸಿತು. ಕೊನೆಗೆ ಡಿಸೆಂಬರ್ 16ರಂದು ಪಾಕಿಸ್ತಾನ ಸೇನೆ ಭಾರತಕ್ಕೆ ಶರಣಾಯಿತು. ಅದುವರೆಗೂ ಪಾಕಿಸ್ತಾನದ ಒಬ್ಬ ಸೈನಿಕ ಭಾರತದ ಹತ್ತು ಸೈನಿಕರಿಗೆ ಸಮ ಎಂಬ ಹಮ್ಮಿನಲ್ಲಿದ್ದ ಪಾಕ್ ಸೇನೆಗೆ ಮುಖಭಂಗವಾಗಿತ್ತು.

ನಿಕ್ಸನ್ ಭೇಟಿಯ ವೇಳೆ ಇಂದಿರಾ 'ಭಾರತದ ವಿಭಜನೆಯನ್ನು ಒಪ್ಪಿಕೊಂಡದ್ದಕ್ಕಾಗಿ ನನ್ನ ತಂದೆಯನ್ನು ದೂಷಿಸಲಾಯಿತು' ಎಂದಿದ್ದನ್ನು ಕಿಸ್ಸಿಂಜರ್ ಉಲ್ಲೇಖಿಸಿದ್ದಾರೆ. ಆ ದೂಷಣೆ ತೊಡೆದುಹಾಕಲೋ ಎಂಬಂತೆ ಪಾಕಿಸ್ತಾನವನ್ನು ಇಂದಿರಾ ಮುರಿದರೇ? ಒಂದೊಮ್ಮೆ ಅಮೆರಿಕ ತನ್ನ ಯುದ್ಧನೌಕೆಯನ್ನು ಬಂಗಾಳಕೊಲ್ಲಿಯತ್ತ ಕಳುಹಿಸದಿದ್ದರೆ, ಭಾರತದ ಮೇಲೆ ಸೋವಿಯತ್ ರಷ್ಯಾ ಒತ್ತಡ ಹೇರದಿದ್ದರೆ, ಕಾಶ್ಮೀರದ ಸಮಸ್ಯೆಯನ್ನು ಅಂದೇ ಇತ್ಯರ್ಥಗೊಳಿಸುವ ಇಂಗಿತವನ್ನು ಇಂದಿರಾ ಹೊಂದಿದ್ದರೇ? ಅಮೆರಿಕದ ಎದುರು ಅಂದು ಸೆಟೆದು ಕೂತ ಪ್ರಧಾನಿ ಇಂದಿರಾ ಅವರನ್ನು ಭಾರತ, ಬಾಂಗ್ಲಾದೇಶವಷ್ಟೇ ಅಲ್ಲ, ಅಮೆರಿಕವೂ ಮರೆಯಲಾರದು.



ಚುರುಮುರಿ



ಲಾತೋಂಕಾ ಭೂತಗಳು

• ಲಿಂಗರಾಜು ಡಿ.ಎಸ್.

ಇದಾನಸೌಧದಿಂದ ಬೇತಾಳನ್ನ ಕೆಳಕ್ಕಿಳಿಸಿ ಹೊತ್ತುಗ್ಯಂಡು ಹೊಂಟೆ. 'ಬಡ್ಡಿಹೈದ್ನೆ, ಮೆಲ್ಲಗೆ ಇಳುಕ್ಲಾ. ಕೊರೊನಾ ಎರಡನೇ ಅಲೆ ಸುರುವಾಗ್ಯದಂತೆ. ನಾನಿನ್ನೂ ಟೆಸ್ಟೂ ಮಾಡ್ಸಿಲ್ಲ, ವ್ಯಾಕ್ಸೀನೂ ತಗಂಡಿಲ್ಲ!' ಅಂತ ಮಾತು ಸುರು ಮಾಡ್ತು.

'ಈವತ್ತು ಒಂದು ಕತೆ ಏಳ್ತಿನಿ ಕಲಾ. ರಾಜಾಹುಲಿಯ ರಾಜ್ಯಕ್ಕೆ ಕೊರೊನಾ ಮಾರಿ ಎರಡನೇ ಬಾರಿ ಬತ್ತಾವಳೆ ಅಂತ ಮಾಹಿತಿ ಸಿಕ್ತು. ಹೋದಸಲ ಮಾರಿಗೆ ಪೂಜೆ ಸಲ್ಲಿಸದ ಕಾರಣ ಅವಮ್ಮ ಸಿಟ್ಗಂಡು ಸೋಂಕು ಹೆಚ್ಚಿಸಿದರೆ ಕಷ್ಟಾಯ್ತದೆ ಅಂತ ಹೆದರಿದ ರಾಜಾಹುಲಿಯು ದೇವಿಗೆ ಪೂಜೆ ಮಾಡಿ ಅಡ್ಡಬಿದ್ದ. ಮಾರವ್ವ 'ರಾಜಾಹುಲಿ, ನಾನು ಪ್ರಸನ್ನಳಾಗಿರುವೆ. ನಿನಗೇನು ವರ ಬೇಕು ಕೇಳು!' ಅಂದಳು. ರಾಜಾಹುಲಿಯು 'ತಾಯೇ ಹೋದ ಸಾರಿಯಂಗೆ ರಾಂಗಾಗಬ್ಯಾಡ, ಈ ಸಾರಿ ನನ್ನ ರಾಜ್ಯದಲ್ಲಿ ನೂರೇ ಜನಕ್ಕೆ ಸೋಂಕು ತರಬೇಕು' ಎಂದನು. ಮಾರಿಯು ಅದಕ್ಕೆ ಒಪ್ಪಿಕೊಂಡಳು'.

ರಾಜಾಹುಲಿ ಎಚ್ಚರಿಕೆಯಿಂದ ಇರಿ ಅಂತ ಜನಕ್ಕೆ ಕೇಳಿಕೊಂಡನು. ಆದರೆ ರಾಜ್ಯದಲ್ಲಿ ಸೋಂಕಿತರ ಸಂಖ್ಯೆ ದಿನಕ್ಕೆ ಸಾವಿರಗಟ್ಟಲೇ ಹೆಚ್ಚತೊಡಗಿತು. ಈಗ ಹೇಳು, ಮಾರಿಯು ಮಾತು ತಪ್ಪಿ ಸಾವಿರಾರು ಜನಕ್ಕೆ ಅಮರಿಕೊಂಡಿದ್ದು ಯಾಕೆ? ಲಸಿಕೆ ಪ್ರಯೋಜನಕ್ಕೆ ಬರಲಿಲ್ಲವೇ? ರಾಜಾಹುಲಿಯ ತಪ್ಪೇನು? ಲಾಕ್‌ಡೌನ್ ಫಿಕ್ಸಾ? ಏನಿರುತ್ತೆ-ಏನಿರಲ್ಲ? ಇದಕ್ಕೆ ಕಾರಣೀಭೂತರು ಯಾರು?' ಅಂತ ಟೀವಿಯವರ ಥರ ಪ್ರಶ್ನೆ ಕೇಳಿತು. ನಾನು ಉತ್ತರ ಹೇಳಲೇಬೇಕಾಯ್ತು.

'ಎಲಾ ಬೇತಾಳವೇ ಮಾರಿ ಸೋಂಕಿದ್ದು ನೂರೇ ಜನಕ್ಕೆ. ವಿದ್ಯಾವಂತರೇ ಮದುವೆ, ಜಾತ್ರೆ, ಧರಣಿ, ಮುಷ್ಕರಗಳಲ್ಲಿ ಅಂತರ ಕಾಪಾಡದೇ ಮಾಸ್ಕು ಹಾಕದೇ ಲಸಿಕೆ ತೆಗೆದುಕೊಳ್ಳದೇ 'ಎಲ್ಲಿದೆ ಕೊರೊನಾ?' ಅಂತ ಧಿಮಾಕಲ್ಲಿ ಸೋಂಕು ಹಂಚಿದ್ದರು. ರಾಜಾಹುಲಿ ಮೃದುವಾಗಿ ಹೇಳಿದ್ದೇ ತಪ್ಪು! ನಿನ್ನಂತಾ ಲಾತೋಂಕಾ ಭೂತ್ ಬಾತೋಂಸೆ ನೈ ಮಾನತಾ. ಲಾತ ಕೊಟ್ರೇ ಸರಿ' ಅಂದಾಗ ಬೆದರಿದ ಬೇತಾಳ ಮಕ್ಕೆ ಮಾಸ್ಕಾಕಿಕೊಂಡು 'ಆಯ್ತು ಕಪ್ಪಾ, ನನ್ನಿಂದ ಡಿಸ್ಟೆನ್ಸ್ ಮೇಂಟೇನ್ ಮಾಡು' ಅಂದು ಪರಾರಿಯಾಯ್ತು.

ಸಂಗತ

ಹಾಸ್ಯ ಎಂಬ ನಿರೀಕ್ಷಣಾ ಜಾಮೀನು!

ಇಂದು (ಏ. 1) ಮೂರ್ಖರ ದಿನ. ವಿನೋದವು ದುಃಖ, ದುಮ್ಮಾನ, ಉದ್ವೇಗವನ್ನು ಕಡಿಮೆಗೊಳಿಸುವ ಮೂಲಕ ಮನಸ್ಸಿನ ಭಾರ ಇಳಿಸುತ್ತದೆ

• ಯೋಗಾನಂದ

ನೌಕರಿ ನಿಮಿತ್ತ ಸಂದರ್ಶನಕ್ಕೆ ಹೊರಟ ಮಗನನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿದ ಅವನ ತಂದೆ 'ಎಲ್ಲಿ ರಾಜ ನಿನ್ನ ಮೇಲ್ವಸ್ತ್ರ' ಎಂದು ಪ್ರಶ್ನಿಸುತ್ತಾರೆ. 'ಅಪ್ಪ, ಸೂಟಿನ ಮೇಲೆ ಎಂಥ ಮೇಲ್ವಸ್ತ್ರ?' ಅಂತ ಮಗ ಕಕ್ಕಾಬಿಕ್ಕಿ. 'ಇದೆ ಕಣಪ್ಪ, ಈ ಸಿಡುಕು ಮೋರೆಯೇಕೆ? ರವಷ್ಟು ನಗು ಇರಲಿ' ಎಂದು ತಂದೆ ಹೇಳಿದಾಗಲೇ ಮಗನಿಗೆ ವಿಷಯ ಅರಿವಾಗಿದ್ದು, ಮುಖ ಅರಳಿದ್ದು.

ಬದುಕಿನ ಒಟ್ಟಾರೆ ಗುಣಮಟ್ಟ ಸುಧಾರಿಸಬಲ್ಲ ಹಾಸ್ಯಪ್ರವೃತ್ತಿಗೆ ಎಲ್ಲರೂ ವ್ಯವಧಾನ ಕಲ್ಪಿಸಿಕೊಳ್ಳಬೇಕಿದೆ. ಕೆಣಕುಮುಕ್ತ ವಿನೋದ ಯಾವುದೇ ಸಮಸ್ಯೆಯ ಪರಿಹಾರದ ಒಳನೋಟಕ್ಕೆ ಆಕರವಾಗಬಲ್ಲದು. ತನ್ಮೂಲಕ ಪುನರ್ ಅವಲೋಕನಕ್ಕೆ ಆಸ್ಪದವಾಗುತ್ತದೆ. ಹಾಸ್ಯ ಎಂಥದ್ದೇ ಸಂಘರ್ಷವನ್ನು ಸೃಜನಾತ್ಮಕ ಪರಿಹಾರದತ್ತ ಒಯ್ದೀತು. ಪರಸ್ಪರ ವಿಶ್ವಾಸ ಮತ್ತು ಅನುಭೂತಿಗೆ ಹಾದಿಯಾದೀತು.

ಪತ್ನಿಗೆ ಪತಿ 'ನಿನ್ನೆ ಚಟ್ನಿಗೆ ಉಪ್ಪು ಚಲೋ ಇತ್ತು' ಅಂತ ಹೇಳುವುದು ದೂರೆನ್ನಿಸದು. ಇವೊತ್ತು ಖಾರ ಎನ್ನುವುದಕ್ಕೆ ಅದು ಪತಿಯ ಹಿತ ಪರ್ಯಾಯ ಆಯ್ಕೆ. ಟೀಕೆ ಅದೇ ಆದರೂ ನಯ, ನಾಜೂಕು. ವಿಡಂಬನೆಯ ಸಾಮರ್ಥ್ಯವೆಂದರೆ ಇದೇ ಅಲ್ಲವೇ? ಕಲಿಕೆಯ ಮನಃಶಕ್ತಿಯನ್ನು ಉತ್ತಮೀಕರಿಸುವ ತಮಾಷೆಯೆನ್ನುವುದೇ ಒಂದು ವಿಶಿಷ್ಟ ಭಾಷೆ. ಅದು ಸಿದ್ಧಮಾದರಿಯಾಗದೆ ಸಾಂದರ್ಭಿಕವಾಗಿರಬೇಕು. ಹಾಸ್ಯಪ್ರವೃತ್ತಿ ನಮ್ಮ ಭೌತಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಪರಿಣಾಮಕಾರಿ ಔಷಧಿಗಳಲ್ಲೊಂದು. ಅಮೆರಿಕದ ಕಾದಂಬರಿಕಾರ ಜಾರ್ಜ್ ಸಾಂಡರ್ಸ್ 'ನಿರೀಕ್ಷೆಗೂ ಮೀರಿ ತ್ವರಿತವಾಗಿ, ನೇರವಾಗಿ ನಿಜ ಹೇಳುವುದರ ಪರಿಣಾಮವೇ ಹಾಸ್ಯ' ಎನ್ನುತ್ತಾರೆ. ಅಚ್ಚರಿಯೆಂದರೆ ರೋಚಕತೆಗಿಂತ ಹೆಚ್ಚಾಗಿ ರಚನಾತ್ಮಕತೆಯು ವಿನೋದದಲ್ಲಿ ಅಂತರ್ಗತವಾಗಿರುತ್ತದೆ. ಅದು ಗೇಲಿಯಾಗದೆ ಗಂಭೀರವಾಗಿ ಇರಬೇಕಷ್ಟೆ. ಪರರನ್ನು ನಿಂದಿಸಿ, ಅಪಹಾಸ್ಯಕ್ಕೀಡಾಗಿಸಿ ನಗಬೇಕಾದ್ದು, ನಗಿಸಬೇಕಾದ್ದು ಏನೂ ಇಲ್ಲ.

ಪ್ರಹಸನ ಬ್ರಹ್ಮ ಟಿ.ಪಿ.ಕೈಲಾಸಂ ಅವರೊಂದಿಗಿನ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಏರ್ಪಟ್ಟ ಒಂದು ಸಂವಾದ. ಒಂದು ಹಂತದಲ್ಲಿ 'ನಿಮ್ಮ ಜೋಕು ಅರ್ಥವಾಗಲಿಲ್ಲ, ಕೃಪೆಯಿಟ್ಟು ವಿವರಿಸಿ ಸಾರ್' ಎಂದು ಸಭಿಕರೊಬ್ಬರು ವಿನಂತಿಸಿದರು. ಜೋಕು ವಿವರಿಸಿ ಅದನ್ನು ಕೊಲ್ಲಲಾರೆ ಎಂದರು ಕೈಲಾಸಂ! ತದನಂತರ ಕೈಲಾಸಂ ಇನ್ನೊಂದು ಜೋಕು ಹೇಳಿದವರೆ 'ಇದು ಜೋಕು, ದಯವಿಟ್ಟು ನಗಿ' ಎಂದಿದ್ದರು!

ಮೇಧಾವಿಗಳ ನವಿರು ವಿಡಂಬನೆಗಳು ಇಂದಿಗೂ ಹಸಿರಾಗಿರುವುದು ಅವುಗಳ ಪ್ರಬೋಧಶೀಲತೆಯಿಂದ. ಒಮ್ಮೆ ಭಾರತದ ಪ್ರಥಮ ಗವರ್ನರ್ ಜನರಲ್ ಚಕ್ರವರ್ತಿ ರಾಜಾಜಿಯವರು ಮನೆಯಲ್ಲಿ ತಮ್ಮ ಬೂಟಿಗೆ ಪಾಲೀಷು ಹಾಕುತ್ತಿದ್ದರು. ಆಪ್ತ ಮಿತ್ರರೊಬ್ಬರಿಗೆ ಈ ದೃಶ್ಯ ಅತಿಶಯವಾಯಿತೇನೋ. 'ಸರ್, ಇದೇನು ತಮ್ಮ ಬೂಟಿಗೆ ತಾವೇ ಪಾಲೀಷು ಹಾಕುವುದೇ?' ಎಂದರು. ಥಟ್ಟನೆ ರಾಜಾಜಿ 'ಹೌದು, ನೀವು ಪಾಲೀಷು ಹಾಕುವುದು ಯಾರ ಬೂಟಿಗೆ?' ಎನ್ನುವುದೇ? ಬೀಚಿಯವರು ಪಾದರಕ್ಷೆ ಅಪಹರಣಕಾರರ ಬಗ್ಗೆ ಎಚ್ಚರಿಸುವ ಪರಿ ಗಮನಿಸಿ: 'ಮದುವೆ ಮನೆಗೆ ಚಪ್ಪಲಿ ಧರಿಸಿ ಹೋಗದಿರಿ, ಬರುವಾಗ ಧರಿಸಿ ಬನ್ನಿ'. ವಿನೋದವು ಸಾವನ್ನೂ ತನ್ನ ವ್ಯಾಪ್ತಿಯಲ್ಲಿ ಇರಿಸಿಕೊಳ್ಳುತ್ತದೆ. ಎಚ್.ನರಸಿಂಹಯ್ಯ ತಮ್ಮ ಕೊನೆಯ ದಿನಗಳಲ್ಲಿ 'ನನ್ನನ್ನು ಇದ್ದೂರಿನಲ್ಲೇ ಸುಡಬೇಕು...' ಎನ್ನುತ್ತಿದ್ದರು. ಈ ಒಕ್ಕಣೆಯಂಚಿಗೆ '...ಸತ್ತಮೇಲೆ' ಎನ್ನುವ ಷರಾ ಇರುತ್ತಿತ್ತು! ನಿಷ್ಠುರವಾದರೂ ವಿನೋದಕ್ಕೆ ಸಮಾಜದ ಓರೆ ಕೋರೆಗಳನ್ನು ಸರಿಪಡಿಸುವ ಬದ್ಧತೆಯಿರುತ್ತದೆ. ಒಂದರ್ಥದಲ್ಲಿ ಹಾಸ್ಯಕ್ಕೆ ಪರರನ್ನು ನವಿರಾಗಿ ಅವಮಾನಿಸಿ, ನಿರೀಕ್ಷಣಾ ಜಾಮೀನು ಪಡೆದು ಅವರನ್ನು ತಿದ್ದುವ ಉದ್ದೇಶವೆನ್ನೋಣ.

'ನಾವೇ ಎದ್ದು ಬೊಗಳೋಕೆ ನಾಯಿ ಯಾಕೆ ಸಾಕ್ಬೇಕು?', 'ಅರಮನೆ ಮುಂದೆ, ಕುದುರೆ ಹಿಂದೆ ಹೋಗಬೇಡ', 'ಆನೆಯಂಥದ್ದೂ ಮುಗ್ಗರಿಸ್ತದೆ'... ಗಾದೆಗಳೇ ಜನಪದರ ಅನುಭವಜನ್ಯ ವಿವೇಕಯುತ ವಿನೋದಕ್ಕೆ ಸಾಕ್ಷಿ. ತೆರೆದ ಮನಸ್ಸು ಸಹಜವಾಗಿಯೇ ಹಾಸ್ಯ ಆವಾಹಿಸಬಲ್ಲದು, ಕಟ್ಟಬಲ್ಲದು, ಹಂಚಬಲ್ಲದು. ವಿನೋದವು ದುಃಖ, ದುಮ್ಮಾನ, ಉದ್ವೇಗಗಳನ್ನು ಹಗುರಾಗಿಸಿ ವರ್ತಮಾನಕ್ಕೆ ಆದ್ಯತೆ ಕಲ್ಪಿಸುತ್ತದೆ. 'ಒಳಗೆ ಹಗಿಯಿಲ್ಲದ ನಗಿ' ಅದರ ಆಶಯ. ಜಂಜಡ ಮೀರಿ ಮುಖವು ನಿತ್ಯಹರಿದ್ವರ್ಣ ಕಾಡಿನಂತಿರಬೇಕು, ಕಾಡು ಬಾ ಎನ್ನುವಂತಿರಬಾರದು.

ಅರವತ್ತು-ಎಪ್ಪತ್ತರ ದಶಕಗಳಲ್ಲಿ ಚಲನಚಿತ್ರಗಳಲ್ಲಿ ಗಂಭೀರ ಹಾಸ್ಯ ರಾರಾಜಿಸಿತ್ತು. ತಾವು ತಯಾರಿಸಬೇಕೆಂದಿದ್ದ ಸಿನಿಮಾಗಳಿಗೆ ನಿರ್ಮಾಪಕ, ನಿರ್ದೇಶಕರು ಮೊದಲು ಪ್ರಸಿದ್ಧ ಹಾಸ್ಯ ಪಾತ್ರಧಾರಿಗಳನ್ನು ನಿಗದಿಪಡಿಸಿಕೊಂಡು ನಂತರವೇ ಉಳಿದ ಪಾತ್ರಧಾರಿಗಳಿಗೆ ಹುಡುಕಾಡುತ್ತಿದ್ದರಂತೆ. ಮನೆಗೆ ಬಂದ ವೈದ್ಯ, ರೋಗಿಯನ್ನು ಪರೀಕ್ಷಿಸುತ್ತ ನೀರು ಕೇಳುವುದು, ವೈದ್ಯ ತನ್ನ ಕಿಸೆಯಿಂದ ಗುಳಿಗೆ ತೆಗೆದು ನುಂಗುವವರೆಗೆ ಮನೆಮಂದಿ (ಪ್ರೇಕ್ಷಕರೂ) ಗುಳಿಗೆ ರೋಗಿಗೆಂದೇ ಭಾವಿಸಿರುತ್ತಾರೆ! ಅಂದಕಾಲತ್ತಲೆ ಇಂಥ ಮೆಲುಕು ಹಾಕುವಂಥ ಹಾಸ್ಯ ಪ್ರಸಂಗಗಳು ತೆರೆಯಲ್ಲಿ ಮೆರೆಯುತ್ತಿದ್ದವು. ಇಂದೋ ಬಹುತೇಕ ದ್ವಂದ್ವಾರ್ಥಗಳೇ ವಿನೋದವೆನ್ನಿಸಿವೆ.

'ತಮಾಷೆ ಹಬ್ಬ' ಅಥವಾ 'ವಿನೋದೋತ್ಸವ' ಎಂದರೆ ಸನ್ನಿವೇಶಪ್ರೇರಿತವಾಗದ ನಗೆಯ ತುಣುಕುಗಳು ಯಾಂತ್ರಿಕವಾಗಿ ವೇದಿಕೆಯಿಂದ ಪುಂಖಾನುಪುಂಖ ಪ್ರೇಕ್ಷಕರಿಗೆ ರವಾನೆಯಾಗುವುದಲ್ಲ. ಪೈಪೋಟಿಯಲ್ಲಿ ಯಥಾಶಕ್ತಿ ಸಂಗ್ರಹಿತ ಜೋಕುಗಳ ಬುತ್ತಿ ಮಂಡಿಸುವುದಲ್ಲ. ಇದು ಹೇಗೂ ಇರಲಿ, ಇಷ್ಟು ಹೊತ್ತು ನಗಿಸಲು ಇಷ್ಟು ಎನ್ನುವಷ್ಟು ನಗೆ ಮಾರುಕಟ್ಟೆಯಾಗಬೇಕೇ? ನಗೆ ಪ್ರಖರ ಅನುಸಂಧಾನವಾಗಿ, ಬದುಕಿನ ಸಂಸ್ಕಾರವಾಗಿ ಮೈದಳೆಯಬೇಕಿದೆ.

ವಾಚಕರ ವಾಣಿ

ಇಂಥ ಪದ ಬಳಕೆ ತರವೇ?

ರಾಜಕೀಯ ಜಂಜಾಟದಲ್ಲಿ ಸಿಲುಕಿರುವ ಒಬ್ಬ ಹೆಣ್ಣುಮಗಳ ಬಗ್ಗೆ ಕೆಲವು ಮಾಧ್ಯಮಗಳು ಸುದ್ದಿ ಬಿತ್ತರಿಸುತ್ತಿರುವ ಪರಿ ಬಹಳ ಬೇಸರ ತರಿಸುವಂತಿದೆ. ಆಕೆಯ ಹೆಸರನ್ನು ಬಹಿರಂಗಪಡಿಸದೇ ಇರುವುದು ಸರಿ. ಆದರೆ, ಆಕೆಯನ್ನು 'ಸಿ.ಡಿ. ಲೇಡಿ' ಎಂದು ಸಂಬೋಧಿಸುತ್ತಿರುವುದು ಎಷ್ಟು ನ್ಯಾಯಸಮ್ಮತ ಎಂದು ಕೇಳಬೇಕಿದೆ. ಸಂವೇದನೆಯೇ ಇಲ್ಲದಿದ್ದರೆ ಹೇಗೆ?

ಈ ಹೆಣ್ಣುಮಗಳ ಕುರಿತು ಅವಹೇಳನಕಾರಿಯಾಗಿ ಮಾತನಾಡುವ ಹಕ್ಕನ್ನು ಇವರಿಗೆ ನೀಡಿದವರು ಯಾರು? ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಲು ನಮ್ಮಿಂದ ಇನ್ನೂ ಆಗಿಲ್ಲ. ಅದರೊಂದಿಗೆ ಇಂತಹ ಮಾತುಗಳು ಬೇರೆ! ಇವು ಕೂಡ ಅಷ್ಟೇ ಪರಿಣಾಮ ಬೀರುತ್ತವೆ ಎಂಬುದನ್ನು ಅರಿಯಬೇಕು. ಮಹಿಳೆಯರ ಕುರಿತು ಸಮಾಜದ ಮನೋಭಾವ ಬದಲಾಗಬೇಕಿದೆ. ಈ ದಿಸೆಯಲ್ಲಿ ಅರಿವು ಮೂಡಿಸುವ ಜವಾಬ್ದಾರಿ ಹೊತ್ತಿರುವವರೇ ಹೀಗೆ ಮಾತನಾಡಿದರೆ, ಇನ್ನು ಜನಸಾಮಾನ್ಯರು ಹೇಗೆ ವರ್ತಿಸಿಯಾರು? ಇಂತಹ ಪದ ಬಳಕೆಯನ್ನು ಇನ್ನಾದರೂ ನಿಲ್ಲಿಸಲಿ.

ಗಿರಿಜಾ ಕೆ.ಎಸ್., ತುಮಕೂರು

ಆಡಳಿತ ಮಂಡಳಿ ರಚನೆಯಾಗಲಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಿಂದ ಕಾಗಿನೆಲೆ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ರಾಜ್ಯ ಮಟ್ಟದಲ್ಲಿ ಚರ್ಚೆಯಾಗಲೀ ಸಂವಾದಗಳಾಗಲೀ ಕಾವ್ಯ ಕಮ್ಮಟಗಳಾಗಲೀ ಎರಡು ವರ್ಷಗಳಿಂದ ನಡೆದಿಲ್ಲವೆಂದು ಮಲ್ಲಪ್ಪ ಫ. ಕರೇಣ್ಣನವರ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಮಾರ್ಚ್ 30). ಅಕಾಡೆಮಿ ಸ್ಥಾನಮಾನ ಹೊಂದಿರುವ ಕನಕದಾಸ ಅಧ್ಯಯನ ಕೇಂದ್ರಕ್ಕೆ ಯಡಿಯೂರಪ್ಪ ನೇತೃತ್ವದ ಸರ್ಕಾರ ಆಡಳಿತ ಮಂಡಳಿಯನ್ನೇ ನೇಮಕ ಮಾಡಿಲ್ಲವೆಂದಮೇಲೆ ಕಾರ್ಯಕ್ರಮಗಳು ಹೇಗೆ ಜರುಗುತ್ತವೆ?

ಸಿದ್ದರಾಮಯ್ಯ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸಾಹಿತಿ ಕಾ.ತ.ಚಿಕ್ಕಣ್ಣನವರ ನೇತೃತ್ವದಲ್ಲಿ ಕೇಂದ್ರವು ಕಾರ್ಯ ನಿರ್ವಹಣೆಯಲ್ಲಿ ಉತ್ತುಂಗ ಸ್ಥಾನದಲ್ಲಿತ್ತು. ಇಂಥ ಅಧ್ಯಯನ ಕೇಂದ್ರದ ಆಡಳಿತ ಮಂಡಳಿಯನ್ನು ಈಗಿನ ಸರ್ಕಾರ ರದ್ದುಪಡಿಸಿತು. ತದನಂತರದಲ್ಲಿ ಆಡಳಿತ ಮಂಡಳಿಗೆ ನಾಮನಿರ್ದೇಶಕ ಸದಸ್ಯರು, ಸಂಯೋಜಕರನ್ನು ನೇಮಕ ಮಾಡಲೇ ಇಲ್ಲ. ಇನ್ನಾದರೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಇತ್ತ ಗಮನಹರಿಸಿ, ಕನಕದಾಸ ಅಧ್ಯಯನ ಕೇಂದ್ರಕ್ಕೆ ಕಾರ್ಯಾನುಷ್ಠಾನ ಮಂಡಳಿಯನ್ನು ರಚಿಸಿ ಪುನರುಜ್ಜೀವ ನೀಡಬೇಕಾಗಿದೆ.

ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ, ದಾವಣಗೆರೆ

ಕಕ್ಷಿದಾರಸ್ನೇಹಿ 'ಲೋಕ ಅದಾಲತ್'

ಮೈಸೂರು ಜಿಲ್ಲೆಗೆ ಒಳಪಡುವ 52 ನ್ಯಾಯಾಲಯಗಳಲ್ಲಿ ಇತ್ತೀಚೆಗೆ ಲೋಕ ಅದಾಲತ್ ಮೂಲಕ ಜಾಮೀನುರಹಿತ ಕ್ರಿಮಿನಲ್ ಕೇಸುಗಳನ್ನು ಹೊರತುಪಡಿಸಿ, ಒಟ್ಟಾರೆ ದಾಖಲಾದ 24,951 ಪ್ರಕರಣಗಳ ಪೈಕಿ, 14,237 ಪ್ರಕರಣಗಳನ್ನು ಒಂದೇ ದಿನ ಇತ್ಯರ್ಥಪಡಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ವಿವಾಹ ವಿಚ್ಛೇದನ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದ 29 ಜೋಡಿಗಳು ತಮ್ಮ ಸಮಸ್ಯೆಗಳನ್ನು ಸೌಹಾರ್ದದಿಂದ ಬಗೆಹರಿಸಿಕೊಂಡು ಮತ್ತೆ ಒಂದಾಗಿರುವುದು ಮೆಚ್ಚತಕ್ಕ ಸಂಗತಿ. ವರ್ಷಾನುಗಟ್ಟಲೆ ಇತ್ಯರ್ಥಗೊಳ್ಳದ ಪ್ರಕರಣಗಳಿಗೆ ಲೋಕ ಅದಾಲತ್ ಸಂಜೀವಿನಿ ಸ್ವರೂಪದ್ದಾಗಿದೆ. ಮುಖ್ಯವಾಗಿ ಇದು ಕಕ್ಷಿದಾರಸ್ನೇಹಿಯಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ನಡೆಯುವ ಲೋಕ ಅದಾಲತ್‌ಗಳು ಹೆಚ್ಚು ಹೆಚ್ಚು ಜನಪ್ರಿಯವಾಗಲು ನಾನಾ ಕಾರಣಗಳಿವೆ. ಮುಖ್ಯವಾಗಿ ಅಮೂಲ್ಯವಾದ ಸಮಯದ ಉಳಿತಾಯ, ಅತ್ಯಂತ ಕಡಿಮೆ ಖರ್ಚಿನಲ್ಲಿ ವ್ಯಾಜ್ಯಗಳ ಬಗೆಹರಿಸುವಿಕೆ, ಕೋರ್ಟ್ ಫೀ ಪಾವತಿಯಲ್ಲಿ ವಿನಾಯಿತಿ ಮುಂತಾದ ಆಕರ್ಷಕ ಉಪಕ್ರಮಗಳಿಂದಾಗಿ ನ್ಯಾಯ ವಿತರಣೆಯಲ್ಲಿ ಲೋಕ ಅದಾಲತ್ ದಾಪುಗಾಲು ಹಾಕುತ್ತಿದೆ. ವರ್ಷಾನುಗಟ್ಟಲೆ ಕೋರ್ಟು- ಕಚೇರಿಗಳಿಗೆ ಅಲೆದಲೆದು ಬಸವಳಿದಿರುವ ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಳ್ಳಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ಮದ್ಯದ ಬಾಟಲಿ: ಮರುಬಳಕೆಗೆ ಪೂರಕವಾಗಿರಲಿ

ಈಚೆಗೆ ಅನಾರೋಗ್ಯದ ನಿಮಿತ್ತ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಬ್ಬರು ತಮ್ಮ ಅಂಗಾಲುಗಳಿಗೆ ಅಗಲವಾದ ಪಟ್ಟಿ ಕಟ್ಟಿಸಿಕೊಂಡು ಕೂತಿದ್ದರು. ಬಿಳಿಯ ಪಟ್ಟಿಯ ಮೇಲೆ ಕೆಂಪು ರಕ್ತದ ಕಲೆ ಢಾಳಾಗಿ ಕಾಣುತ್ತಿತ್ತು. ಮಕ್ಕಳ ಗಾಯದ ಕುರಿತು ಆತಂಕಗೊಂಡು ಶುಶ್ರೂಷಕರನ್ನು ವಿಚಾರಿಸಿದಾಗ, ಆ ಮಕ್ಕಳು ಸ್ಥಳೀಯ ಶಾಲೆಯ ಬಯಲಿನಲ್ಲಿ ಆಡುವಾಗ, ಒಡೆದ ಮದ್ಯದ ಶೀಷೆಯ ಚೂರುಗಳು ನೆಟ್ಟು ಗಾಯಗೊಂಡಿದ್ದಾರೆ ಎಂಬುದು ಗೊತ್ತಾಯಿತು. ಅಲ್ಲದೆ ಈ ರೀತಿಯ ಅಪಘಾತಗಳು ವಾರದಲ್ಲಿ ಕನಿಷ್ಠ ಎರಡಾದರೂ ಸಂಭವಿಸುತ್ತಲೇ ಇರುತ್ತವೆ ಎಂಬುದು ತಿಳಿದು ಖೇದವಾಯಿತು. ಪ್ರಸ್ತುತ ಶಾಲೆ, ರಸ್ತೆಗಳು, ಹೊಲಗಳು, ನೀರಿನ ಆಕರಗಳು, ದೇವಸ್ಥಾನದ ಅಂಗಳ ಸೇರಿದಂತೆ ಬಯಲು ಗದ್ದೆಗಳಲ್ಲಿ ಎಲ್ಲಿ ನೋಡಿದರಲ್ಲಿ ಮದ್ಯದ ಶೀಷೆಗಳು ರಾಶಿ ರಾಶಿಯಾಗಿ ಬಿದ್ದಿರುತ್ತವೆ. ಅವುಗಳನ್ನು ಕೆಲವು ಕಿಡಿಗೇಡಿಗಳು ಒಡೆದು ಹೋಗುತ್ತಾರೆ. ಈ ಗಾಜಿನ ತುಂಡುಗಳು ಹರಿತವಾಗಿದ್ದು ಕೆಲದಿನಗಳಲ್ಲಿಯೇ ಮಣ್ಣಿನಲ್ಲಿ ಹೂತುಹೋಗಿ ಬೇಟೆಗಾಗಿ ಹೊಂಚುಹಾಕಿ ಕೂರುತ್ತವೆ. ಕಾಲಿಗೆ ಚಪ್ಪಲಿ ಧರಿಸಲೂ ಶಕ್ತರಲ್ಲದ ಅನೇಕ ಜನ ವೃದ್ಧರು, ಮಕ್ಕಳು ಇವುಗಳನ್ನು ಅಚಾನಕ್ಕಾಗಿ ತುಳಿದು ತತ್ತರಿಸಿಹೋಗುತ್ತಾರೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗಲೂ ಈ ಗಾಜಿನ ಚೂರುಗಳನ್ನು ತುಳಿದು ಗಾಯಗೊಂಡ ಉದಾಹರಣೆಗಳಿದ್ದು, ಎಷ್ಟೋ ಬಾರಿ ಜಾನುವಾರುಗಳು ಸಹ ಗಾಯಗೊಂಡು ಮೂಕರೋದನೆ ಅನುಭವಿಸುತ್ತವೆ.

ಹೀಗೆ ಗಾಯಗೊಂಡ ಬಹುತೇಕರಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಸುದೀರ್ಘವಾಗಿ ನರಳುವಂತಾಗುತ್ತದೆ. ಕೆಲವು ಗಂಭೀರ ಪ್ರಕರಣಗಳಲ್ಲಿ ಸಣ್ಣ ಶಸ್ತ್ರಚಿಕಿತ್ಸೆ ಮತ್ತು ದೀರ್ಘ ಕಾಲದ ವಿಶ್ರಾಂತಿಯೂ ಬೇಕಾಗುತ್ತದೆ. ಅದರಲ್ಲೂ ಗಾಯಗೊಂಡವರು ಮಧುಮೇಹಿಗಳಾಗಿದ್ದರಂತೂ ಅವರ ಗೋಳು ದೇವರಿಗೇ ಪ್ರೀತಿ. ಆದ್ದರಿಂದ ಅಬಕಾರಿ ಸಚಿವರು ಈ ಬಗ್ಗೆ ಗಂಭೀರವಾಗಿ ಯೋಚಿಸಿ ಶಾಶ್ವತ ಪರಿಹಾರಕ್ಕೆ ಮುಂದಾಗಬೇಕಿದೆ. ಖಾಲಿ ಶೀಷೆಗಳನ್ನು ಮದ್ಯ ಮಳಿಗೆಗಳಿಂದಲೇ ಮರುಖರೀದಿಸುವ ಇಲ್ಲವೇ ಮರುಬಳಕೆಗೆ ಬರುವಂತಹ ವಸ್ತುಗಳಿಂದ ಇಲ್ಲವೇ ಮಣ್ಣಿನ ಅಥವಾ ಪ್ಲಾಸ್ಟಿಕ್‌ನಿಂದ ಶೀಷೆಗಳನ್ನು ತಯಾರಿಸುವ ದಿಸೆಯಲ್ಲಿ ಇಲಾಖೆ ಕಾರ್ಯೋನ್ಮುಖವಾಗಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಜಲ ವಿವಾದ ಕಾಯ್ದೆಯ ಆಶಯ, ಸ್ವರೂಪ ಬದಲಾಗಬೇಕು

ಅಂತರರಾಜ್ಯ ಜಲವಿವಾದ ಕಾಯ್ದೆಯನ್ನು ವಿವಾದವನ್ನು ಇತ್ಯರ್ಥಗೊಳಿಸುವ ಕಾಯ್ದೆ ಎಂಬ ರೀತಿಯಲ್ಲಿ ಬದಲಾಯಿಸಬೇಕಾಗಿದೆ ಎಂದು ರಾಜ್ಯದ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳುತ್ತಾರೆ. ಒಂದು ಪೂರ್ಣಾವಧಿ ಜಲಸಂಪನ್ಮೂಲ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವ ಇರುವ ಬೊಮ್ಮಾಯಿ, ಕಾವೇರಿ ವ್ಯಾಜ್ಯದ ಕುರಿತು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನ ಇಲ್ಲಿದೆ:

• ವೈ. ಗ. ಜಗದೀಶ್

ಪ್ರಜಾವಾಣಿ ಸಂದರ್ಶನ

ಬಸವರಾಜ ಬೊಮ್ಮಾಯಿ

• **ಕಾವೇರಿಯ ಹೆಚ್ಚುವರಿ ನೀರನ್ನು ವೈಗೈ ಮತ್ತು ಗುಂಡಾರ್ ನದಿಗೆ ಹರಿಸುವ ಯೋಜನೆಗೆ ತಮಿಳುನಾಡು ಚಾಲನೆ ನೀಡಿದೆ. ಕರ್ನಾಟಕದ ನಿಲುವೇನು?**

ಈ ಯೋಜನೆಗೆ ಯಾವುದೇ ರೀತಿಯ ಮಾನ್ಯತೆ ಇಲ್ಲ. ಕೇಂದ್ರ ಸರ್ಕಾರ ಕೂಡ ಒಪ್ಪಿಗೆ ಕೊಟ್ಟಿಲ್ಲ. ಕಾವೇರಿ ನೀರಿನಲ್ಲಿ ಕರ್ನಾಟಕದ ನ್ಯಾಯಯುತ ಪಾಲು ಉಳಿಸಿಕೊಳ್ಳಲು ರಾಜ್ಯ ಸರ್ಕಾರ ಬದ್ಧ. ವೈಗೈ ಯೋಜನೆಗೆ ಸಂಬಂಧಿಸಿ ಈಗಾಗಲೇ ಆಕ್ಷೇಪಣೆಯನ್ನು ಕೇಂದ್ರ ಸರ್ಕಾರ, ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲು ತೀರ್ಮಾನ ಮಾಡಿದ್ದೇವೆ. ಕಾನೂನು ತಜ್ಞರ ಜತೆ ಎರಡು ಸುತ್ತಿನ ಮಾತುಕತೆ ನಡೆದಿದೆ. ಎರಡನೆಯದಾಗಿ ಮಧುರೈ ಕೋರ್ಟ್‌ನಲ್ಲಿ ತಮಿಳುನಾಡಿನ ರೈತರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದಾರೆ. ಅದರಲ್ಲಿ ಕರ್ನಾಟಕ ಸರ್ಕಾರವನ್ನು ಪ್ರತಿವಾದಿಯಾಗಿ ಪರಿಗಣಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಲಿದ್ದು, ನಮ್ಮ ವಿರೋಧವನ್ನು ಅಲ್ಲಿಯೂ ಮಂಡಿಸುತ್ತೇವೆ.

• **ಮೇಕೆದಾಟು ಯೋಜನೆಯ ಹಣೆಬರಹ ಏನು?**

90ರ ದಶಕದಲ್ಲೇ ರೂಪುಗೊಂಡ ಯೋಜನೆ ಇದಾಗಿದ್ದು, ಕರ್ನಾಟಕ ವಿದ್ಯುತ್ ನಿಗಮವು ವಿದ್ಯುತ್ ಉತ್ಪಾದನೆಗಾಗಿ ಯೋಜನೆ ರೂಪಿಸಿತ್ತು. 2012ರಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಅರಣ್ಯ ಪ್ರದೇಶ ಮುಳುಗಡೆಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಿ, ಯೋಜನೆ ಅನುಷ್ಠಾನ ಮಾಡಲು ತಯಾರಿ ನಡೆದಿತ್ತು. ಕಡಿಮೆ ಎತ್ತರದ ಹಲವು ಕಿರು ಅಣೆಕಟ್ಟೆಗಳನ್ನು ಕಟ್ಟಿ ಮುಳುಗಡೆ ಪ್ರಮಾಣ ಕಡಿಮೆ ಮಾಡಿ, ನೀರಿನ ಸಂಪೂರ್ಣ ಬಳಕೆ ನಮ್ಮ ಉದ್ದೇಶವಾಗಿತ್ತು. ನಂತರ ಬಂದ ಸರ್ಕಾರ ಯೋಜನೆ ರೂಪಿಸಿದೆ. ಈಗ ತಮಿಳುನಾಡು ಆಕ್ಷೇಪಣೆ ಸಲ್ಲಿಸಿದೆ. ಆದರೆ, ಅವರ ಆಕ್ಷೇಪಣೆಗೆ ಆಧಾರವೇ ಇಲ್ಲ. ತಮಿಳುನಾಡಿಗೆ ಎಷ್ಟು ನೀರು ಬಿಡಬೇಕೋ ಅಷ್ಟನ್ನು ಬಿಟ್ಟು, ಹೆಚ್ಚು ಮಳೆ ಬಂದ ವರ್ಷದಲ್ಲಿ ಆ ನೀರನ್ನು ಸಂಗ್ರಹಿಸಿಟ್ಟುಕೊಂಡು ತಮಿಳುನಾಡಿಗೆ ನೀರು ಬೇಕಾದಾಗ ಬಿಡುವುದು ಇದರ ಉದ್ದೇಶ. ಜತೆಗೆ ಬೆಂಗಳೂರಿಗೆ ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆಯ ಉದ್ದೇಶವೂ ಇದೆ. ಇದು ತಮಿಳುನಾಡಿಗೂ ಅನುಕೂಲವಾದ ಯೋಜನೆ. ಸದ್ಯ ವಿಷಯ ಕೋರ್ಟ್‌ನಲ್ಲಿದೆ. ಅಲ್ಲಿಯೇ ವಾದ ಮಂಡಿಸಿ ತಮಿಳುನಾಡಿಗೆ ಮನವರಿಕೆ ಮಾಡಿಕೊಡುವ ಯತ್ನ ನಡೆಸುತ್ತೇವೆ.



ಬಸವರಾಜ ಬೊಮ್ಮಾಯಿ

• **ವಿಳಂಬಕ್ಕೆ ಪರಿಹಾರ?**

ಸಮಸ್ಯೆ ಇರುವುದು ಅಂತರರಾಜ್ಯ ಜಲವಿವಾದ ಕಾಯ್ದೆಯಲ್ಲಿ. ಈ ಕಾಯ್ದೆಯು ವಿವಾದಗಳನ್ನು ಸೃಷ್ಟಿಸಲು ನೆರವಾಗಿದೆಯೇ ವಿನಃ ವಿವಾದಗಳನ್ನು ಬಗೆಹರಿಸಲು ಸಹಾಯ ಮಾಡುತ್ತಿಲ್ಲ. 2011ರಲ್ಲಿ ನಾನು ಜಲಸಂಪನ್ಮೂಲ ಸಚಿವನಾಗಿದ್ದಾಗ ಈ ಕಾಯ್ದೆಯ ಸ್ವರೂಪ ಬದಲಿಸಿ, ಅಂತರರಾಜ್ಯ ಜಲವಿವಾದ ಇತ್ಯರ್ಥ ಕಾಯ್ದೆ ಎಂದು ಬದಲಿಸಬೇಕೆಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ. ಜತೆಗೆ ಅಂತರರಾಜ್ಯ ಜಲ ವಿವಾದಗಳನ್ನು ಬಗೆಹರಿಸುವ ಪ್ರಕ್ರಿಯೆ, ನಿಯಮಗಳ ಸರಳೀಕರಣ, ತ್ವರಿತ ತೀರ್ಮಾನಕ್ಕೆ ದಾರಿ ಮಾಡುವ ಕ್ರಮ ಆಗಬೇಕಿದೆ. ಇದನ್ನು ಈಗಲೂ ಪ್ರತಿಪಾದಿಸುತ್ತೇನೆ. ಅಂತರರಾಜ್ಯ ನದಿಗಳ ನೀರಿನ ಹಂಚಿಕೆ ವಿವಾದ ಸೃಷ್ಟಿಯಾದಾಗ ಪ್ರತ್ಯೇಕ ನ್ಯಾಯಮಂಡಳಿ ರಚಿಸುವ ಪದ್ಧತಿ ಬಿಡಬೇಕು. ಒಂದು ನ್ಯಾಯ ಮಂಡಳಿ ರಚನೆಯಾದರೆ 10-12 ವರ್ಷ ಅದು ವಿವಾದಕ್ಕೆ ತಾರ್ಕಿಕ ಅಂತ್ಯ ನೀಡುವುದೇ ಇಲ್ಲ. ಅದರ ಬದಲು ಇಡೀ ದೇಶಕ್ಕೆ ಅನ್ವಯವಾಗುವ ಶಾಶ್ವತವಾದ ಜಲ ನ್ಯಾಯಮಂಡಳಿ ರಚಿಸಿ, ಯಾವುದೇ ವಿವಾದ ಬಂದರೂ ಒಂದೆರಡು ವರ್ಷದಲ್ಲಿ ಇತ್ಯರ್ಥ ಮಾಡುವ ವ್ಯವಸ್ಥೆ ರೂಪಿಸಬೇಕಾಗಿದೆ. ಹಾಗಾದಲ್ಲಿ ಮಾತ್ರ ವಿಳಂಬ ತಪ್ಪುತ್ತದೆ.

• **ಒಂದು ಕಣಿವೆಯ ನೀರನ್ನು ಮತ್ತೊಂದು ಕಣಿವೆಗೆ ತೆಗೆದುಕೊಂಡು ಹೋಗುವಂತಿಲ್ಲ ಎಂಬುದು ಎಷ್ಟು ಸರಿ?**

ಕೃಷ್ಣಾ ನದಿ ನೀರಿನಲ್ಲಿ ಆಂಧ್ರಕ್ಕೆ, ಕಾವೇರಿ ನೀರಿನಲ್ಲಿ ತಮಿಳುನಾಡು, ಕೇರಳಕ್ಕೆ ಪಾಲಿದೆ. ಒಂದು ನದಿ ಕಣಿವೆಯ ನೀರನ್ನು ಮತ್ತೊಂದು ಕಣಿವೆ ಪ್ರದೇಶಕ್ಕೆ ಹರಿಸಲು ಅವರು ಆಕ್ಷೇಪಣೆ ತೆಗೆಯುವುದು ಸ್ವಾಭಾವಿಕ. ಇಂತಹ ವಿಷಯಗಳು ಅಂತರರಾಜ್ಯ ಜಲವಿವಾದ ಕಾಯ್ದೆ ವ್ಯಾಪ್ತಿಗೆ ಒಳಪಡುತ್ತವಲ್ಲ.

• **ನಮ್ಮ ಪಾಲಿನ ಕಾವೇರಿ ನೀರಿನ ಸಮರ್ಪಕ ಬಳಕೆಗೆ ಏನು ಮಾಡಬೇಕು?**

ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಲು ದಾರಿ ಇದೆ. ಮಹಾರಾಜರ ಅಣೆಕಟ್ಟೆಯಿಂದ 94 ಸಾವಿರ ಎಕರೆಗೆ ನೀರಾವರಿ ಒದಗಿಸಲಾಗಿದೆ. ಇಲ್ಲಿ 200-300 ವರ್ಷ ಹಳೆಯದಾದ ಅಣೆಕಟ್ಟೆಯಲ್ಲಿ ಹೂಳು ತುಂಬಿ, ನಾಲೆಗಳು ಹಾಳಾಗಿದ್ದವು, ನಾನು ಜಲಸಂಪನ್ಮೂಲ ಸಚಿವನಾಗಿದ್ದಾಗ 13 ಅಣೆಕಟ್ಟುಗಳು, ನಾಲೆಗಳ ಆಧುನೀಕರಣಕ್ಕೆ ಮುಂದಾಗಿದ್ದೆ. ಆಗಿನ ಕೇಂದ್ರ ಸರ್ಕಾರ (ಎನ್‌ಡಿಎ) ಅನುಮೋದನೆ ಕೊಡಲಿಲ್ಲ. ಹಾಗಾಗಿ, ರಾಜ್ಯ ಸರ್ಕಾರದ ಅನುದಾನ ಬಳಸಿ ಯೋಜನೆ ಅನುಷ್ಠಾನ ಮಾಡಿದೆವು. ಹೇಮಾವತಿ, ವಿ.ಸಿ. ನಾಲೆ ಸೇರಿದಂತೆ ಎಲ್ಲ ಕಡೆಗಳಲ್ಲಿ ಆಧುನೀಕರಣ, ಏತ ನೀರಾವರಿ ಯೋಜನೆ ಅನುಷ್ಠಾನ, ಕೆರೆ ತುಂಬಿಸುವ ಯೋಜನೆಗಳು, ಹೂಳು ತೆಗೆಯುವ ಕೆಲಸ ಆದರೆ ನೀರಿನ ಸಂಗ್ರಹಣೆ ಮತ್ತು ಸದ್ಬಳಕೆ ಆಗಲಿದೆ. ಇದರ ಜತೆಗೆ ನೀರಾವರಿ, ಕೃಷಿ, ತೋಟಗಾರಿಕೆ, ರೇಷ್ಮೆ ಹೀಗೆ ಎಲ್ಲ ಇಲಾಖೆಗಳನ್ನೂ ಒಳಗೊಂಡು ಕಾವೇರಿ ಕೃಷಿ ಉತ್ಪಾದನಾ ಯೋಜನೆ ರೂಪಿಸಿದರೆ ಕೃಷಿ ಉತ್ಪನ್ನ, ನೀರಿನ ಸದ್ಬಳಕೆ ಹೆಚ್ಚಿ, ರೈತರ ತಲಾದಾಯ ಕೂಡ ಏರಿಕೆಯಾಗಲಿದೆ.

• **ಡಬ್ಬಲ್ ಎಂಜಿನ್ ಸರ್ಕಾರದಿಂದ (ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ) ಕರ್ನಾಟಕಕ್ಕೆ ಹೆಚ್ಚಿನ ಅನುಕೂಲ ಆಗಲಿದೆ ಎಂದು ನಿಮ್ಮ ಪಕ್ಷದ ನಾಯಕರು ಹೇಳಿದ್ದರು. ಎಲ್ಲಿ ಕಾಣಿಸುತ್ತಲೇ ಇಲ್ಲ?**

ಗೋವಾದಲ್ಲಿಯೂ ನಮ್ಮ ಪಕ್ಷದ ಸರ್ಕಾರ ಇದ್ದರೂ ನ್ಯಾಯಮಂಡಳಿಯ ತೀರ್ಪಿನ ಅನ್ವಯ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಮಹದಾಯಿಯಲ್ಲಿ ನ್ಯಾಯ ಕೊಡಿಸುವ ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಈಗಾಗಲೇ ತೆರೆದಿದ್ದಾರೆ. ಸ್ವಾತಂತ್ರ್ಯ ಬಂದ ಇಷ್ಟು ಸುದೀರ್ಘ ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿದ್ದು, ₹16 ಸಾವಿರ ಕೋಟಿಗೂ ಹೆಚ್ಚು ಅನುದಾನ ಸಿಗಲಿದೆ. ಇದು ಹೆಗ್ಗಳಿಕೆಯಲ್ಲವೇ?

ವೈಗೈ ಯೋಜನೆಗೆ ಬೇರೆ ಸರ್ಕಾರಗಳಿದ್ದರೆ ಅನುಮೋದನೆ ಕೊಟ್ಟು ಬಿಡುತ್ತಿದ್ದವು. ಕರ್ನಾಟಕದ ಹಿತ ಕಾಯಲು ಮುಂದಾದ ಕೇಂದ್ರದ ಬಿಜೆಪಿ ಸರ್ಕಾರ, ಅಭಿಪ್ರಾಯ ಸಲ್ಲಿಸಿ ಎಂದು ಸೂಚಿಸಿದೆ. ಇದು ನಮಗೆ ಅನುಕೂಲ ಮಾಡಿಕೊಟ್ಟಂತಲ್ಲವೇ? ಇನ್ನು ಯುಪಿಎ ಸರ್ಕಾರದ ಅವಧಿಯಲ್ಲಿ ಕೃಷ್ಣ, ಗೋದಾವರಿ, ಕಾವೇರಿ ಮತ್ತು ಮಹಾನದಿ ಜೋಡಣೆ ಯೋಜನೆಯಲ್ಲಿ ನಮಗೆ ಅನ್ಯಾಯವಾಗಿತ್ತು. ಎನ್‌ಡಿಎ ಸರ್ಕಾರ ಬಂದ ಮೇಲೆ ರಾಷ್ಟ್ರೀಯ ಜಲ ಆಯೋಗವೂ ಈ ಯೋಜನೆಗೆ ತಡೆಯಾಜ್ಞೆ ನೀಡಿದೆ. ಈಗ ಮತ್ತೆ ಹೊಸದಾಗಿ ಸಮಗ್ರ ಯೋಜನಾ ವರದಿ ತಯಾರಾಗಲಿದ್ದು, ಈ ಯೋಜನೆಯಡಿ ನ್ಯಾಯ ಸಮ್ಮತ ಪಾಲು ಪಡೆಯಲು ಕರ್ನಾಟಕಕ್ಕೆ ಕೇಂದ್ರ ಅನುಕೂಲ ಮಾಡಿಕೊಟ್ಟಿದೆ.

• **ನಿಮ್ಮ ಶಿಗ್ಗಾಂವಿ ಕ್ಷೇತ್ರದಲ್ಲಿ ಹನಿ ನೀರಾವರಿ ಯೋಜನೆಯ ಯಶಸ್ವಿ ಅನುಷ್ಠಾನ ಮಾಡಿದ್ದೀರಿ. ಇತರ ಕಡೆ ಯಾಕೆ ಆಗಿಲ್ಲ?**

ನೀರಿನ ಕೊರತೆ ಇರುವ ಕಡೆ ಹನಿ ನೀರಾವರಿ ಯೋಜನೆ ಅಗತ್ಯ. ಯೋಜನೆ ಅನುಷ್ಠಾನ ಜತೆಗೆ ನಿರ್ವಹಣೆಯೂ ಅಷ್ಟೇ ಮುಖ್ಯ. ಹುನಗುಂದ ತಾಲ್ಲೂಕಿನಲ್ಲಿ 67 ಸಾವಿರ ಎಕರೆಗೆ ನೀರುಣಿಸುವ ಹನಿ ನೀರಾವರಿ ಯೋಜನೆ ಅನುಷ್ಠಾನ ಮಾಡಲಾಗಿತ್ತು. ನಿರ್ವಹಣೆ ಕೊರತೆಯಿಂದ ಯೋಜನೆ ವಿಫಲವಾಯಿತು. ಶಿಗ್ಗಾಂವಿಯಲ್ಲಾದಂತೆ ಅಲ್ಲಿ ಆಗಲಿಲ್ಲ. ನಿರ್ವಹಣೆ ಸಮಸ್ಯೆ ಪರಿಹರಿಸಲು ಯೋಜನೆಯ ರೂಪುರೇಷೆ ಬದಲಿಸುವ ಚಿಂತನೆ ಮಾಡುತ್ತಿದ್ದೇವೆ. ರೈತನ ಹೊಲದವರೆಗೆ ನೀರು ಪೂರೈಸುವುದು, ನಿರ್ವಹಣೆಯನ್ನು ರೈತರಿಗೆ ಬಿಡುವುದು ಈ ಯೋಜನೆಯ ಸಾರಾಂಶ. ಆಗ ಯಾವ ರೈತನಿಗೆ ಇಚ್ಛಾಶಕ್ತಿ, ಆಸಕ್ತಿ ಇದೆಯೋ ಅವನು ಹನಿಯೋ, ತುಂತುರು ನೀರಾವರಿಯನ್ನೋ ಅಳವಡಿಸಿಕೊಳ್ಳುತ್ತಾನೆ.

ಪ್ರತಿಕ್ರಿಯೆಗಳು

ಆಕ್ಷೇಪಣೆ ಸಲ್ಲಿಸಲು ತಡ

ರಾಜ್ಯ ಹಾಗೂ ಕೇಂದ್ರದಲ್ಲೂ ಒಂದೇ ಪಕ್ಷ ಆಡಳಿತ ನಡೆಸುತ್ತಿದ್ದರೂ ಮೇಕೆದಾಟು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗದಿರುವುದು ದುರದೃಷ್ಟಕರ. ಕೇಂದ್ರ ಸರ್ಕಾರ ಈ ವಿಷಯದಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ನೀತಿ ಅನುಸರಿಸುತ್ತಿದೆ. ರಾಜ್ಯ ಸರ್ಕಾರ ತಮಿಳುನಾಡಿನ ನದಿ ಜೋಡಣೆ ಯೋಜನೆಗೆ ಆಕ್ಷೇಪಣೆ ಎತ್ತುವಲ್ಲಿ ತಡ ಮಾಡಿದೆ.

ಕೀಳಾಘಟ್ಟ ನಂಜುಂಡಯ್ಯ, ಮದ್ದೂರು

ಮುಂದೆ ಗಂಭೀರ ಪರಿಣಾಮ...

ತಮಿಳುನಾಡಿನ ರೈತರು ಎರಡು ಇಳುವರಿ ಪಡೆದು ಸಮೃದ್ಧರಾಗುತ್ತಿದ್ದಾರೆ. ವ್ಯವಸಾಯಕ್ಕೆ ಬಿಟ್ಟುಬಿಡಿ; ಇಲ್ಲಿ ಜನ, ಜಾನುವಾರುಗಳಿಗೆ ಕುಡಿಯುವ ನೀರಿಗೆ ತತ್ವಾರ ಉಂಟಾಗಿದೆ. ರಾಜ್ಯ ಸರ್ಕಾರ ಜಾಣ ಮೌನ ವಹಿಸುತ್ತಿದೆ. ಕಾವೇರಿ ವಿಚಾರದಲ್ಲಿ ತಮಿಳುನಾಡು ಒಮ್ಮತವಿದೆ. ನಮ್ಮಲ್ಲಿ ಬದ್ಧತೆಯೇ ಇಲ್ಲ. ಈ ಯೋಜನೆಯಿಂದ ಮುಂದೆ ಗಂಭೀರ ಪರಿಣಾಮ ಉಂಟಾಗಲಿದೆ

ಅರ್ಜುನಹಳ್ಳಿ ರಾಮಪ್ರಸಾದ್, ರೈತ, ಕೆ.ಆರ್.ನಗರ

ಅಧಿಕಾರಸ್ಥರು ಬದ್ಧತೆ ತೋರಬೇಕು

ಕುಣಿಗಲ್ ದೊಡ್ಡಕೆರೆಗೆ ಹೇಮಾವತಿ ನೀರು ತುಂಬಿಸಿ ನಂತರ ಪೈಪ್ ಲೈನ್ ಮೂಲಕ ಹುತ್ರಿದುರ್ಗ ಹೋಬಳಿಯ 18 ಕೆರೆ ಮತ್ತು ಮಾಗಡಿ ತಾಲ್ಲೂಕಿನ 72 ಕೆರೆಗಳಿಗೆ ನೀರು ಹರಿಸುವ ಶ್ರೀರಂಗ ಏತನೀರಾವರಿ ಯೋಜನೆ ಪ್ರಾರಂಭವಾಗಿ 5 ವರ್ಷಗಳು ಕಳೆದಿವೆ. ಈಗ ಹಣವಿಲ್ಲದೆ ಪೈಪ್‌ಲೈನ್ ಕಾಮಗಾರಿ ಸ್ಥಗಿತಗೊಂಡಿದೆ. ಮತ್ತೆ ಕೆಲಸ ಆರಂಭಿಸಿದರೆ ನೀರು ಬಳಸಿಕೊಳ್ಳಬಹುದು. ಮೇಕೆದಾಟು ಯೋಜನೆ ವಿಚಾರದಲ್ಲೂ ಇದೇ ರೀತಿ ಆಗುತ್ತಿದೆ. ಅಣೆಕಟ್ಟೆ ಕಟ್ಟುತ್ತೇವೆ ಎಂದು ಹೇಳಿಕೊಳ್ಳುವುದರಿಂದ ಪ್ರಯೋಜನವಾಗುವುದಿಲ್ಲ. ನಿರ್ಮಿಸುವ ಬದ್ಧತೆ ತೋರಬೇಕು. ಕೇಂದ್ರದ ಮೇಲೆ ಒತ್ತಡ ತಂದು ಅನುಮತಿ ಪಡೆದು ಕೆಲಸ ಆರಂಭಿಸಬೇಕು.

ಹಾಲುವಾಗಿಲು ಸ್ವಾಮಿ, ಕುಣಿಗಲ್ ತಾಲ್ಲೂಕು

ಕುಡಿಯುವ ನೀರಿಗೆ ಆದ್ಯತೆ ಸಿಗಲಿ

ಬೆಂಗಳೂರು ಸೇರಿದಂತೆ ಹಳೆ ಮೈಸೂರು ಭಾಗದ 6–7 ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಮೇಕೆದಾಟು ಅಣೆಕಟ್ಟು ನಿರ್ಮಾಣವನ್ನು ಆದ್ಯತೆ ಮೇರೆಗೆ ಸರ್ಕಾರ ಕೈಗೆತ್ತಿಕೊಳ್ಳಬೇಕು. ಇದಕ್ಕೆ ಕೇಂದ್ರದ ವಿವಿಧ ಇಲಾಖೆಗಳ ಅನುಮತಿಗೆ ಇರುವ ತೊಡಕುಗಳನ್ನು ನಿವಾರಿಸಬೇಕು. ಈ ಯೋಜನೆ ಸಾಕಾರಗೊಂಡಲ್ಲಿ ಬೆಂಗಳೂರಿನ ಜಲಕ್ಷಾಮ ತಕ್ಕಮಟ್ಟಿಗೆ ಬಗೆಹರಿಯಲಿದೆ.

ಸ್ವಾಭಾವಿಕ ಜಲಮೂಲಗಳನ್ನು ಬಳಸಿಕೊಂಡು ಹಳ್ಳಿಗಳ ಪ್ರತಿ ಮನೆಗೆ ಕುಡಿಯುವ ನೀರು ಪೂರೈಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಕೆಆರ್‌ಎಸ್ ಜಲಾಶಯದಿಂದ ಹೊರ ಹೋಗುವ ನೀರನ್ನು ಗುರುತ್ವಾಕರ್ಷಣೆ ಮೂಲಕ ತಿರುಗಿಸಿ ಕೆರೆ–ಕಟ್ಟೆ ತುಂಬಿಸಲು ಸಾಧ್ಯ ಇದೆ. ಈ ಬಗ್ಗೆ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕು

ಸಿ. ಪುಟ್ಟಸ್ವಾಮಿ, ಸಂಚಾಲಕ, ಶಾಶ್ವತ ನೀರಾವರಿ ಹೋರಾಟ ಸಮಿತಿ

ಚೀನಾದ ವಿಸ್ತರಣಾ ವಾದಕ್ಕೆ ಸೆಡ್ಡು
ಇನ್ನೊಂದು ಸಮರ ಕವಾಯತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿಮ್‌ಸ್ಟೆಕ್ ರಾಷ್ಟ್ರಗಳ ಜತೆ ಜೈಶಂಕರ್ ಸಂವಾದ ಇಂದು
- ಬಂಗಾಳಕೊಲ್ಲಿಯಲ್ಲಿ ಐದು ರಾಷ್ಟ್ರಗಳ ಜಂಟಿ ಸಮರಾಭ್ಯಾಸ

ನವದೆಹಲಿ: ಬಂಗಾಳ ಕೊಲ್ಲಿಯಲ್ಲಿ ಮುಂದಿನ ವಾರದಿಂದ ಆರಂಭವಾಗಲಿರುವ ಜಪಾನ್, ಆಸ್ಟ್ರೇಲಿಯಾ, ಅಮೆರಿಕ ಹಾಗೂ ಫ್ರಾನ್ಸ್ ಒಳಗೊಂಡ 'ಕ್ವಾಡ್' ಕೂಟದ ಸದಸ್ಯ ರಾಷ್ಟ್ರಗಳ ಸಮರಾಭ್ಯಾಸದಲ್ಲಿ ಭಾರತವು ಭಾಗವಹಿಸಲಿದೆ.

ಇದರ ಜತೆಯಲ್ಲೇ ಚೀನಾದ ಆಕ್ರಮಣಶೀಲತೆಯನ್ನು ಎದುರಿಸಲು, ನೆರೆ ರಾಷ್ಟ್ರಗಳ ಜತೆಗಿನ ಸಂಬಂಧ ವೃದ್ಧಿಯ ದಿಕ್ಕಿನತ್ತಲೂ ಗಮನಹರಿಸಲಿದೆ. ಬಂಗಾಳ ಕೊಲ್ಲಿಯ ಸುತ್ತಲಿನ ಬಾಂಗ್ಲಾದೇಶ, ಭೂತಾನ, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಹಾಗೂ ಥಾಯ್ಲೆಂಡ್ ಒಳಗೊಂಡ 'ಬಿಮ್‌ಸ್ಟೆಕ್' ರಾಷ್ಟ್ರಗಳ ವಿದೇಶಾಂಗ ಸಚಿವರ ಜತೆಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಗುರುವಾರ ವರ್ಚುವಲ್ ಮಾಧ್ಯಮದಲ್ಲಿ ಮಾತುಕತೆ ನಡೆಸುವ ನಿರೀಕ್ಷೆ ಇದೆ.

ಕ್ವಾಡ್‌ನಿಂದ ಆಚೆಗೂ, ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ರಾಷ್ಟ್ರಗಳ ಜತೆಗಿನ ತನ್ನ ಬಾಂಧವ್ಯವನ್ನು ವೃದ್ಧಿಸಲು ಭಾರತ ಉತ್ಸುಕವಾಗಿದೆ. ಫ್ರಾನ್ಸ್‌ನ ನೌಕಾಪಡೆಯ ನೇತೃತ್ವದಲ್ಲಿ ಏ.5ರಿಂದ 7ರವರೆಗೆ ಆಯೋಜಿಸಲಾಗಿರುವ 'ಲಾ ಪೆರೋಸ್' ನೌಕಾ ಕವಾಯತಿನಲ್ಲಿ ಭಾರತವು ಮೊದಲಬಾರಿಗೆ ಪಾಲ್ಗೊಳ್ಳಲಿದೆ. ಜಪಾನ್, ಆಸ್ಟ್ರೇಲಿಯಾ ಹಾಗೂ ಅಮೆರಿಕದ ನೌಕಾಪಡೆಗಳೂ ಇಲ್ಲಿಗೆ ತಮ್ಮ ಯುದ್ಧನೌಕೆಗಳನ್ನು ಕಳುಹಿಸುತ್ತಿವೆ. 'ಭಾರತ ನೌಕಾಪಡೆಯ ಹೊಸ ತಲೆಮಾರು ಹಾಗೂ ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ರಾಷ್ಟ್ರಗಳ ಪ್ರತಿನಿಧಿಗಳೇ ತರಬೇತಿಯ ಕೇಂದ್ರಬಿಂದುಗಳಾಗಿರುವುದರಲ್ಲಿ ಯಾವುದೇ ಅಚ್ಚರಿಯಿಲ್ಲ' ಎಂದು ಫ್ರಾನ್ಸ್‌ನ ನೌಕಾಪಡೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪೂರ್ವ ಹಿಂದೂ ಮಹಾಸಾಗರ ಹಾಗೂ ಪೆಸಿಫಿಕ್ ಪ್ರದೇಶದಲ್ಲಿ ಫ್ರಾನ್ಸ್‌ಗೆ ವಿಶೇಷವಾದ ಭೌಗೋಳಿಕ ಹಾಗೂ ರಾಜಕೀಯ ಹಿತಾಸಕ್ತಿಗಳಿವೆ. ಈ ಪ್ರದೇಶದಲ್ಲಿ ಫ್ರಾನ್ಸ್ ದೊಡ್ಡ ಪ್ರಮಾಣದಲ್ಲಿ ತನ್ನ ಸೈನಿಕರನ್ನು ನಿಯೋಜಿಸಿದೆ.

ಹಿಂದೂ ಮಹಾಸಾಗರದ ರ‍್ಯುನಿಯನ್ ಹಾಗೂ ಮಯೊಟೆ ದ್ವೀಪಗಳ ಮೇಲೆ ಹಾಗೂ ಪೆಸಿಫಿಕ್ ಸಾಗರದ ನ್ಯೂ ಕೆಲಡೋನಿಯಾ ಹಾಗೂ ಫ್ರೆಂಚ್ ಪೊಲಿನೇಷ್ಯಾಗಳಲ್ಲಿ ಫ್ರಾನ್ಸ್‌ನ ನಿಯಂತ್ರಣವಿದೆ. ಫ್ರಾನ್ಸ್‌ನ ವಿಶೇಷ ಆರ್ಥಿಕ ವಲಯದ ಶೇ 60ರಷ್ಟು ಭಾಗವು ಪೆಸಿಫಿಕ್ ಪ್ರದೇಶದಲ್ಲಿ ಹಾಗೂ ಸುಮಾರು ಶೇ 20ರಷ್ಟು ಹಿಂದೂ ಮಹಾಸಾಗರ ಪ್ರದೇಶದಲ್ಲಿದೆ. ಆಫ್ರಿಕಾದಲ್ಲಿರುವ ಜಿಬೂಟಿಯಲ್ಲಿ ಫ್ರಾನ್ಸ್‌ನ ಸೇನಾ ನೆಲೆ ಇದೆ.

ಕ್ವಾಡ್ ಕೂಟವನ್ನು ವಿಸ್ತರಿಸುವ ಅಮೆರಿಕದ ಪ್ರಸ್ತಾವವನ್ನು ಸ್ವೀಕರಿಸಲು ಮತ್ತು ಚೀನಾದ ವಿರುದ್ಧವಾದ ಯಾವುದೇ ಹೆಜ್ಜೆ ಇಡಲು ಫ್ರಾನ್ಸ್ ಆರಂಭದಲ್ಲಿ ನಿರಾಕರಿಸಿತ್ತು. ಆದರೆ, ಸ್ವಲ್ಪ ತಡವಾಗಿ ಈ ಪ್ರದೇಶದಲ್ಲಿ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮುಂದಾಗಿದೆ. ಪರಿಣಾಮವಾಗಿ ಈ ಭಾಗದಲ್ಲಿ ಜಂಟಿ ಸಮರಾಭ್ಯಾಸಕ್ಕೆ ಮುಂದಾಗಿದೆ.

ಗುರುವಾರದವರೆಗೂ ಕೊಚ್ಚಿಯ ಬಂದರಿನಲ್ಲಿ ತಂಗಲಿರುವ ಫ್ರಾನ್ಸ್‌ನ ಎರಡು ಯುದ್ಧನೌಕೆಗಳು ಆ ನಂತರ ಅಲ್ಲಿಂದ ಬಂಗಾಳಕೊಲ್ಲಿಯತ್ತ ಪ್ರಯಾಣ ನಡೆಸಲಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಬಾಲಿವುಡ್' ನಟ ಅಜಯ್ ದೇವಗನ್ ಅವರು ಥಳಿತಕ್ಕೊಳಗಾಗಿದ್ದಾರೆ. ನವದೆಹಲಿಯ ವಿಮಾನ ನಿಲ್ದಾಣದ ಸಮೀಪದ ಪ್ರದೇಶವೊಂದರಲ್ಲಿ ಅವರನ್ನು ರೈತರು ಥಳಿಸಿದ್ದಾರೆ. ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಮೂರು ಹೊಸ ಕೃಷಿ ಕಾಯ್ದೆಗಳನ್ನು ಅಜಯ್ ದೇವಗನ್ ಅವರು ಬೆಂಬಲಿಸಿದ್ದರಿಂದ ಅವರನ್ನು ಥಳಿಸಲಾಗಿದೆ' ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. ಅವರನ್ನು ಥಳಿಸಲಾಗಿದೆ ಎನ್ನಲಾದ ವಿಡಿಯೊ ಕೂಡ ವೈರಲ್ ಆಗಿದೆ. ಹಲವರು ಟ್ವಿಟರ್ ಹಾಗೂ ಫೇಸ್‌ಬುಕ್‌ನಲ್ಲಿ ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ನಟ ಅಜಯ್ ದೇವಗನ್ ಅವರನ್ನು ಥಳಿಸಿದ್ದಾರೆ ಎನ್ನಲಾದ ವಿಡಿಯೊ ಹಾಗೂ ಟ್ವೀಟ್ ವೈರಲ್ ಆಗಿವೆ

'ಲಾಜಿಕಲ್' ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ವಿಡಿಯೊ ಅಸಲಿಯೇ ಎಂಬುದನ್ನು ಪರಾಮರ್ಶೆಗೆ ಒಳಪಡಿಸಿದೆ. ವೈರಲ್ ಆಗಿರುವ ವಿಡಿಯೊದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದ ದೃಶ್ಯ ದಾಖಲಾಗಿದೆ. ದೆಹಲಿಯ ಏರೋಸಿಟಿಯಲ್ಲಿ ನಡೆದ ಈ ಘಟನೆಯ ದೃಶ್ಯಾವಳಿಗಳನ್ನು 'ಎನ್‌ಡಿ ಟಿ.ವಿ' ಮಾರ್ಚ್ 28ರಂದು ಪ್ರಕಟಿಸಿತ್ತು. ಅಜಯ್ ದೇವಗನ್ ಅವರ ಮ್ಯಾನೇಜರ್ ಅವರನ್ನು ಸಂಪರ್ಕಿಸಿದಾಗ, ಹಲ್ಲೆ ನಡೆದ ವಿಷಯವನ್ನು ಅವರು ಅಲ್ಲಗಳೆದಿದ್ದಾರೆ. ಸ್ವತಃ ಅಜಯ್ ದೇವಗನ್ ಅವರೇ ಟ್ವಿಟರ್‌ನಲ್ಲಿ ಇದನ್ನು ನಿರಾಕರಿಸಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ನವತೆ ಯಮನ ಕಾಣಿಕೆ

ಜವನ ನಿಂದಿಪುದೇಕೆ ಸರ್ವಘಾತಕನೆಂದು ?|
ಭುವಿಗೆ ವೃದ್ಧ ಸಮೃದ್ಧಿಯವನು ಸಮ್ಮನಿರಲ್ ||
ನವ ಜನಕ್ಕೆಡೆಯೆತ್ತಲಾರುಮೆಡೆಬಿಡದೆ ನಿಲೆ ?|
ನವತೆಯವನಿಂ ಜಗಕೆ – ಮಂಕುತಿಮ್ಮ || 402 ||

ಪದ-ಅರ್ಥ: ಜವನ = ಯುಮರಾಜನ, ಭುವಿಗೆ = ಭೂಮಿಗೆ, ನವಜನಕ್ಕೆಡೆಯೆತ್ತಲಾರುಮೆಡೆಬಿಡದೆ = ನವಜನಕ್ಕೆ + ಎಡೆ + ಎತ್ತ + ಯಾರೂ + ಎಡೆಬಿಡದೆ(ಜಗವನ್ನು ಬಿಡದೆ), ನವತೆಯವನಿಂ = ನವತೆ(ಹೊಸತನ) + ಅವನಿಂ(ಅವನಿಂದ)

ವಾಚ್ಯಾರ್ಥ: ಎಲ್ಲವನ್ನು ಘಾತಿಸುವವನೆಂದು ಯಮನನ್ನು ಹಳಿಯುವುದೇಕೆ? ಅವನು ಕರ್ತವ್ಯವನ್ನು ಮಾಡದೆ ಸುಮ್ಮನಿದ್ದರೆ ಭೂಮಿಯಲ್ಲಿ ವೃದ್ಧರದೇ ಸಮೃದ್ಧಿಯಾಗುತ್ತಿತ್ತು. ಯಾರೂ ತಮ್ಮ ತಮ್ಮ ಸ್ಥಾನಗಳನ್ನು ಖಾಲಿ ಮಾಡದಿದ್ದರೆ ಹೊಸಬರಿಗೆ ಜಾಗವೆಲ್ಲಿ? ಅವನಿಂದಲೇ ಜಗತ್ತಿಗೆ ಹೊಸತನ ಬರುತ್ತದೆ.

ವಿವರಣೆ: ಎಲ್ಲರ ಪ್ರಾಣಹರಣ ಮಾಡುತ್ತಾನೆಂದು ಯಮನನ್ನು ಎಲ್ಲರೂ ಟೀಕಿಸುತ್ತಾರೆ. ಅವನು ಮಹಾಕ್ರೂರಿ, ಘಾತಕನೆಂದು ಜರೆಯುತ್ತಾರೆ. ನಾವು ಚಲನಚಿತ್ರಗಳಲ್ಲಿ, ದೂರದರ್ಶನದಲ್ಲಿ ಯಮನನ್ನು ತೋರಿಸುವುದು ಭಯಂಕರವಾಗಿಯೇ. ಕಪ್ಪು, ಧಡೂತಿ ಆಸಾಮಿ, ಕಪ್ಪು ಕೋಣವನ್ನೇರಿಕೊಂಡು. ಖಳನಾಯಕರಂತೆ ಕಣ್ಣು ಕೆಂಪುಮಾಡಿಕೊಂಡು, ಅಬ್ಬರಿಸುತ್ತ, ಕೈಯಲ್ಲಿಯ ಹಗ್ಗವನ್ನು ಗರಗರನೆ ತಿರುಗಿಸುತ್ತ, ಬರುವುದೇ ನಮಗೆ ತೋರುವ ದೃಶ್ಯ. ನಾನು ಅವನನ್ನು ಇದುವರೆಗೂ ಕಂಡಿಲ್ಲ. ಆದರೆ ಅವನು ಹಾಗಿರುವುದು ಸಾಧ್ಯವಿಲ್ಲವೆಂಬುದು ನನ್ನ ನಂಬಿಕೆ. ಯಾಕೆಂದರೆ ಕಠೋಪನಿಷತ್ತಿನಲ್ಲಿ ಬರುವ ಯಮಧರ್ಮ ವಿನಯಮೂರ್ತಿ, ಕರ್ತವ್ಯನಿಷ್ಠ. ತನ್ನ ಧರ್ಮವನ್ನು ಬಿಗಿಯಾಗಿ ನಿರ್ವಹಿಸುವುದರಿಂದ ಆತ ಯಮಧರ್ಮ.

ಯಮಧರ್ಮ ತನ್ನ ಕೆಲಸವನ್ನು ನಿಭಾಯಿಸದೆ ಸುಮ್ಮನಿದ್ದು ಬಿಟ್ಟರೆ ಏನಾದೀತು? ಪ್ರಪಂಚದಲ್ಲಿ ಯಾರೂ ಸಾಯದೇ ಉಳಿದರೆ ಆಗುವ ಅನಾಹುತವೇ ಆಗುತ್ತದೆ. ಹೊಸ ಜೀವಗಳು ಬರುವುದು ತಪ್ಪುವುದಿಲ್ಲ, ಹಳೆಯ ಜೀವಗಳು ಇಲ್ಲಿಂದ ಹೊರಡುವುದಿಲ್ಲ. ಬದುಕು ಅಸಹನೀಯವಾಗುತ್ತದೆ. ಆಗ ಆಗುವುದನ್ನೇ ಕಗ್ಗ ಸುಂದರವಾಗಿ 'ವೃದ್ಧ ಸಮೃದ್ಧಿ' ಎಂದು ಕರೆಯುತ್ತದೆ. ಹಾಗೆಂದರೆ ಪ್ರಪಂಚದಲ್ಲಿ ವೃದ್ಧರ ಸಂಖ್ಯೆಯ ಸಮೃದ್ಧಿಯಾಗುತ್ತದೆ. ತರುಣರು ಮತ್ತು ಸಣ್ಣ ವಯಸ್ಸಿನವರು ಸಾಯುತ್ತಾರಲ್ಲವೇ? ಹೌದು. ಆದರೆ ಜಗತ್ತನ್ನು ತೊರೆದು ಹೋಗುವ ವೃದ್ಧರ ಸಂಖ್ಯೆಗೆ ಹೋಲಿಸಿದರೆ ಅವರ ಸಂಖ್ಯೆ ಕಡಿಮೆ. ಹೀಗಾಗಿ ಇಡೀ ಪ್ರಪಂಚ ವೃದ್ಧರಿಂದ ತುಂಬಿ ಹೋಗಬಹುದು. ಜಗತ್ತು ವೃದ್ಧರಿಂದಲೇ ಭರ್ತಿಯಾಗಿ ಹೋದರೆ ಹೊಸ ಪೀಳಿಗೆಗೆ ಸ್ಥಳವೆಲ್ಲಿ ದೊರೆತೀತು?

ಈ ದೃಷ್ಟಿಯಿಂದ ನೋಡಿದಾಗ ಯಮರಾಜ ದೊಡ್ಡ ಉಪಕಾರಿ ಎನ್ನಿಸುತ್ತದೆ. ಜಗತ್ತಿನಲ್ಲಿ ಹಳೆಯದಾದ ಜೀವಗಳನ್ನು ತೆಗೆದುಕೊಂಡು ಹೊಸಜೀವಗಳಿಗೆ ಸ್ಥಳ ಮಾಡಿಕೊಟ್ಟು ಅದು ಸದಾಕಾಲ ನವನವೀನವಾಗಿರುವಂತೆ ನೋಡಿಕೊಳ್ಳುತ್ತಾನೆ. ನವೀನತೆಯ ಸೃಷ್ಟಿ ಯಮರಾಜನ ಕೊಡುಗೆ.

ದಿನ ಭವಿಷ್ಯ
ಗುರುವಾರ 1 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಚತುರ್ಥಿ ಗಂ. 23-34 (ಹ. 3-49) ಗುರುವಾರ ನಿತ್ಯ ನಕ್ಷತ್ರ ವಿಶಾಖಾ ಗಂ. 13-44 (ಹ. 11-52) ವಜ್ರ ನಾಮ ಯೋಗ ಗಂ 11-22 ಬಾಲವ ಕರಣ ಗಂ. 23-34 ವಿಷ ಗಂ. 23-3 ಅಮೃತ ಗಂ. 45-24 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-19 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 1, 9

ಮೇಷ: ಮಹಿಳೆಯರಿಗೆ ವಿಶೇಷ ದಿನ. ಹಣಕಾಸಿನ ವಿಷಯಗಳಲ್ಲಿ ತೊಂದರೆ ಉಂಟಾಗದು. ಷೇರು ಮಾರುಕಟ್ಟೆಯಲ್ಲಿ ವಿಚಾರ ವಿಮರ್ಶೆ ಮಾಡಿ ಹಣ ತೊಡಗಿಸುವುದು ಉತ್ತಮ. ಅತಿಯಾಸೆಯಿಂದಾಗಿ ಮೋಸ ಹೋಗುವ ಸಾಧ್ಯತೆ.

ವೃಷಭ: ವಾಹನಗಳ ಬಿಡಿ ಭಾಗಗಳ ಮಾರಾಟಗಾರರು, ತಯಾರಕರು, ದುರಸ್ತಿ ಮಾಡುವವರಿಗೆ ಹೆಚ್ಚಿನ ಆದಾಯ ತರುವ ದಿನ. ಮನೆಯಲ್ಲಿ ನಡೆಯಬೇಕಾದ ಮಂಗಳಕಾರ್ಯಗಳಿಗೆ ತಯಾರಿ ನಡೆಸಲಿದ್ದೀರಿ. ಹಬ್ಬದ ವಾತಾವರಣ.

ಮಿಥುನ: ಸಹೋದ್ಯೋಗಿಗಳೊಡನೆ ಹೊಂದಾಣಿಕೆ ಅಗತ್ಯ. ಕೆಲಸದ ಒತ್ತಡ ಕಡಿಮೆಯಾಗಿ ನೆಮ್ಮದಿ. ಉದ್ಯೋಗದಲ್ಲಿ ಲಾಭವನ್ನು ಕಾಣಲಿದ್ದೀರಿ. ಮನೆಯವರೊಂದಿಗೆ ಸಂಭ್ರಮದಿಂದ ದಿನ ಕಳೆಯುವಿರಿ.

ಕರ್ಕಾಟಕ: ನಿಮ್ಮ ಕಾರ್ಯತಂತ್ರವನ್ನು ತಡಮಾಡದೇ ರೂಪಿಸಲಿದ್ದೀರಿ. ಈ ದಿನ ನೀವು ವಿಚಾರ ಮಾಡಿ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳು ಸರಿಯಾಗಿದ್ದು ಶುಭಫಲಗಳನ್ನೇ ತರಲಿವೆ. ಹಿರಿಯರ ಆರೋಗ್ಯಕ್ಕಾಗಿ ವೆಚ್ಚ ಭರಿಸಬೇಕಾದೀತು.

ಸಿಂಹ: ಸ್ನೇಹ ಸಂಬಂಧಗಳು ಗಟ್ಟಿಯಾಗಿ ಹೊಸ ಚೈತನ್ಯ ಮೂಡುವುದರಿಂದ ಸಹಾಯ, ಸಹಕಾರಗಳು ನಿರೀಕ್ಷೆಗೂ ಮೀರಿ ದೊರಕಲಿದೆ. ಪ್ರಿಯರಿಂದ ಉಡುಗೊರೆ ಲಭ್ಯವಾಗುವ ಸಾಧ್ಯತೆ. ಕಲಾವಿದರಿಗೆ ಆದಾಯದಲ್ಲಿ ಹೆಚ್ಚಳ.

ಕನ್ಯಾ: ಕಾರ್ಯಕ್ಷೇತ್ರದಲ್ಲಿನ ಕೆಲಸಗಳನ್ನು ಶೀಘ್ರವಾಗಿ ಮುಗಿಸಲಿದ್ದೀರಿ. ಮನೆಯಲ್ಲಿ ನಡೆಯಬೇಕಾದ ಮದುವೆ ಮುಂಜಿ ಮುಂತಾದ ಮಂಗಳ ಕಾರ್ಯಗಳ ಜವಾಬ್ದಾರಿ ನಿಭಾಯಿಸುವ ಧಾವಂತ. ಬಂಧುಗಳ ಆಗಮನ.

ತುಲಾ: ಚಿನ್ನಾಭರಣ ಖರೀದಿ ಸಾಧ್ಯತೆ. ಆದಾಯದಲ್ಲಿ ಹೆಚ್ಚಳ. ತಂದೆಯ ಆರೋಗ್ಯದಲ್ಲಿ ಸುಧಾರಣೆ. ಮಕ್ಕಳ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ದೂರ ಪ್ರಯಾಣದ ಸಿದ್ಧತೆ ನಡೆಸಲಿದ್ದೀರಿ.

ವೃಶ್ಚಿಕ: ನಿಮ್ಮ ಪ್ರತಿಭೆಯ ತೀಕ್ಷ್ಣತೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ತಾಂತ್ರಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಬಡ್ತಿ ನಿರೀಕ್ಷಿಸಬಹುದು. ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಆಲಸ್ಯ. ಸಮಾಧಾನದ ನಡೆ ಅವಶ್ಯಕ.

ಧನು: ಮೇಲಧಿಕಾರಿಗಳು ನಿಮ್ಮ ನಿರ್ಧಾರಕ್ಕೆ ನಿಮ್ಮೊಂದಿಗಿದ್ದಾರೆಂಬ ಭರವಸೆಯಿಂದ ಕೆಲಸ ನಿರ್ವಹಿಸಲಿದ್ದೀರಿ. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಾಲೋಚನೆ ಮಾಡುವುದು ಉತ್ತಮ.

ಮಕರ: ಹೊಸ ಅವಕಾಶಗಳ ಬಾಗಿಲು ತೆರೆಯುವುದರಿಂದ ನಿಯೋಜಿತ ಕೆಲಸಗಳನ್ನು ಆಸಕ್ತಿಯಿಂದ ಒಪ್ಪಿಕೊಳ್ಳುವಿರಿ. ಆತ್ಮವಿಶ್ವಾಸ ಮೂಡಿಬರಲಿದೆ. ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಹೊಸ ಕೆಲಸ ಸಿಗಲಿದೆ.

ಕುಂಭ: ವ್ಯವಹಾರದಲ್ಲಿ ಬದಲಾವಣೆಗಳನ್ನು ನಿರೀಕ್ಷಿಸಲಾಗದು. ಈ ದಿನದ ಕಷ್ಟದ ಕ್ಷಣಗಳು ನಿಮ್ಮ ನಾಳಿನ ಬದುಕಿನ ಸುಖಕ್ಕೆ ನಾಂದಿಯಾಗಲಿದೆ. ತಾಳ್ಮೆ ಹಾಗೂ ಸಹಿಷ್ಣುತೆಯೇ ಈ ದಿನದ ಶುಭ ಫಲಕ್ಕೆ ಹೇತುವಾಗಲಿದೆ.

ಮೀನ: ಪೀಠೋಪಕರಣಗಳು ಮತ್ತು ಅಲಂಕಾರಿಕ ವಸ್ತುಗಳ ಖರೀದಿ ಮಾಡುವ ಸಾಧ್ಯತೆ. ಆಯುಧಗಳ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳಿತು. ಮಕ್ಕಳ ಆರೋಗ್ಯದ ಕಡೆ ಗಮನ ಅಗತ್ಯ.

ನಿಮ್ಮ ಜನ್ಮದಿನ 1-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಮಹಿಳೆಯರಿಗೆ ಗೌರವ ಪ್ರತಿಷ್ಠೆಗಳು ಹೆಚ್ಚಲಿವೆ. ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿದ್ವಾಂಸರಿಗೆ ಮನ್ನಣೆ, ಗೌರವಗಳು ಹೆಚ್ಚುವುದು. ಆತ್ಮೀಯರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು.

ಪದಬಂಧ 4554
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಸಿರನ್ನು ಹೊರಗೆ ಬಿಡುವಿಕೆ (3)
3.ಎಣ್ಣೆ ತೆಗೆದು ಮಾರಿ ಜೀವಿಸುವವನು (3)
5.ಅಭಿಪ್ರಾಯ ಭೇದವಿದು (5)
7.ಇದಂತೂ ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗನ್ನಿ (3)
11.ತಿಗರಿಯ ಬಳಿಯಿರುವ ಪತಿವ್ರತೆ (3)
13.ಇದು ಮುಖ್ಯವಾದುದು (3)
15.ಕುಯುಕ್ತಿಯಿಂದ ಎಗರಿಸಿದ ಕಪ್ಪೆ ಚಿಪ್ಪು! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಹುಲ್ಲು ಮಾರುವವನ ಬೊಬ್ಬೆ! (3)
18.ಕರು ತಿನ್ನುತ್ತಿರುವ ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ
2.ಸಭೆಯಲ್ಲಿ ಕುಳಿತಿರುವವನು (3)
3.ಗೀತೆಗಳನ್ನು ರಾಗಬದ್ಧವಾಗಿ ಹಾಡುವವ (3)
6.ಕಾರಿನ ಹತ್ತಿರ ಭಿಕ್ಷುಕನಿದ್ದಾನೆ (3)
9.ಈತ ವಾಚಕ (3)
10.ಗೆಳೆಯನ ಜೊತೆ ಬಂದಿರುವ ಸ್ನೇಹಿತೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಮ್ಮ ರಾಷ್ಟ್ರ ಪಕ್ಷಿ (3)
15.ಶುಕದ ಹತ್ತಿರವಿರುವ ನಾಯಿ (3)



4553ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭಕುತಿ 6.ಬೇಜವಾಬ್ದಾರಿ 7.ವಲ್ಲರಿ 10.ಪ್ರಾಯೋಪವೇಶ 15.ಸಂಕರ 16.ಭವಬಂಧನ 17.ರವಾನೆ
ಮೇಲಿಂದ ಕೆಳಕ್ಕೆ: 1.ಭರವಸೆ 2.ತಿಗರಿ 3.ಸೋಂಬೇರಿ 4.ಸವಾಲು 5.ಪರಿಷೇಕ 8.ಪ್ರಯೋಗ 9.ಆವೇಶ 11.ಪ್ರಲೋಭನ 12.ಅರಮನೆ 13.ಸಂಬಂಧ 14.ಅನರ್ಘ 15.ಸಂಸಾರ

ಸುಡೊಕು 4940

				9			1	8
1			8			5		2
		2		6				
		7			9	6		
4	2			3				9
6			7		8		2	
2		5	4		7	9		6
								5
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4939 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಹೆಚ್ಚಾಗಲಿದೆ ದಿನದ ತಾಪಮಾನ: ಐಎಂಡಿ

ನವದೆಹಲಿ (ಪಿಟಿಐ): ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ ಉತ್ತರ ಮತ್ತು ಪೂರ್ವ ಭಾರತದಲ್ಲಿ ದಿನದ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ದಕ್ಷಿಣ ಭಾರತದ ಹೆಚ್ಚಿನ ಭಾಗಗಳು, ಪೂರ್ವ ಭಾರತದ ಕೆಲವು ಭಾಗಗಳು, ಈಶಾನ್ಯ ಮತ್ತು ಉತ್ತರ ಭಾರತದ ಗಡಿಯಲ್ಲಿ ಸಾಮಾನ್ಯವಾಗಿರುವ ಗರಿಷ್ಠ ತಾಪಮಾನಕ್ಕಿಂತ ಕಡಿಮೆ ಇರಲಿದೆ ಎಂದು ಐಎಂಡಿ ಹೇಳಿದೆ.

ಶ್ರದ್ಧಾಂಜಲಿ

ಶ್ರೀಮತಿ ಎಸ್. ನಾಗರತ್ನ

ದಿನಾಂಕ 20-03-2021 ರಂದು ಶನಿವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 04-04-2021 ರಂದು ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸೌತ್‌ಎಂಡ್‌ಸರ್ಕಲ್, ಜಯನಗರ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಜಿನಮಂದಿರದಲ್ಲಿ ಭಗವಾನ್ 1008 ಶ್ರೀ ಆದಿನಾಥಸ್ವಾಮಿಗೆ 108 ಕಳಸ ಪೂಜೆ ಹಾಗೂ ಸಂಘ ಸಂತರ್ಪಣೆ ಏರ್ಪಡಿಸಿದೆ. ಸದ್ಧರ್ಮ ಬಂಧುಗಳು, ಹಿತೈಷಿಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದು:ಖತಪ್ತರು: ಕೆ.ಎಂ. ಸನತ್ ಕುಮಾರ್, ಕೆ.ಎಸ್.ಮಯೂರ್ ಜೈನ್, ಕೆ.ಎಸ್. ಮಾನಸ, ಅಭಿಷೇಕ್ ವಸಂತ್.
Ph: 9483483232

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಮಕ್ಕಳಿಗೂ ಕೋವಿಡ್‌ನಿಂದ ರಕ್ಷಣೆ: ಫೈಜರ್ ಭರವಸೆ

ವಾಷಿಂಗ್ಟನ್ (ಎಪಿ): ತಾನು ಅಭಿವೃದ್ಧಿಪಡಿಸಿರುವ ಕೋವಿಡ್-19 ಲಸಿಕೆ ಪಡೆಯುವ 12 ವರ್ಷ ವಯೋಮಾನದ ಮಕ್ಕಳಲ್ಲಿಯೂ ರೋಗ ನಿರೋಧಕ ಶಕ್ತಿ ಬೆಳೆದು, ಸೋಂಕಿನಿಂದ ಪರಿಣಾಮಕಾರಿ ರಕ್ಷಣೆ ಸಿಗಲಿದೆ ಎಂದು ಫೈಜರ್ ಕಂಪನಿ ಬುಧವಾರ ಹೇಳಿದೆ.

ಶಾಲೆಗಳನ್ನು ಪುನಃ ಆರಂಭಿಸಲು ಸಿದ್ಧತೆ ನಡೆದಿರುವ ಈ ಸಮಯದಲ್ಲಿ, ಫೈಜರ್ ಕಂಪನಿಯ ಹೇಳಿಕೆಯಿಂದ 12 ವರ್ಷ ವಯೋಮಾನದವರಿಗೂ ಕೋವಿಡ್ ಲಸಿಕೆ ನೀಡಲು ಸಾಧ್ಯವಾಗಲಿದೆ. ಫೈಜರ್ ಕಂಪನಿಯು 16 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರಿಗೆ ಲಸಿಕೆ ನೀಡಲು ಈಗಾಗಲೇ ಅನುಮೋದನೆ ನೀಡಿದೆ.

12ರಿಂದ 15 ವರ್ಷದ ವಯೋಮಾನದವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಲಸಿಕೆಯ ನಿಗದಿತ ಡೋಸ್‌ಗಳನ್ನು ನೀಡಲಾಗಿದ್ದ ಈ ಗುಂಪಿನ ಅಭ್ಯರ್ಥಿಗಳಲ್ಲಿ ಕೋವಿಡ್-19 ಕಂಡು ಬಂದಿರಲಿಲ್ಲ ಎಂದು ಕಂಪನಿ ಹೇಳಿದೆ.

ಪ್ರಸ್ತುತ ವಿಶ್ವದ ವಿವಿಧೆಡೆ ಲಭ್ಯವಿರುವ ಲಸಿಕೆಗಳನ್ನು ವಯಸ್ಕರಿಗೆ ಮಾತ್ರ ನೀಡಲಾಗುತ್ತಿದೆ. ಅದರಲ್ಲೂ, ಕೊರೊನಾ ಸೋಂಕಿಗೆ ಒಳಗಾಗುವ ಸಾಧ್ಯತೆ ಹೆಚ್ಚಿರುವ ವ್ಯಕ್ತಿಗಳಿಗೆ ಆದ್ಯತೆ ಮೇಲೆ ನೀಡಲಾಗುತ್ತಿದೆ.

‘ಕೋವ್ಯಾಕ್ಸಿನ್: ಉತ್ಪಾದನಾ ಮಾನದಂಡ ಅನುಸರಿಸಿಲ್ಲ’

ಹೈದರಾಬಾದ್: ‘ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವಿಡ್-19 ಲಸಿಕೆ ‘ಕೋವ್ಯಾಕ್ಸಿನ್’ನ ಉತ್ಪಾದನಾ ಘಟಕಗಳಲ್ಲಿ ಅಗತ್ಯ ಮಾನದಂಡಗಳನ್ನು ಅನುಸರಿಸಲಾಗಿಲ್ಲ’ ಎಂದು ಬ್ರೆಜಿಲ್‌ನ ರಾಷ್ಟ್ರೀಯ ಆರೋಗ್ಯ ಕಣ್ಗಾವಲು ಸಂಸ್ಥೆ (ಅನ್ವಿಸಾ) ಹೇಳಿದೆ.

ಅಲ್ಲದೇ, ಇದೇ ಕಾರಣ ನೀಡಿರುವ ‘ಅನ್ವಿಸಾ’ ಕೋವ್ಯಾಕ್ಸಿನ್ ಲಸಿಕೆಯ ಆಮದಿಗೆ ಅನುಮತಿ ನೀಡಲು ನಿರಾಕರಿಸಿದೆ. ಬ್ರೆಜಿಲ್‌ನ ಈ ನಡೆಗೆ ಪ್ರತಿಕ್ರಿಯಿಸಿರುವ ಭಾರತ್ ಬಯೋಟೆಕ್, ‘ಲಸಿಕೆ ಕುರಿತು ವ್ಯಕ್ತವಾಗಿರುವ ದೂರುಗಳ ನಿವಾರಣೆಗೆ ಕ್ರಮ ಕೈಗೊಂಡಿದ್ದೇವೆ. ಬ್ರೆಜಿಲ್ ಸರ್ಕಾರ ಲಸಿಕೆಯ 2 ಕೋಟಿ ಡೋಸ್ ಪೂರೈಕೆಗೆ ಈ ಬೆಳವಣಿಗೆಯಿಂದ ತೊಂದರೆಯಾಗದು’ ಎಂದು ಹೇಳಿದೆ.

ಕೋವಿಶೀಲ್ಡ್: ಬಳಕೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಆಕ್ಸ್‌ಫರ್ಡ್-ಆಸ್ಟ್ರಜೆನಕಾ ಕಂಪನಿ ಉತ್ಪಾದಿಸಿರುವ ‘ಕೋವಿಡಶೀಲ್ಡ್’ ಕೋವಿಡ್- 19 ಲಸಿಕೆಯ ಶೇಖರಣೆ, ಸಾಗಣೆ ಹಾಗೂ ಬಳಕೆಯ ಅವಧಿಯನ್ನು(ಶೆಲ್ಫ್ ಲೈಫ್) ಈಗಿನ ಆರು ತಿಂಗಳಿನಿಂದ ಒಂಬತ್ತು ತಿಂಗಳಿಗೆ ವಿಸ್ತರಿಸುವುದಕ್ಕೆ ಭಾರತೀಯ ಔಷಧ ಮಹಾನಿಯಂತ್ರಕರು (ಡಿಜಿಸಿಐ) ಅನುಮತಿ ನೀಡಿದ್ದಾರೆ.

ಕಳ್ಳ ಸಾಗಣೆ: ₹ 1.15 ಕೋಟಿ ಮೌಲ್ಯದ ಚಿನ್ನ ವಶ

ಹೈದರಾಬಾದ್: ದುಬೈನಿಂದ ವಿಮಾನದ ಮೂಲಕ ಹೈದರಾಬಾದ್‌ಗೆ ಬಂದ ಐವರು ಪ್ರಯಾಣಿಕರಿಂದ ₹ 1.15 ಕೋಟಿ ಮೌಲ್ಯದ 2.5 ಕೆ.ಜಿ. ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಈ ಪ್ರಯಾಣಿಕರು ಮಿಕ್ಸರ್ ಗ್ರೈಂಡರ್‌ನ ಮೋಟಾರ್‌ಗಳಲ್ಲಿ ಚಿನ್ನವನ್ನು ಕಳ್ಳಸಾಗಣೆ ಮಾಡುತ್ತಿದ್ದರು. ಪ್ರಯಾಣಿಕರನ್ನು ವಶಕ್ಕೆ ಪಡೆಯಲಾಗಿದ್ದು, ಅವರನ್ನು ಹೆಚ್ಚಿನ ವಿಚಾರಣೆಗೊಳಪಡಿಸಲಾಗುವುದು. ಚಿನ್ನದ ಕಳ್ಳಸಾಗಣೆಗೆ ಸಂಬಂಧಿಸಿದಂತೆ ಒಟ್ಟು ಐದು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮತ್ತೊಂದೆಡೆ ದುಬೈಗೆ ತೆರಳುತ್ತಿದ್ದ ಪ್ರಯಾಣಿಕರೊಬ್ಬರ ವಿರುದ್ಧ ವಿದೇಶಿ ವಿನಿಮಯ ಕಳ್ಳಸಾಗಣೆ ಪ್ರಕರಣವನ್ನು ಕಸ್ಟಮ್ಸ್ ಅಧಿಕಾರಿಗಳು ದಾಖಲಿಸಿದ್ದಾರೆ.

ರಾಜ್ಯದಲ್ಲಿ ಹೊಸದಾಗಿ 4,225 ಪ್ರಕರಣ, 26 ಮಂದಿ ಸಾವು ದೃಢ

10 ಲಕ್ಷದತ್ತ ರಾಜ್ಯ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 4,225 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಕಳೆದ ಐದು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿದ್ದು, ಒಂದು ವರ್ಷ ದಿಂದೀಚೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 10 ಲಕ್ಷದ ಗಡಿಯತ್ತ (9.97 ಲಕ್ಷ) ದಾಪುಗಾಲು ಇರಿಸಿದೆ.

ರಾಜ್ಯದಲ್ಲಿ ಕಳೆದ ವರ್ಷ ಮಾ.8ರಂದು ಮೊದಲ ಪ್ರಕರಣ ವರದಿಯಾಗಿತ್ತು. ಬಳಿಕ ಪ್ರಕರಣಗಳ ಸಂಖ್ಯೆ 1 ಲಕ್ಷದ ಗಡಿ ತಲುಪಲು 108 ದಿನಗಳು ಹಿಡಿದಿತ್ತು. ಜೂನ್ ಬಳಿಕ ಪ್ರಕರಣಗಳ ಸಂಖ್ಯೆ ಏರಿಕೆ ಕಂಡ ಪರಿಣಾಮ ಅಲ್ಪಾವಧಿಯಲ್ಲಿಯೇ ಲಕ್ಷಾಂತರ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿದ್ದವು. ನವೆಂಬರ ಎರಡನೇ ವಾರದ ಬಳಿಕ ಇಳಿಕೆ ಕಂಡು, ಡಿ.12ರಂದು 9 ಲಕ್ಷದ ಗಡಿ ದಾಟಿತ್ತು. ಈಗ ಮತ್ತೆ ಏರುಗತಿ ಪಡೆದುಕೊಂಡಿದ್ದು, ಮಾರ್ಚ್‌ನಲ್ಲಿ 45,753 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ 3 ಸಾವಿರದ ಗಡಿ (2,928) ಸಮೀಪಿಸಿದೆ. ಈವರೆಗೆ ಸೋಂಕಿತರಾದವರ ಸಂಖ್ಯೆ 4.34 ಲಕ್ಷ ದಾಟಿದೆ.

ಬೀದರ್ (159), ಮೈಸೂರು (142), ತುಮಕೂರು (138), ಕಲಬುರ್ಗಿ (142) ಜಿಲ್ಲೆಯಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ ತಲುಪಿದೆ. ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಕೂಡ ಹೆಚ್ಚಳವಾಗುತ್ತಿದ್ದು, ಸೋಂಕಿತರಲ್ಲಿ ಮತ್ತೆ 26 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಬೆಂಗಳೂರಿನಲ್ಲಿ 18 ಮಂದಿ, ತುಮಕೂರು ಹಾಗೂ ಕಲಬುರ್ಗಿಯಲ್ಲಿ ತಲಾ ಇಬ್ಬರು, ಉತ್ತರ ಕನ್ನಡ, ಉಡುಪಿ, ಕೋಲಾರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈ ತಿಂಗಳು 236 ಮರಣ ಪ್ರಕರಣಗಳು ವರದಿಯಾಗಿವೆ.

ಈವರೆಗೆ ಸಾವಿಗೀಡಾದವರ ಸಂಖ್ಯೆ 12,567ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 28,248ಕ್ಕೆ ಏರಿಕೆಯಾಗಿದೆ. ಅವರಲ್ಲಿ 266 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.

ಕೊರೊನಾ ಸೋಂಕಿತರಲ್ಲಿ 1,492 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.56 ಲಕ್ಷ ದಾಟಿದೆ.

ಹಬ್ಬದ ಸಂಭ್ರಮ

ಪಶ್ಚಿಮ ಬಂಗಾಳದ ನಂದಿಗ್ರಾಮ ಬಳಿಯ ಖೇಜುರಿ ಎಂಬಲ್ಲಿ ‘ಅಷ್ಟಮ ಪ್ರಹಾರ’ ಹಬ್ಬದ ಪ್ರಯುಕ್ತ ಶ್ರದ್ಧಾ-ಭಕ್ತಿಯಿಂದ ದೇವತಾ ಮೂರ್ತಿಗಳ ಮೆರವಣಿಗೆ ಬುಧವಾರ ನಡೆಯಿತು. ಕೋವಿಡ್-19 ಪ್ರಸರಣದ ಹಿನ್ನೆಲೆಯಲ್ಲಿ ವಿಧಿಸಿರುವ ನಿರ್ಬಂಧಗಳನ್ನು ಲೆಕ್ಕಿಸದೇ ಭಕ್ತರು ಈ ಧಾರ್ಮಿಕ ವಿಧಿಯಲ್ಲಿ ಪಾಲ್ಗೊಂಡಿದ್ದರು

–ಪಿಟಿಐ ಚಿತ್ರ

‘ಎಲ್ಲದರಲ್ಲೂ ನಮ್ಮನ್ನೇ ಯಾಕೆ ಸಿಕ್ಕಿಸಿ ಹಾಕ್ತೀರಾ?’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಎಲ್ಲದರಲ್ಲೂ ನಮ್ಮನ್ನೇ ಯಾಕೆ ಸಿಕ್ಕಿಸಿ ಹಾಕ್ತೀರಾ?’

ಕೆ.ಸುಧಾಕರ್

ಇಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಪ್ರಶ್ನಿಸಿದ್ದು ಹೀಗೆ.

ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮುಖ್ಯಮಂತ್ರಿ ಆದೇಶಿಸಿದ್ದಾರೆ. ಆದರೆ, ಸಚಿವ ಕೋಟ ಶ್ರೀನಿವಾಸ ಪೂಜಾರಿ , ‘ಈಗಾಗಲೇ ನಿಗದಿಯಾಗಿದ್ದ ಕಾರ್ಯಕ್ರಮಗಳನ್ನು ನಡೆಸಬಹುದು’ ಎಂದು ಹೇಳಿದ್ದಾರೆ ಎಂಬ ಪತ್ರಕರ್ತರ ಪ್ರಶ್ನೆಗೆ ಸಚಿವ ಸುಧಾಕರ್ ಮೇಲಿನ ಉತ್ತರ ನೀಡಿ ಮುಗುಳ್ನಕ್ಕರು.

‘ಕೋವಿಡ್ ನಿಯಮಾವಳಿ ಕುರಿತು ಮುಖ್ಯಮಂತ್ರಿಗಳ ಆದೇಶವೇ ಅಂತಿಮ. ಅದನ್ನು ಎಲ್ಲರೂ ಪಾಲಿಸಬೇಕು’ ಎಂದರು.

45 ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಲಸಿಕೆ

ಒಂದನೇ ಪುಟದಿಂದ...

ಈಗ ಫಲಾನುಭವಿಗಳ ಸಂಖ್ಯೆ ಹೆಚ್ಚಿದ ಕಾರಣ ರಾಜ್ಯದಲ್ಲಿರುವ ಆರೋಗ್ಯ ಉಪ ಕೇಂದ್ರಗಳನ್ನು ಕೂಡ ಬಳಸಿಕೊಳ್ಳಲು ಇಲಾಖೆ ನಿರ್ಧರಿಸಿದೆ. ಪ್ರತಿ ಕೇಂದ್ರದಲ್ಲಿ ಕನಿಷ್ಠ 50ರಿಂದ 100 ಮಂದಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ. ಪ್ರತಿನಿತ್ಯ 3 ಲಕ್ಷದಿಂದ 5 ಲಕ್ಷ ಮಂದಿ ಲಸಿಕೆ ಪಡೆಯಲಿದ್ದಾರೆ ಎಂದು ಇಲಾಖೆ ಅಂದಾಜಿಸಿದೆ.

1.66 ಕೋಟಿ ಮಂದಿ: ರಾಜ್ಯದಲ್ಲಿ 45 ವರ್ಷ ಮೇಲ್ಪಟ್ಟವರು 1.66 ಕೋಟಿ ಜನರಿದ್ದಾರೆ. ಸದ್ಯ 13.5 ಲಕ್ಷ ಡೋಸ್ ‘ಕೋವಿಶೀಲ್ಡ್’ ಹಾಗೂ 1.5 ಲಕ್ಷ ಡೋಸ್ ‘ಕೋವ್ಯಾಕ್ಸಿನ್’ ಲಸಿಕೆ ಲಭ್ಯವಿದೆ. ಈವರೆಗೆ 39 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. 5.62 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಇವರಲ್ಲಿ 3.42 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 18.95 ಲಕ್ಷ ಮಂದಿ, 45 ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 5.98 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ಲಸಿಕೆ ಪಡೆಯುವುದು ಹೇಗೆ?

- ಆನ್‌ಲೈನ್ ಹಾಗೂ ಆಫ್‌ಲೈನ್ ನೋಂದಣಿಗೆ ಇದೆ ಅವಕಾಶ.
- ‘ಕೋವಿನ್’ ಪೋರ್ಟಲ್, ಆ್ಯಪ್ ಮೂಲಕ ಅಥವಾ ಲಸಿಕೆ ಕೇಂದ್ರದಲ್ಲಿ ನೋಂದಾಯಿಸಿಕೊಳ್ಳಬಹುದು.

- ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ, ಪ್ಯಾನ್ ಕಾರ್ಡ್, ವಾಹನ ಚಾಲನಾ ಪರವಾನಗಿ ಸೇರಿದಂತೆ ಸರ್ಕಾರದ ಮಾನ್ಯತೆ ಪಡೆದ ಛಾಯಾಚಿತ್ರ ಇರುವ ಯಾವುದಾದರೂ ಒಂದು ಗುರುತಿನ ಚೀಟಿ ಬೇಕು.
- ಕೋವಿಡೇತರ ಕಾಯಿಲೆಗಳಿದ್ದಲ್ಲಿ ವೈದ್ಯರ ಪ್ರಮಾಣ ಪತ್ರ ಜತೆಗಿರಬೇಕು.
- ಲಸಿಕೆ ನೀಡಿದ ಬಳಿಕ ಅರ್ಧ ಗಂಟೆ ಅಲ್ಲಿಯೇ ಇರಿಸಿ ನಿಗಾ ವ್ಯವಸ್ಥೆಗೆ ಒಳಪಡಬೇಕು.
- 28ನೇ ದಿನದ ಬಳಿಕ ಎರಡನೇ ಡೋಸ್ ಲಸಿಕೆ ಪಡೆದುಕೊಳ್ಳಬೇಕು.

ಆನ್‌ಲೈನ್ ನೋಂದಣಿ ಹೇಗೆ?

- ‘ಕೋವಿನ್’ (cowin.gov.in) ಪೋರ್ಟಲ್ ಅಥವಾ ಆ್ಯಪ್‌ನಲ್ಲಿ ಲಾಗಿನ್ ಆಗಬೇಕು.
- ಮೊಬೈಲ್ ಸಂಖ್ಯೆ ನಮೂದಿಸಿ, ಖಾತೆ ಸೃಷ್ಟಿಸಲು ಸ್ವೀಕೃತ ಒಟಿಪಿ ನಮೂದಿಸಬೇಕು.
- ಹೆಸರು, ವಯಸ್ಸು ಸೇರಿದಂತೆ ವಿವಿಧ ವಿವರ ನಮೂದಿಸಿ, ಯಾವುದಾದರೂ ಒಂದು ದಾಖಲಾತಿಯನ್ನು ಅಪ್‌ಲೋಡ್ ಮಾಡಬೇಕು.
- ಅನಾರೋಗ್ಯ ಸಮಸ್ಯೆ ಇದ್ದಲ್ಲಿ ವೈದ್ಯರ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು.
- ಲಸಿಕೆ ಪಡೆಯುವ ಕೇಂದ್ರ ಮತ್ತು ದಿನಾಂಕ ಆಯ್ಕೆ ಮಾಡಿಕೊಳ್ಳಬೇಕು.

ಎಲ್‌ಇಟಿ ಉಗ್ರನಿಗೆ 10 ವರ್ಷ ಜೈಲು

ನವದೆಹಲಿ (ಪಿಟಿಐ): ಪಾಕಿಸ್ತಾನದಿಂದ ಭಾರತದೊಳಕ್ಕೆ ನುಸುಳಿ ಬಂದು ದೆಹಲಿ ಸೇರಿದಂತೆ ಭಾರತದ ಹಲವೆಡೆ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸಿದ್ದ ಪ್ರಕರಣದಡಿ ಎನ್‌ಐಎ ವಿಶೇಷ ನ್ಯಾಯಾಲಯವು ಎಲ್‌ಇಟಿ ಉಗ್ರನೊಬ್ಬನಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಪಾಕಿಸ್ತಾನದ ಲಷ್ಕರ್ ಎ ತಯಬಾ ಸಂಘಟನೆಯ (ಎಲ್‌ಇಟಿ) ಉಗ್ರ ಬಹದ್ದೂರ್ ಅಲಿ ವಿರುದ್ಧದ ಆರೋಪ ಸಾಬೀತಾಗಿದೆ. ಪಟಿಯಾಲ ಹೌಸ್ ಕೋರ್ಟ್‌ನ ವಿಶೇಷ ನ್ಯಾಯಾಧೀಶರು ಆತನಿಗೆ 10 ವರ್ಷದ ಜೈಲು ಶಿಕ್ಷೆ ವಿಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ‘ಅಲಿಯನ್ನು ಕುಪ್ವಾರಾದಲ್ಲಿ ಬಂಧಿಸಲಾಗಿತ್ತು. 2017ರ ಜನವರಿಯಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿತ್ತು’ ಎಂದು ಅಧಿಕಾರಿ ಹೇಳಿದರು.

ಸಂಕ್ಷಿಪ್ತ ಸುದ್ದಿ

₹ 10,900 ಕೋಟಿ ಪಿಎಲ್‌ಐಗೆ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದ ಆಹಾರ ಸಂಸ್ಕರಣಾ ಉದ್ಯಮ ವಲಯಕ್ಕೆ ಸಂಬಂಧಿಸಿ ₹ 10,900 ಕೋಟಿ ಮೊತ್ತದ ‘ಉತ್ಪಾದನಾ ಆಧಾರಿತ ಉತ್ತೇಜನಾ ಯೋಜನೆ’ಗೆ (ಪಿಎಲ್‌ಐ) ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಈ ಯೋಜನೆಗೆ ಅನುಮೋದನೆ ನೀಡಿದೆ. ಈ ಯೋಜನೆಯಿಂದ 2.5 ಲಕ್ಷ ಉದ್ಯೋಗಗಳ ಸೃಷ್ಟಿಯಾಗಲಿದ್ದು, ರಫ್ತು ಉದ್ಯಮದ ಬೆಳವಣಿಗೆಗೆ ನೆರವಾಗಲಿದೆ. ದೇಶದ ಗ್ರಾಹಕರಿಗೆ ಮೌಲ್ಯವರ್ಧಿತ ಉತ್ಪನ್ನಗಳು ಸಹ ಸಿಗಲಿವೆ ಎಂದು ಆಹಾರ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಪಿಎಲ್‌ಐಗೆ ಅನುಮೋದನೆ ನೀಡುವ ಮೂಲಕ ದೇಶದ ರೈತ ಸಮುದಾಯಕ್ಕೆ ಗೌರವ ಸಲ್ಲಿಸಿದಂತಾಗಿದೆ’ ಎಂದರು.

ಕೋವಿಡ್: ತಿರುಮಲ ಭಕ್ತರಿಗೆ ಮತ್ತೆ ನಿರ್ಬಂಧ

ಹೈದರಾಬಾದ್: ಕೋವಿಡ್ ಎರಡನೇ ಅಲೆ ಶುರುವಾಗುತ್ತಿದ್ದಂತೆ ತಿರುಮಲ ತಿರುಪತಿ ದೇವಸ್ಥಾನದಲ್ಲಿ ಭಕ್ತರ ಪ್ರವೇಶಕ್ಕೆ ನಿರ್ಬಂಧಗಳನ್ನು ವಿಧಿಸಲಾಗಿದೆ.

‘ಸರ್ವದರ್ಶನ’ದ ದೈನಂದಿನ ಟೋಕನ್‌ಗಳ ವಿತರಣೆಯನ್ನು 22 ಸಾವಿರದಿಂದ 15 ಸಾವಿರಕ್ಕೆ ಇಳಿಸಲಾಗುತ್ತಿದೆ. ಪರಿಸ್ಥಿತಿಗೆ ಅನುಗುಣವಾಗಿ ಆನ್‌ಲೈನ್ ವಿಶೇಷ ದರ್ಶನ ಟಿಕೆಟ್‌ಗಳನ್ನೂ (₹ 300) ಕಡಿತಗೊಳಿಸಲಾಗುವುದು ಎಂದು ಟಿಟಿಡಿಯ ನಿರ್ವಹಣಾ ಸಮಿತಿಯು ಪ್ರಕಟಿಸಿದೆ.

ಇಶ್ರತ್ ಎನ್‌ಕೌಂಟರ್: ಮೂವರು ಪೊಲೀಸ್ ಅಧಿಕಾರಿಗಳು ನಿರಾಳ

ಅಹಮದಾಬಾದ್ (ಪಿಟಿಐ): 2004ರ ಇಶ್ರತ್ ಜಹಾನ್ ನಕಲಿ ಎನ್‌ಕೌಂಟರ್ ಪ್ರಕರಣದಿಂದ ಪೊಲೀಸ್ ಅಧಿಕಾರಿಗಳಾದ ಜಿ.ಎಲ್ ಸಿಂಘಾಲ್, ತರುಣ್ ಬರೋಟ್ ಮತ್ತು ಅನಾಜು ಚೌಧರಿ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯವು ಬುಧವಾರ ಕೈಬಿಟ್ಟಿದೆ.

ವಿಶೇಷ ಸಿಬಿಐ ನ್ಯಾಯಾಧೀಶ ವಿ.ಆರ್ ರಾವಲ್ ಅವರು ಈ ಮೂವರು ಅಧಿಕಾರಿಗಳನ್ನು ಪ್ರಕರಣದಿಂದ ಕೈಬಿಡುವ ಅರ್ಜಿಗೆ ಸಮ್ಮತಿ ಸೂಚಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ ಹೇಳಿಕೆ

ಮೇ ತಿಂಗಳಲ್ಲಿ ಸಂಸತ್‌ವರೆಗೆ ರೈತರ ಪಾದಯಾತ್ರೆ

ನವದೆಹಲಿ (ಪಿಟಿಐ): ಹೊಸ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು, ಮುಂದಿನ ಎರಡು ತಿಂಗಳವರೆಗಿನ ತಮ್ಮ ಹೋರಾಟದ ಯೋಜನೆಗಳನ್ನು ಪ್ರಕಟಿಸಿದ್ದಾರೆ. ಮೇ ತಿಂಗಳಿನಲ್ಲಿ ಸಂಸತ್‌ವರೆಗೆ ಪಾದಯಾತ್ರೆ ನಡೆಸಲು ತಿರ್ಮಾನಿಸಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಬುಧವಾರ ತಿಳಿಸಿದೆ.

‘ಸಂಯುಕ್ತ ಕಿಸಾನ್ ಮೋರ್ಚಾ ಜೊತೆಗೆ ಮಂಗಳವಾರ ನಡೆದ ಸಭೆಯಲ್ಲಿ ಸಂಸತ್‌ವರೆಗೆ ಪಾದಯಾತ್ರೆ ನಡೆಸುವ ನಿರ್ಧಾರವನ್ನು ರೈತರು ಪ್ರಕಟಿಸಿದರು. ಆದರೆ, ಪಾದಯಾತ್ರೆ ದಿನಾಂಕವನ್ನು ಇನ್ನೂ ನಿರ್ಧರಿಸಿಲ್ಲ. ಪಾದಯಾತ್ರೆಯಲ್ಲಿ ರೈತರು, ಮಹಿಳೆಯರು, ನಿರುದ್ಯೋಗಿಗಳು, ಪ್ರತಿಭಟನೆ ಬೆಂಬಲಿಸುತ್ತಿರುವ ಕಾರ್ಮಿಕರು ಸಹ ಭಾಗವಹಿಸಲಿದ್ದಾರೆ’ ಎಂದು ರೈತ ಮುಖಂಡ ಗುರ್ನಾಮ್ ಸಿಂಗ್ ಚಾದುನಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪಾದಯಾತ್ರೆಯು ಶಾಂತಿಯುತವಾಗಿ ನಡೆಯಲಿದೆ. ಜನವರಿ 26 ರಂದು ನಡೆದ ಕಹಿ ಘಟನೆ ಮರುಕಳಿಸುವುದಿಲ್ಲ. ಈ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುವುದು. ಇಂಥ ಘಟನೆ ಪುನರಾವರ್ತನೆಯಾಗದಂತೆ ತಡೆಯುವುದಕ್ಕಾಗಿಯೇ ಸಮಿತಿ ರಚಿಸಲಾಗುವುದು’ ಎಂದು ಅವರು ತಿಳಿಸಿದರು.

‘ಏಪ್ರಿಲ್ 10 ರಂದು ಕುಂಡ್ಲಿ--ಮನೇಸರ್-ಪಾಲ್ವಾಲ್ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು 24 ಗಂಟೆಗಳ ಕಾಲ ಬಂದ್ ಮಾಡುತ್ತೇವೆ. ಅಂದು ಬೆಳಿಗ್ಗೆ 11 ರಿಂದ ಮರುದಿವಸ (ಏಪ್ರಿಲ್ 11) ಬೆಳಿಗ್ಗೆ 11ರ ವರೆಗೆ ಹೆದ್ದಾರಿ ಬಂದ್ ಮಾಡಲಿದ್ದೇವೆ. ಪ್ರತಿಭಟನೆ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡಿರುವ ರೈತರನ್ನು ಗೌರವಿಸುವ ಕಾರ್ಯಕ್ರಮವನ್ನು ಮೇ 6 ರಂದು ಆಯೋಜಿಸಲಾಗುವುದು’ ಎಂದು ಹೇಳಿದರು.

‘ಸುಪ್ರೀಂ’ಗೆ ವರದಿ ಸಲ್ಲಿಸಿದ ಅಧ್ಯಯನ ಸಮಿತಿ

‘ಮೂರು ವಿವಾದಾತ್ಮಕ ಕೃಷಿ ಕಾಯ್ದೆಗಳನ್ನು ಅಧ್ಯಯನ ಮಾಡಲು ಸುಪ್ರೀಂ ಕೋರ್ಟ್ ನೇಮಿಸಿದ್ದ ನಾಲ್ವರು ಸದಸ್ಯರ ಅಧ್ಯಯನ ಸಮಿತಿಯು ಈ ತಿಂಗಳ 19ರಂದು ಸುಪ್ರೀಂ ಕೋರ್ಟ್‌ಗೆ ತನ್ನ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ’ ಎಂದು ಅಧ್ಯಯನ ಸಮಿತಿಯ ಸದಸ್ಯರಲ್ಲೊಬ್ಬರಾದ ಪಿ.ಕೆ. ಮಿಶ್ರಾ ಅವರು ತಿಳಿಸಿದ್ದಾರೆ.

ವಿವಾದಾತ್ಮಕ ಕೃಷಿಕಾಯ್ದೆಗಳನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಐದು ತಿಂಗಳಿನಿಂದ ನವದೆಹಲಿಯ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಮುಂದಿನ ಆದೇಶದವರೆಗೆ ಕಾಯ್ದೆಯನ್ನು ಅನುಷ್ಠಾನಗೊಳಿಸಬಾರದು ಎಂದು ಸುಪ್ರೀಂ ಕೋರ್ಟ್ ಜ. 11ರಂದು ನಿರ್ದೇಶನ ನೀಡಿತ್ತು. ಈ ಬಿಕ್ಕಟ್ಟನ್ನು ಪರಿಹರಿಸಲು ಸುಪ್ರೀಂ ಕೋರ್ಟ್ ನಾಲ್ವರು ಸದಸ್ಯರ ಅಧ್ಯಯನ ಸಮಿತಿಯನ್ನೂ ನೇಮಕ ಮಾಡಿತ್ತು. ಸಮಿತಿಯು ಎರಡು ತಿಂಗಳ ಕಾಲ ಅಧ್ಯಯನ ನಡೆಸಿದೆ.

ಸಮಿತಿಯ ಅಧಿಕೃತ ವೆಬ್‌ಸೈಟ್‌ನ ಪ್ರಕಾರ, ಸಮಿತಿಯು ವಿವಿಧ ರೈತ ಗುಂಪುಗಳು, ರೈತರ ಉತ್ಪನ್ನ ಸಂಸ್ಥೆಗಳು, ವೃತ್ತಿಪರರು, ವಿವಿಧ ಶಿಕ್ಷಣ ತಜ್ಞರು, ಸರ್ಕಾರಿ ಮತ್ತು ಖಾಸಗಿ ಕೃಷಿ ಮಾರುಕಟ್ಟೆ ಮಂಡಳಿಗಳೊಂದಿಗೆ 12ಕ್ಕೂ ಹೆಚ್ಚು ಸುತ್ತಿನ ಸಮಾಲೋಚನೆಯನ್ನು ನಡೆಸಿದೆ. ಸಮಿತಿಯು ತನ್ನ ವರದಿಯನ್ನು ಅಂತಿಮಗೊಳಿಸುವ ಮುನ್ನ 9 ಆಂತರಿಕ ಸಭೆಗಳನ್ನೂ ನಡೆಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಬೆಂಗಳೂರು ಹಾಗೂ ಸುತ್ತಮುತ್ತ ಗಾರ್ಡನ್ ಹಾಗೂ ನರ್ಸರಿಯಲ್ಲಿ ಕೆಲಸ ಮಾಡಲು ಮಾಲಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ : 9845202274, 9620498866 .

ಎಲ್ಲಾ ಜಿಲ್ಲೆಗಳಲ್ಲಿಯೂ ವಸತಿ, ಊಟದೊಂದಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ.ಬಂದ ದಿನವೇ ಕೆಲಸ ಸಿಗುತ್ತದೆ.10th, PUC, ITI, Diploma, Any Degree, ಪಾಸ್/ಫೇಲ್ 16,200-70,000/-.8095037111, 8095036111

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720916, 7411720920

ಬೇಕಾಗಿದ್ದಾರೆ: 25000ಮಂತ್ಲಿ, ಆಫೀಸ್,ಶಾಪ್ಸ್, ಮಾಲ್ಗಳು, ಮೆಡಿಕಲ್ಸ್ ಗಳಲ್ಲಿ ಕಂಪನಿಯ ವಾಹನಗಳೊಂದಿಗೆ ಅಡ್ವರ್ಟೈಸ್ ಮಾಡಲು. ಊಟ,ವಸತಿಉಚಿತ, ಬೆಂಗಳೂರು (ಷರತ್ತುಗಳಿವೆ). 8904379634, 9513670249

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ವೈವಾಹಿಕ

Matrimonial Bureaus

ಎಲ್ಲಾ ಜಾತಿಗಳ ಮೊದಲನೆ ಮತ್ತು ಮರು ಮದುವೆಯ ವೈವಾಹಿಕ ಮಾಹಿತಿಗಾಗಿ ಸಂಪರ್ಕಿಸಿ. ವಧು ವರರ ಫೋಟೋ ವಿವರವನ್ನು 9019566555ಗೆ ವ್ಯಾಟ್ಸಪ್ ಮಾಡಿ

ವ್ಯಾಪಾರ

Business to Business

Financial Services

ಮುದ್ರಾ ಯೋಜನೆಯ ಮೂಲಕ ಕೃಷಿ ಸ್ವಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲಲಭ್ಯ 8095868219, 7057624634

ರಿಯಲ್ ಎಸ್ಟೇಟ್ ಸೆಲ್ಲಿಂಗ್

Industrial & Factory

Hosur Road

INDUSTRIAL CONVERTED Land Measuring over 1.35 acres at Chandapura, On Hosur Main Road,Near Narayana Hrudalayala, is available for immediate Sale. Contact: 07090186448

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 16.04.2021,18.05.2021 23ದಿನಗಳು ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಪ್ರವಾಸ.16.04.2021, 08.05.2021,18.05.2021 12ದಿನಗಳು ಗೌಹಾತಿ,ಕಾಜಿರಂಗ, ಶಿಲ್ಲಾಂಗ್,ಬೊಂಡಿಲಾ,ತವಾಂಗ್, ಚಿರಾಪುಂಜಿ.,26.04.2021, 30.05.2021 12ದಿನಗಳು ದೀಮಾಪುರಿ,ಕೊಹಿಮಾ, ಇಂಫಾಲ್,ಐಜಾಲ್, ಉನಕೋಟಿ,ಅಗರ್ತಲಾ, ಮಾತಬರಿ.,08.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್,.05.06.2021 10ದಿನಗಳು ದೆಹಲಿ, ಸಿಮ್ಲಾ, ಕುಲುಮನಾಲಿ, 5ದೇವಿಯರು, ವೈಷ್ಣೋದೇವಿ,ಅಮೃತಸರ್, ವಾಘಗಡಿ,ಕುರುಕ್ಷೇತ್ರ. 9743351212/ 9902050065/ 9206979202

19-4-2021 ಮಧ್ಯ ಪ್ರದೇಶ, ಗುಜರಾತ್, ರಾಜಸ್ಥಾನ 17 ದಿನಗಳ ಪ್ರವಾಸ NGS Package Tours, Bangalore +91 7975488469

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೇ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

ರಾವಣ ತಂತ್ರ ಜ್ಯೋತಿಷ್ಯಂ ಪಂಡಿತ್ ಶ್ರೀ ಗಣೇಶ್ ಭಟ್ಟಾಚಾರ್ಯ ಕಠಿಣ ನಿಗೂಡ ಗುಪ್ತ ಸಮಸ್ಯೆಗಳಿಗೆ ಬೇಟಿ ಕೊಡಿ ಯಾವುದೇ ವಶೀಕರಣಗಳಿಗೆ ಕೇವಲ 1665/- . 9845899127 .

★||(ಉಚಿತ ಭವಿಷ್ಯ)||★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

★||ಶ್ರೀಚಾಮುಂಡೇಶ್ವರಿದೇವಿ ಆರಾಧಕರು||★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ಯಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಮಾಟಮಂತ್ರ, ಸಾಲಭಾದೆ,ಶತ್ರುನಾಶ, ಧನವಶ,ಜನವಶ ಇನ್ನೂಯಾವುದೇ ಸಮಸ್ಯೆಗಳಿಗೆ ನೋಡುವಮೂಲಕ 11ನಿಮಿಷದಲ್ಲಿ ಪರಿಹಾರ. 9008968867

★||ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ||★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ_ಮೂಲಕ_ಪರಿಹಾರ ತಿಳಿಸುತ್ತಾರೆ. ಬಸ್_ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,845
ಇಂದಿನ ಅಂತ್ಯ	14,691
▼	154
ದಿನದ ಕನಿಷ್ಠ	14,670

ವಿನಿಮಯ ದರ

$ ಡಾಲರ್	73.12
£ ಪೌಂಡ್	100.77
€ ಯುರೊ	85.78
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1250 (1250)
ಸೂರ್ಯಕಾಂತಿ (ರಿಫೈನ್ಡ್)	₹1670 (1710)
ಪಾಮೋಲಿನ್	₹1195 (1188)

ಕೊಬ್ಬರಿ ಧಾರಣೆ

ಬೆಂಗಳೂರು	₹15500-19000
ತಿಪಟೂರು	₹14000-16003
ತುರುವೇಕೆರೆ	---

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1200-1400
ಮಧ್ಯಮ	₹800-1200
ಸಣ್ಣ	₹500-800

ಎಲ್‌ಪಿಜಿ ಸಿಲಿಂಡರ್ ಬೆಲೆ ₹ 10 ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ದರವು ಗುರುವಾರದಿಂದ ಪ್ರತಿ ಸಿಲಿಂಡರ್‌ಗೆ ₹ 10ರಷ್ಟು ಕಡಿಮೆ ಆಗಲಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಹೇಳಿದೆ.

ಇದರಿಂದಾಗಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ಬೆಂಗಳೂರಿನಲ್ಲಿ ₹ 822 ಇದ್ದಿದ್ದು ₹ 812ಕ್ಕೆ ಇಳಿಕೆ ಕಾಣಲಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ದರ ಇಳಿಕೆ ಆಗಿರುವುದರಿಂದ ಎಲ್‌ಜಿಪಿ ದರದಲ್ಲಿಯೂ ಇಳಿಕೆ ಮಾಡಲಾಗಿದೆ.

ಭಾರತದಿಂದ ಹತ್ತಿ ಆಮದಿಗೆ ಪಾಕ್ ಸಮ್ಮತಿ

ಇಸ್ಲಾಮಾಬಾದ್ (ರಾಯಿಟರ್ಸ್): ಪಾಕಿಸ್ತಾನದ ಆರ್ಥಿಕ ಸಹಕಾರ ಮಂಡಳಿಯು ಭಾರತದಿಂದ ಹತ್ತಿ ಮತ್ತು ಹತ್ತಿ ನೂಲು ಆಮದು ಮಾಡಿಕೊಳ್ಳಲು ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಸ್ಥಗಿತಗೊಂಡಿರುವ ವಾಣಿಜ್ಯ ಸಂಬಂಧವನ್ನು ಮತ್ತೆ ಆರಂಭಿಸುವ ನಿಟ್ಟಿನಲ್ಲಿ ಈ ತೀರ್ಮಾನವು ಪ್ರಮುಖ ಹೆಜ್ಜೆ ಎಂದು ಬಣ್ಣಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

31-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1225 (1245)
ಪಾಮ್ ವಾರದ ಡೆಲಿವರಿ	1193 (1186)
ಸೂರ್ಯಕಾಂತಿ ಎಣ್ಣೆ ಕಚ್ಚಾ	1615 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,050 (44,150)
ಬೆಳ್ಳಿ ಕೆ.ಜಿ 62,850 (63,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಫ್‌ಪಿಐ ಒಳಹರಿವು ₹2.6 ಲಕ್ಷ ಕೋಟಿ

ಹಣಕಾಸು, ಐ.ಟಿ. ವಲಯದಲ್ಲಿ ಹೂಡಿಕೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಗೆ ಹೋಲಿಸಿದರೆ, 2020–21ನೇ ಹಣಕಾಸು ವರ್ಷದಲ್ಲಿ ಭಾರತಕ್ಕೆ ಅತಿ ಹೆಚ್ಚಿನ ವಿದೇಶಿ ಬಂಡವಾಳ (ಎಫ್‌ಪಿಐ) ಹರಿದು ಬಂದಿದೆ. ದೇಶದ ಮಾರುಕಟ್ಟೆಗಳಲ್ಲಿ ₹ 2.6 ಲಕ್ಷ ಕೋಟಿಯಷ್ಟು ಎಫ್‌ಪಿಐ ಒಳಹರಿವು ಕಂಡುಬಂದಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ನಗದು ಲಭ್ಯತೆ ಹೆಚ್ಚಿರುವುದು ಹಾಗೂ ಭಾರತದ ಆರ್ಥಿಕತೆಯು ವೇಗವಾಗಿ ಚೇತರಿಸಿಕೊಳ್ಳುತ್ತದೆ ಎಂಬ ಭರವಸೆಯಿಂದಾಗಿ ಈ ಪ್ರಮಾಣದ ಒಳಹರಿವು ಕಂಡುಬಂದಿದೆ ಎಂದು ತಜ್ಞರು ಹೇಳಿದ್ದಾರೆ.

ಷೇರುಪೇಟೆಗಳಲ್ಲಿ ₹ 2.74 ಲಕ್ಷ ಕೋಟಿಗಳಷ್ಟು ಹೂಡಿಕೆ ಆಗಿದೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿ., ಸಂಸ್ಥೆಯು ಎಫ್‌ಪಿಐ ಮಾಹಿತಿಯನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲು ಆರಂಭಿಸಿದ ಬಳಿಕ ಗರಿಷ್ಠ ಹೂಡಿಕೆ ಇದಾಗಿದೆ.

ಸಾಲಪತ್ರ ಮಾರುಕಟ್ಟೆಯಿಂದ ₹ 24,070 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ.

ಹಣಕಾಸು ವಲಯ, ಅಡಮಾನ ಕಂಪನಿಗಳು, ಫಿನ್‌ಟೆಕ್ ಕಂಪನಿಗಳು ಮತ್ತು ಖಾಸಗಿ ವಿಮಾ ಕಂಪನಿಗಳಲ್ಲಿ ಎಫ್‌ಪಿಐ ಹೂಡಿಕೆ ಆಗಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ ಕುಮಾರ್ ತಿಳಿಸಿದ್ದಾರೆ.

ಐ.ಟಿ., ಹಣಕಾಸು, ಸಿಮೆಂಟ್ ಮತ್ತು ಔಷಧ ವಲಯಗಳು ಹೆಚ್ಚಿನ ಗಳಿಕೆ ಕಂಡುಕೊಳ್ಳುವ ಸಾಧ್ಯತೆಗಳಿವೆ. ಹೀಗಾಗಿ ಭಾರತವು 2021–22ರಲ್ಲಿಯೂ ಹೆಚ್ಚಿನ ಎಫ್‌ಪಿಐ ಆಕರ್ಷಿಸುವ ಸಾಧ್ಯತೆ ಇದೆ ಎಂದೂ ಅವರು ಹೇಳಿದ್ದಾರೆ.

2020ರ ಮಾರ್ಚ್‌ನಿಂದ 2021ರ ಮಾರ್ಚ್ ಅವಧಿಯಲ್ಲಿ ಮಾರ್ಚ್, ಏಪ್ರಿಲ್, ಮೇ ಮತ್ತು ಸೆಪ್ಟೆಂಬರ್ ತಿಂಗಳುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತಿಂಗಳುಗಳಲ್ಲಿ ಹೂಡಿಕೆ ಮಾಡಿದ್ದಾರೆ.

ಸರ್ಕಾರಗಳ ಆರ್ಥಿಕ ಉತ್ತೇಜನಾ ಕ್ರಮಗಳು ಮತ್ತು ಕೇಂದ್ರೀಯ ಬ್ಯಾಂಕುಗಳ ಹಣಕಾಸು ನೀತಿಗಳಿಂದಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ ಕೆಲವು ದೇಶಗಳಲ್ಲಿ ಎಫ್‌ಪಿಐ ಒಳಹರಿವು ಆಗಿದೆ. ಈ ದೇಶಗಳ ಸಾಲಿನಲ್ಲಿ ಭಾರತವು ಅತಿ ಹೆಚ್ಚಿನ ಬಂಡವಾಳ ಆಕರ್ಷಿಸಿದೆ. ಭಾರತದ ಆರ್ಥಿಕತೆಯು ವೇಗವಾಗಿ ಚೇತರಿಕೆ ಕಾಣುತ್ತಿರುವುದು ಹಾಗೂ ಹೂಡಿಕೆಯ ಮೇಲಿನ ಗಳಿಕೆಯು ಅಚ್ಚರಿ ಮೂಡಿಸುವಂತಿರುವುದೇ ಇದಕ್ಕೆ ಕಾರಣ ಎಂದು ಕೋಟಕ್ ಸೆಕ್ಯುರಿಟೀಸ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷ ರುಸ್ಮಿಕ್ ಓಜಾ ಹೇಳಿದ್ದಾರೆ.

ಭಾರತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 7.30 ಲಕ್ಷ ಕೋಟಿಗಳಷ್ಟು ಹೆಚ್ಚಾಗಿರುವುದು ಸಹ ಭಾರತದ ರೂಪಾಯಿಯನ್ನು ಅಮೆರಿಕದ ಡಾಲರ್ ಮತ್ತು ಇನ್ನಿತರ ಕರೆನ್ಸಿಗಳ ಎದುರು ಸ್ಥಿರವಾಗಿರುವಂತೆ ಮಾಡಿದೆ ಎಂದೂ ಅವರು ಹೇಳಿದ್ದಾರೆ.

ಆರ್ಥಿಕತೆಯ ಮೇಲೆ ಕೋವಿಡ್–19 ಸಾಂಕ್ರಾಮಿಕದ ಪರಿಣಾಮಗಳ ಹೊರತಾಗಿಯೂ ದೇಶಿ ಷೇರುಪೇಟೆಗಳು ಪ್ರಸಕ್ತ ಹಣಕಾಸು ವರ್ಷದಲ್ಲಿ ಸಕಾರಾತ್ಮಕವಾಗಿದ್ದು, ಹೂಡಿಕೆದಾರರಿಗೆ ಉತ್ತಮ ಗಳಿಕೆ ತಂದುಕೊಟ್ಟಿವೆ.

ಹೆಚ್ಚಲಿದೆ ಮನೆ ಬೆಲೆ: ಅನರಾಕ್

ನವದೆಹಲಿ (ಪಿಟಿಐ): ಕಚ್ಚಾ ಸಾಮಗ್ರಿಗಳ ಬೆಲೆ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ದೇಶದ ಏಳು ಪ್ರಮುಖ ನಗರಗಳಲ್ಲಿ 2021ರ ಜನವರಿ–ಮಾರ್ಚ್ ಅವಧಿಯಲ್ಲಿ ಮನೆಗಳ ಬೆಲೆಯು ಶೇಕಡ 1ರಷ್ಟು ಏರಿಕೆ ಕಂಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

2021ರ ಜನವರಿ–ಮಾರ್ಚ್ ಅವಧಿಯಲ್ಲಿ ಮನೆಗಳ ಬೆಲೆಯು ಚದರ ಅಡಿಗೆ ₹ 5,660ರಷ್ಟಾಗಿದೆ. 2020ರ ಇದೇ ಅವಧಿಯಲ್ಲಿ ಬೆಲೆಯು ₹ 5,599ರಷ್ಟಿತ್ತು.

ಬೆಂಗಳೂರಿನಲ್ಲಿ ಮನೆಗಳ ದರವು ಚದರ ಅಡಿಗೆ ಶೇ 2ರಷ್ಟು ಹೆಚ್ಚಾಗಿ ₹ 4,975ರಿಂದ ₹ 5,060ಕ್ಕೆ ಏರಿಕೆಯಾಗಿದೆ. ದೆಹಲಿ–ಎನ್‌ಸಿಆರ್ ಮಾರುಕಟ್ಟೆಯಲ್ಲಿ ಮನೆಗಳ ಬೆಲೆಯು ಚದರ ಅಡಿಗೆ ಶೇ 2ರಷ್ಟು ಹೆಚ್ಚಾಗಿ ₹ 4,580 ರಿಂದ ₹ 4,650ಕ್ಕೆ ಏರಿಕೆಯಾಗಿದೆ. ಮುಂಬೈ ಮಹಾನಗರ ಪ್ರದೇಶದಲ್ಲಿ ಶೇ 1ರಷ್ಟು ಹೆಚ್ಚಾಗಿ ₹ 10,610ರಿಂದ ₹ 10,750ಕ್ಕೆ ಏರಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	355
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಪುತ್ತೂರು	
ಕೋಕ	9500-24000
ಹೊಸತು	28500-41000
ಕುಮಟ	
ಚಿಪ್ಪು	26895-29555
ಕೋಕ	18099-27499
ಫ್ಯಾಕ್ಟರಿ	13899-17649
ಹಳೆಚಾಲಿ	40899-40899
ಹೊಸಚಾಲಿ	36629-37629
ಶಿರಸಿ	
ಬೆಟ್ಟೆ	22219-38098
ಬಿಳಿಗೋಟು	20669-32089
ಚಾಲಿ	34899-37499
ಹಳೆಚಾಲಿ	39142-39529
ರಾಶಿ	38699-41418

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9800	9600	9700	122.60 ಸೆಂಟ್ಸ್
ಎಸಿ	3920	3750	3700	
ಆರ್‌ಪಿ	5100	5100	5050	
ಆರ್‌ಸಿ	2900	2900	2850	1348ಡಾಲರ್ಸ್

ಷೇರು ಮಾರಾಟ, ಮರುಖರೀದಿ: ₹ 32,835 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಕೇಂದ್ರೋದ್ಯಮಗಳ ಷೇರು ಮಾರಾಟ ಮತ್ತು ಮರು ಖರೀದಿ ಪ್ರಕ್ರಿಯೆಯ ಮೂಲಕ ಸರ್ಕಾರವು ₹ 32,835 ಕೋಟಿ ಬಂಡವಾಳ ಸಂಗ್ರಹಿಸಿದೆ. ಇದರಿಂದಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಪರಿಷ್ಕೃತ ಅಂದಾಜಿನ ಗುರಿ ಮೀರಿದಂತಾಗಿದೆ. ಆದರೆ, ಸಂಗ್ರಹ ಆಗಿರುವ ಮೊತ್ತವು ಬಜೆಟ್ ಅಂದಾಜಿಗಿಂತಲೂ ಕಡಿಮೆ ಇದೆ.

ಬಜೆಟ್ ಅಂದಾಜಿನ ಪ್ರಕಾರ ₹ 2.10 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಕೋವಿಡ್–19 ಸಾಂಕ್ರಾಮಿಕದಿಂದಾಗಿ ಷೇರು ವಿಕ್ರಯಕ್ಕೆ ಹಿನ್ನಡೆ ಆಗಿದ್ದರಿಂದ ಗುರಿಯನ್ನು ₹ 32 ಸಾವಿರ ಕೋಟಿಗೆ ತಗ್ಗಿಸಲಾಯಿತು.

2021–22ನೇ ಹಣಕಾಸು ವರ್ಷಕ್ಕೆ ಷೇರುವಿಕ್ರಯದ ಮೂಲಕ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಏಪ್ರಿಲ್ 1ರಿಂದ ಆರಂಭವಾಗಲಿರುವ ಹಣಕಾಸು ವರ್ಷದಲ್ಲಿ ಎಲ್‌ಐಸಿ ಐಪಿಒ, ಐಡಿಬಿಐ ಬ್ಯಾಂಕ್ ಖಾಸಗೀಕರಣ ಪ್ರಕ್ರಿಯೆಯೂ ನಡೆಯುವ ನಿರೀಕ್ಷೆ ಇದೆ.

ಷೇರುಪೇಟೆಗಳ ಅಸಾಮಾನ್ಯ ಪ್ರಮಾಣದ ಏರಿಕೆ

ಹೂಡಿಕೆದಾರರ ಸಂಪತ್ತು ₹90 ಲಕ್ಷ ಕೋಟಿ ಹೆಚ್ಚಳ!

ನವದೆಹಲಿ (ಪಿಟಿಐ): 2020–21ನೇ ಹಣಕಾಸು ವರ್ಷದಲ್ಲಿ ಹೂಡಿಕೆದಾರರ ಸಂಪತ್ತಿನ ಒಟ್ಟು ಮೌಲ್ಯದಲ್ಲಿ ₹ 90.82 ಲಕ್ಷ ಕೋಟಿ ಹೆಚ್ಚಳ ಆಗಿದೆ. ಷೇರು ಮಾರುಕಟ್ಟೆಗಳು ಕಂಡ ಅಸಾಮಾನ್ಯ ಪ್ರಮಾಣದ ಏರಿಕೆಯು ಇದಕ್ಕೆ ಕಾರಣ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 2020–21ನೇ ಸಾಲಿನಲ್ಲಿ ಒಟ್ಟು 20,040 ಅಂಶಗಳ ಏರಿಕೆ ದಾಖಲಿಸಿದೆ. ಕೋವಿಡ್–19 ಸಾಂಕ್ರಾಮಿಕ ತಂದಿತ್ತ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಸೆನ್ಸೆಕ್ಸ್ ಅಸಾಮಾನ್ಯ ಎನ್ನುವಂತಹ ಏರಿಕೆಯನ್ನು ಕಂಡಿತು.

ಸಾಂಕ್ರಾಮಿಕದ ಕಾರಣದಿಂದಾಗಿ ಈ ಆರ್ಥಿಕ ವರ್ಷವು ಭಾರತದ ಹಾಗೂ ಜಾಗತಿಕ ಷೇರು ಮಾರುಕಟ್ಟೆಗಳ ಪಾಲಿಗೆ ತೀವ್ರ ಏರಿಳಿತಗಳ ವರ್ಷವಾಗಿತ್ತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಮಾರುಕಟ್ಟೆಗಳು ಏರಿಕೆ ದಾಖಲಿಸಿದ ಕಾರಣದಿಂದಾಗಿ, ಹೂಡಿಕೆದಾರರಿಗೆ ಒಳ್ಳೆಯ ಪ್ರತಿಫಲ ಸಿಕ್ಕಿತು.

‘ದೇಶದಲ್ಲಿ ಅನ್‌ಲಾಕ್ ಪ್ರಕ್ರಿಯೆ ಶುರುವಾದ ನಂತರ, ಅರ್ಥ ವ್ಯವಸ್ಥೆಯು ಚೇತರಿಕೆಯ ಹಾದಿಗೆ ಬಂದ ನಂತರ ಮಾರುಕಟ್ಟೆಯಲ್ಲಿನ ಗೂಳಿಯ ಓಟವು ಮತ್ತಷ್ಟು ಬಲ ಪಡೆದುಕೊಂಡಿತು. ಕೋವಿಡ್–19ಕ್ಕೆ ಲಸಿಕೆ ಲಭ್ಯವಾಗಿದ್ದು ಮಾರುಕಟ್ಟೆಯ ಓಟಕ್ಕೆ ನೆರವಾಯಿತು’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಹೂಡಿಕೆ ವಿಭಾಗದ ಮುಖ್ಯಸ್ಥ ವಿ.ಕೆ. ವಿಜಯ ಕುಮಾರ್ ಹೇಳಿದರು.

ಬುಧವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 627 ಅಂಶ ಇಳಿಕೆ ದಾಖಲಿಸಿದೆ.

‘ಲಾಕ್‌ಡೌನ್ ನಿಯಮಗಳನ್ನು ಸಡಿಲಿಸಿದ್ದು, ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದು ಹಾಗೂ ಸರ್ಕಾರದಿಂದ ಬೆಂಬಲ ಸಿಕ್ಕಿದ ಕಾರಣದಿಂದಾಗಿ ಈ ಹಣಕಾಸು ವರ್ಷದಲ್ಲಿ ಷೇರು ಮಾರುಕಟ್ಟೆಗಳು ಕಂಡ ಚೇತರಿಕೆಯು ಅತ್ಯುತ್ತಮ ಚೇತರಿಕೆಗಳಲ್ಲಿ ಒಂದು’ ಎಂದು ರೆಲಿಗೇರ್ ಬ್ರೋಕಿಂಗ್ ಸಂಸ್ಥೆಯ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಬಡ್ಡಿ ಕಡಿತ: ಎಲ್ಲಿ, ಎಷ್ಟು? (%)

ಯೋಜನೆ	ಇದುವರೆಗಿನ ಬಡ್ಡಿ	ಹೊಸ ಬಡ್ಡಿ ದರ
1 ವರ್ಷದ ಅವಧಿ ಠೇವಣಿ	5.5	4.4
2 ವರ್ಷದ ಅವಧಿ ಠೇವಣಿ	5.5	5.0
3 ವರ್ಷದ ಅವಧಿ ಠೇವಣಿ	5.5	5.1
5 ವರ್ಷದ ಅವಧಿ ಠೇವಣಿ	6.7	5.8
5 ವರ್ಷದ ಆರ್‌.ಡಿ.	5.8	5.3
ಹಿರಿಯ ನಾಗರಿಕರ ಉಳಿತಾಯ ಯೋಜನೆ	7.4	6.5
ಮಾಸಿಕ ಆದಾಯ ಖಾತೆ	6.6	5.7
ರಾಷ್ಟ್ರೀಯ ಉಳಿತಾಯ ಪತ್ರ	6.8	5.9
ಪಿಪಿಎಫ್	7.1	6.4
ಕಿಸಾನ್ ವಿಕಾಸ ಪತ್ರ	6.9	6.2
ಸುಕನ್ಯಾ ಸಮೃದ್ಧಿ ಯೋಜನೆ	7.6	6.9

‘ಭಾರತದ ಆರ್ಥಿಕತೆ ಸಂಕಷ್ಟದಿಂದ ಪಾರಾಗಿಲ್ಲ’

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಪಿಡುಗು ಹಾಗೂ ದೇಶದಾದ್ಯಂತ ವಿಧಿಸಲಾಗಿದ್ದ ಲಾಕ್‌ಡೌನ್ ಪರಿಣಾಮ ಕುಸಿದಿದ್ದ ಭಾರತದ ಆರ್ಥಿಕತೆ ಆಶ್ಚರ್ಯಕರವಾಗಿ ಪುಟಿದೆದ್ದಿದೆ. ಆದರೆ, ಸಂಕಷ್ಟದಿಂದ ಇನ್ನೂ ಪಾರಾಗಿಲ್ಲ ಎಂದು ವಿಶ್ವಬ್ಯಾಂಕ್ ಅಭಿಪ್ರಾಯಪಟ್ಟಿದೆ.

ವಿಶ್ವ ಬ್ಯಾಂಕ್ ಬಿಡುಗಡೆ ಮಾಡಿರುವ ‘ಸೌತ್ ಏಷ್ಯಾ ಎಕನಾಮಿಕ್ ಫೋಕಸ್’ ಎಂಬ ವರದಿಯಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದ್ದು, 2021–22ನೇ ಸಾಲಿನಲ್ಲಿ ಭಾರತದ ಜಿಡಿಪಿ ಪ್ರಗತಿ ದರ ಶೇ 7.5 ರಿಂದ ಶೇ 12.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.

ಮೂಲಸೌಕರ್ಯ ವಲಯದ ಬೆಳವಣಿಗೆ ಇಳಿಕೆ

ನವದೆಹಲಿ (ಪಿಟಿಐ): ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಕಳೆದ ವರ್ಷದ ಫೆಬ್ರುವರಿಗೆ ಹೋಲಿಸಿದರೆ ಈ ವರ್ಷದ ಫೆಬ್ರುವರಿಯಲ್ಲಿ ಇಳಿಕೆ ಕಂಡಿದೆ.

2020ರ ಫೆಬ್ರುವರಿಯಲ್ಲಿ ಈ ವಲಯಗಳ ಬೆಳವಣಿಗೆಯು ಶೇಕಡ 6.4ರಷ್ಟಿತ್ತು. ಇದು 2021ರ ಫೆಬ್ರುವರಿಯಲ್ಲಿ ಶೇ 4.6ಕ್ಕೆ ಇಳಿಕೆ ಆಗಿದ್ದು, ತಜ್ಞರ ಪ್ರಕಾರ ಕಳೆದ ಆರು ತಿಂಗಳಿನಲ್ಲಿ ಕಂಡಿರುವ ಅತ್ಯಂತ ಹೆಚ್ಚಿನ ಇಳಿಕೆ ಇದಾಗಿದೆ.

2020–21ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಶೇ (–) 8.3ಕ್ಕೆ ಕುಸಿತ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ (+) 1.3ರಷ್ಟು ಬೆಳವಣಿಗೆ ಆಗಿತ್ತು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

ಐಪಿಎಲ್ ಟೂರ್ನಿ: ಸಿರಾಜ್, ಸೈನಿ, ಗ್ಲೆನ್ ಮ್ಯಾಕ್ಸ್‌ವೆಲ್ ಮೇಲೆ ಅಪಾರ ನಿರೀಕ್ಷೆ: ಮೈಕ್ ಹೆಸನ್

ವಿರಾಟ್ ಲಯ ಆರ್‌ಸಿಬಿಗೆ ಬಲ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಸಿರಾಜ್ (ಬಲ)

ಬೆಂಗಳೂರು: ವಿರಾಟ್ ಕೊಹ್ಲಿ ಸದ್ಯ ಅಮೋಘ ಲಯದಲ್ಲಿದ್ದಾರೆ. ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಅವರ ಬ್ಯಾಟಿಂಗ್ ಅದ್ಭುತವಾಗಿತ್ತು. ಇದರಿಂದಾಗಿ ಈ ಬಾರಿ ಐಪಿಎಲ್‌ನಲ್ಲಿ ನಮ್ಮ ತಂಡದ ಬ್ಯಾಟಿಂಗ್ ಪಡೆಯ ಬಲವರ್ಧನೆಯಾಗಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ರಿಕೆಟ್ ನಿರ್ದೇಶಕ ಮೈಕ್ ಹೆಸನ್ ಹೇಳಿದ್ದಾರೆ.

'ವಿರಾಟ್ ಅಗ್ರಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಾರೆ. ಆ ಸ್ಥಾನದಲ್ಲಿದ್ದು ಯಾವ ರೀತಿ ಆಡಬೇಕು ಮತ್ತು ಒತ್ತಡ ನಿಭಾಯಿಸಬೇಕೆಂಬ ಅಪಾರ ಅನುಭವ ಅವರಿಗೆ ಇದೆ. ಇದು ತಂಡದ ಆತ್ಮವಿಶ್ವಾಸವನ್ನು ಗಟ್ಟಿಯಾಗಿಸುತ್ತದೆ' ಎಂದು ಬುಧವಾರ ನಡೆದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಇರುವುದು ಹೊಸ ಭರವಸೆ ಮೂಡಿಸಿದೆ. ಮಧ್ಯದ ಮತ್ತು ಅಂತಿಮ ಹಂತದ ಓವರ್‌ಗಳಲ್ಲಿ ಬ್ಯಾಟಿಂಗ್ ಮಾಡುವಲ್ಲಿ ಗ್ಲೆನ್ ನಿಪುಣರು. ಅವರು ತಂಡಕ್ಕೆ ಬರಲಿದ್ದಾರೆ. ಬಂದಾಗ ಅವರೊಂದಿಗೆ ವಿಸ್ತೃತವಾಗಿ ಚರ್ಚೆ ನಡೆಸುತ್ತೇನೆ. ಅವರು ತಮ್ಮ ಹೊಣೆಯನ್ನು ಅರ್ಥ ಮಾಡಿಕೊಂಡು ಆಡಿದರೆ ತಂಡದ ಯಶಸ್ಸು ಖಚಿತ' ಎಂದರು.

ಈ ಸಲದ ಹರಾಜು ಪ್ರಕ್ರಿಯೆಯಲ್ಲಿ ಆರ್‌ಸಿಬಿಯು ಮ್ಯಾಕ್ಸ್‌ವೆಲ್ ಅವರನ್ನು ₹14.25 ಕೋಟಿಗೆ ಖರೀದಿಸಿತ್ತು. ಹೋದ ವರ್ಷ ಗ್ಲೆನ್ ಪಂಜಾಬ್ ಕಿಂಗ್ಸ್ ತಂಡದಲ್ಲಿದ್ದರು.

ಈ ಬಾರಿ ತಂಡಕ್ಕೆ ಸೇರ್ಪಡೆಯಾಗಿರುವ ನ್ಯೂಜಿಲೆಂಡ್‌ನ 6.9 ಅಡಿ ಎತ್ತರದ ಕೈಲಿ ಜೆಮಿಸನ್ ಕುರಿತು ಮಾತನಾಡಿದ ಹೆಸನ್, 'ಭಾರತದ ಪಿಚ್‌ಗಳಲ್ಲಿಯೂ ಬೌನ್ಸರ್‌ಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಬಲ್ಲ ಸಾಮರ್ಥ್ಯ ಅವರಿಗೆ ಇದೆ. ಅಲ್ಲದೇ ಕೆಲವು ಪಿಚ್‌ಗಳಲ್ಲಿ ಅವರ ಸ್ವಿಂಗ್, ಕಟರ್‌ಗಳೂ ಪರಿಣಾಮಕಾರಿಯಾಗಬಲ್ಲವು. ಬ್ಯಾಟಿಂಗ್‌ನಲ್ಲಿಯೂ ಸಿಕ್ಸರ್, ಬೌಂಡರಿ ಸಿಡಿಸುವ ಕಲೆ ಅವರಿಗೆ ಗೊತ್ತಿದೆ. ಇದರಿಂದಾಗಿ ತಂಡಕ್ಕೆ ಅನುಕೂಲವಾಗಲಿದೆ' ಎಂದರು.

'ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈಚೆಗೆ ಬಹಳಷ್ಟು ಯಶಸ್ಸು ಗಳಿಸಿರುವ ಮೊಹಮ್ಮದ್ ಸಿರಾಜ್ ಮತ್ತು ನವದೀಪ್ ಸೈನಿ ಅವರೊಂದಿಗೆ ಜೆಮಿಸನ್ ಇರುವುದರಿಂದಾಗಿ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ. ಸೈನಿ ವಿಭಿನ್ನ ರೀತಿಯ ಲೆಂಗ್ತ್ ಮತ್ತು ಲೈನ್ ನಲ್ಲಿ ಎಸೆತಗಳನ್ನು ಹಾಕುತ್ತಾರೆ' ಎಂದರು. ಇದೇ ಮೊದಲ ಬಾರಿಗೆ ತಂಡದಲ್ಲಿ ಸ್ಥಾನ ಪಡೆದಿರುವ ಮಧ್ಯಪ್ರದೇಶದ ರಜತ್ ಪಾಟಿದಾರ್ ಮತ್ತು ಕೇರಳದ ಮೊಹಮ್ಮದ್ ಅಜರುದ್ದೀನ್ ಪ್ರತಿಭಾನ್ವಿತ ಆಟಗಾರರು ಎಂದೂ ಹೆಸನ್ ಹೇಳಿದರು.

'ತಟಸ್ಥ ತಾಣದಲ್ಲಿ ಪಂದ್ಯಗಳು: ಸೂಕ್ತ ನಿರ್ಧಾರ'

ಕೋಲ್ಕತ್ತ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಪಂದ್ಯಗಳು ತಟಸ್ಥ ತಾಣಗಳಲ್ಲಿ ನಡೆಯುತ್ತಿರುವುದು ಸೂಕ್ತವಾಗಿದೆ. ಯಾವುದೇ ತಂಡಕ್ಕೆ ತವರಿನ ನೆರವು ಸಿಗುವುದಿಲ್ಲ ಎಂದು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೆಂಕಿ ಮೈಸೂರು ಅಭಿಪ್ರಾಯಪಟ್ಟಿದ್ದಾರೆ.

ಇದೇ 9ರಿಂದ ಆರಂಭವಾಗಲಿರುವ ಐಪಿಎಲ್ ಟೂರ್ನಿಯಲ್ಲಿ ಆರು ನಗರಗಳು ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ. ಒಟ್ಟು ಎಂಟು ತಂಡಗಳು ಆಡಲಿವೆ.

ಚೆನ್ನೈ, ಮುಂಬೈ, ಕೋಲ್ಕತ್ತ ಮತ್ತು ಬೆಂಗಳೂರಿನಲ್ಲಿ ತಲಾ 10 ಪಂದ್ಯ, ಅಹಮದಾಬಾದ್ ಹಾಗೂ ನವದೆಹಲಿಯಲ್ಲಿ ತಲಾ ಎಂಟು ಪಂದ್ಯಗಳು ನಡೆಯಲಿವೆ.

'ತವರಿನಂಗಳದಲ್ಲಿ ಅಡದಿರುವುದು ನಿರಾಶಾದಾಯಕವೇ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ. ಸವಾಲಿನ ಸಮಯ ಇದಾಗಿದೆ. ಬಯೋ ಬಬಲ್ ಮತ್ತು ತಟಸ್ಥ ತಾಣಗಳಲ್ಲಿ ಆಡುತ್ತಿರುವುದು ಸೂಕ್ತವಾಗಿದೆ' ಎಂದು ವೆಂಕಿ ಹೇಳಿದ್ದಾರೆ.

ಅಹಮ್ಮದ್ ಬಿನ್ ಅಲಿ ಕ್ರೀಡಾಂಗಣ

ಫಿಫಾ ವಿಶ್ವಕಪ್ ಟೂರ್ನಿಗೆ 600 ದಿನಗಳು ಬಾಕಿ

ಕಂಗೊಳಿಸುತ್ತಿರುವ ಅಂಗಣಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 22ನೇ ಆವೃತ್ತಿ ಆರಂಭಗೊಳ್ಳಲು ಇನ್ನು 600 ದಿನಗಳು ಬಾಕಿ ಇವೆ. ಟೂರ್ನಿಗೆ ಕತಾರ್‌ನಲ್ಲಿ ಭವ್ಯ ಕ್ರೀಡಾಂಗಣಗಳು ಸಿದ್ಧಗೊಂಡಿವೆ. ಒಟ್ಟು ಎಂಟು ಕ್ರೀಡಾಂಗಣಗಳ ಪೈಕಿ ನಾಲ್ಕನ್ನು ಈಗಾಗಲೇ ಉದ್ಘಾಟಿಸಲಾಗಿದ್ದು ಉಳಿದ ನಾಲ್ಕರ ಕಾಮಗಾರಿ ಅಂತಿಮ ಹಂತದಲ್ಲಿದೆ.

ಮುಂದಿನ ವರ್ಷದ ನವೆಂಬರ್ 21ರಂದು ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಅರಂಭವಾಗಲಿದ್ದು ಡಿಸೆಂಬರ್ 18ರಂದು ಮುಕ್ತಾಯಗೊಳ್ಳಲಿದೆ. ಅತ್ಯಾಧುನಿಕ ನಿರ್ಮಾಣ ತಂತ್ರಜ್ಞಾನವನ್ನು ಬಳಸಿ ಕ್ರೀಡಾಂಗಣಗಳನ್ನು ಸಿದ್ಧಗೊಳಿಸಲಾಗಿದೆ. ಹೊಸಶೈಲಿಯ ಮೆಟ್ರೊ ಮತ್ತು 'ಎಕ್ಸ್‌ಪ್ರೆಸ್ ವೇ'ಗಳ ನಡುವೆ ಕ್ರೀಡಾಂಗಣಗಳು ಮೈದಳೆದಿದ್ದು ಕಣ್ಣಿಗೂ ಮುದ ನೀಡುತ್ತಿವೆ.

ಕ್ರೀಡಾಂಗಣಗಳ ಕಿರು ನೋಟ: ಖಲೀಫಾ : 40 ಸಾವಿರ ಆಸನ ಸೌಲಭ್ಯವಿರುವ ಖಲೀಫಾ ಕ್ರೀಡಾಂಗಣ ದೋಹಾದಿಂದ 11 ಕಿಮೀ ದೂರದಲ್ಲಿದ್ದು 2017ರಲ್ಲಿ ಉದ್ಘಾಟನೆಗೊಂಡಿತ್ತು. ಪ್ಲೇ ಆಫ್ ಹಂತದ ಎಂಟು ಪಂದ್ಯಗಳು ಇಲ್ಲಿ ನಡೆಯಲಿವೆ. ಕತಾರ್‌ನ ಕ್ರೀಡಾ ಕೇಂದ್ರದಲ್ಲೇ ಈ ಕ್ರೀಡಾಂಗಣವಿದೆ. ಏಷ್ಯನ್ ಗೇಮ್ಸ್, ಎಎಫ್‌ಸಿ ಏಷ್ಯಾಕಪ್, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್, ಫಿಫಾ ಕ್ಲಬ್ ವಿಶ್ವಕಪ್ ಇತ್ಯಾದಿಗಳಿಗೆ ಆತಿಥ್ಯ ವಹಿಸಿದೆ.

ಅಲ್ ಜನಾಬ್ ಕ್ರೀಡಾಂಗಣ: ಇಲ್ಲಿ ಕೂಡ 40 ಸಾವಿರ ಆಸನ ಸಾಮರ್ಥ್ಯ ಇದ್ದು ದೋಹಾದಿಂದ 23 ಕಿಮೀ ದೂರವಿದೆ. 2019ರಲ್ಲಿ ಉದ್ಘಾಟನೆಗೊಂಡಿತ್ತು. ಸ್ಥಳೀಯ ಸಾಂಪ್ರದಾಯಿಕ ದೋಣಿಗಳ ಮಾದರಿಯಲ್ಲಿ ಇದರ ಒಳಾಂಗಣ ವಿನ್ಯಾಸವನ್ನು ಮಾಡಲಾಗಿದೆ. ಪ್ರಿ ಕ್ವಾರ್ಟರ್ ಫೈನಲ್‌ನ ಏಳು ಪಂದ್ಯಗಳು ಇಲ್ಲಿ ನಡೆಯಲಿದ್ದು 2020ರ ಎಎಫ್‌ಸಿ ಚಾಂಪಿಯನ್ಸ್ ಲೀಗ್ ಫೈನಲ್ ಪಂದ್ಯ ಇಲ್ಲಿ ನಡೆದಿತ್ತು.

ಎಜುಕೇಷನ್ ಸಿಟಿ ಕ್ರೀಡಾಂಗಣ: 40 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣವಿದು. ದೋಹಾದಿಂದ 13 ಕಿಮೀ ದೂರ ಇದ್ದು ಕಳೆದ ವರ್ಷ ಉದ್ಘಾಟನೆಯಾಗಿತ್ತು. ಖತಾರ್‌ನ ಜ್ಞಾನ ಮತ್ತು ಸಂಶೋಧನಾ ಕೇಂದ್ರದ ನಡುವೆ ಇರುವ ಈ ಕ್ರೀಡಾಂಗಣ ಕ್ವಾರ್ಟರ್ ಫೈನಲ್ ಹಂತದ ಎಂಟು ಪಂದ್ಯಗಳು ಇಲ್ಲಿ ನಡೆಯಲಿವೆ. ಫಿಫಾ ಕ್ಲಬ್ ವಿಶ್ವಕಪ್ ಟೂರ್ನಿಯ ಪಂದ್ಯಗಳು ಇಲ್ಲಿ ನಡೆದಿವೆ.

ಅಹಮ್ಮದ್ ಬಿನ್ ಅಲಿ ಕ್ರೀಡಾಂಗಣ: 40 ಸಾವಿರ ಆಸನ ಸೌಲಭ್ಯ ಇದ್ದು ದೋಹಾದಿಂದ 22 ಕಿಮೀ ದೂರದಲ್ಲಿದೆ. ಕಳೆದ ವರ್ಷ ಉದ್ಘಾಟನೆಗೊಂಡ ಕ್ರೀಡಾಂಗಣ ಅರಬ್ ರಾಷ್ಟ್ರದ ಸೊಬಗನ್ನು ಮೇಳೈಸುತ್ತದೆ. ವಿಶ್ವಕಪ್‌ನ ಏಳು ಪಂದ್ಯಗಳು ಇಲ್ಲಿ ನಡೆಯಲಿದ್ದು ಫಿಫಾ ಕ್ಲಬ್ ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಈಗಾಗಲೇ ಆತಿಥ್ಯ ವಹಿಸಿದೆ.

ಅಲ್ ಬೈತ್ ಕ್ರೀಡಾಂಗಣ: 60 ಸಾವಿರ ಆಸನ ವ್ಯವಸ್ಥೆ ಇರುವ ಇದು ದೋಹಾದಿಂದ 46 ಕಿಮೀ ದೂರದಲ್ಲಿದೆ. ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯ ನಡೆಯಲಿರುವ ಸ್ಥಳ ಇದು. ಸೆಮಿಫೈನಲ್ ಪಂದ್ಯಗಳು ಕೂಡ ಇಲ್ಲೇ ನಡೆಯಲಿವೆ. ಕಾಮಗಾರಿ ಪೂರ್ಣಗೊಂಡಿದ್ದು ಉದ್ಘಾಟನೆಗೆ ಸಜ್ಜಾಗಿದೆ.

ಅಲ್ ಥುಮಾಮ ಕ್ರೀಡಾಂಗಣ: 40 ಸಾವಿರ ಪ್ರೇಕ್ಷಕರು ಕುಳಿತುಕೊಳ್ಳಬಹುದಾಗಿದೆ. ದೋಹಾದಿಂದ 12 ಕಿ.ಮೀ. ದೂರದಲ್ಲಿದ್ದು ವಿಶ್ವಕಪ್‌ನ 8 ಪಂದ್ಯಗಳಿಗೆ ಆತಿಥ್ಯ ವಹಿ ಸಲಿದೆ. ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು ಉಳಿದಿರುವ ಕಾಮಗಾರಿ ಕೊನೆಯ ಹಂತದಲ್ಲಿದೆ.

ರಾಸ್ ಅಬು ಅಬೌದ್ ಕ್ರೀಡಾಂಗಣ: 40 ಸಾವಿರ ಪ್ರೇಕ್ಷಕರು ಕುಳಿತುಕೊಳ್ಳಬಹುದಾದ ಕ್ರೀಡಾಂಗಣ ದೋಹಾದಿಂದ 7 ಕಿಲೋಮೀಟರ್ ದೂರದಲ್ಲಿದೆ. ವಿಶ್ವಕಪ್ ಟೂರ್ನಿಯ ಏಳು ಪಂದ್ಯಗಳು ಇಲ್ಲಿ ನಡೆಯಲಿದ್ದು ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

ಲುಸೈಲ್ ಕ್ರೀಡಾಂಗಣ: ಎಲ್ಲ ಕ್ರೀಡಾಂಗಣಗಳ ಪೈಕಿ ಅತಿದೊಡ್ಡದು ಇದು. 80 ಸಾವಿರ ಆಸನ ವ್ಯವಸ್ಥೆ ಇರುವ ಈ ಕ್ರೀಡಾಂಗಣ ದೋಹಾದಿಂದ 20 ಕಿಲೋಮೀಟರ್ ದೂರದಲ್ಲಿದೆ. ಕಾಮಗಾರಿಯ ಬಹುತೇಕ ಭಾಗ ಪೂರ್ಣಗೊಂಡಿದೆ.

ಮುಖ್ಯಾಂಶಗಳು

- ಒಟ್ಟು ಎಂಟರ ಪೈಕಿ ನಾಲ್ಕು ಕ್ರೀಡಾಂಗಣಗಳ ಉದ್ಘಾಟನೆ
- ಮುಂದಿನ ವರ್ಷದ ನ. 21ರಂದು ವಿಶ್ವಕಪ್ ಟೂರ್ನಿ ಆರಂಭ

ರಾಜ್ಯ ಸಬ್ ಜೂನಿಯರ್ ಈಜು: ಡಾಲ್ಫಿನ್ ಪಾರಮ್ಯ

ಶರಣ್, ಅಲಿಸಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಅಲಿಸಾ ಸ್ವೀಡಲ್ ರೇಗೊ

ಶರಣ್ ಶ್ರೀಧರ

ಬೆಂಗಳೂರು: ನಗರದ ಡಾಲ್ಫಿನ್ ಅಕ್ವಾಟಿಕ್ಸ್‌ನ ಅಲಿಸಾ ಸ್ವೀಡಲ್ ರೇಗೊ ಮತ್ತು ಮತ್ಸ್ಯ ಐಎನ್‌ಸಿಯ ಶರಣ್ ಶ್ರೀಧರ, ಬುಧವಾರ ಕೊನೆಗೊಂಡ ರಾಜ್ಯ ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನ ಬಾಲಕಿಯರ ಮತ್ತು ಬಾಲಕರ ವಿಭಾಗದಲ್ಲಿ ಚಿನ್ನದ ಸಂಭ್ರಮದಲ್ಲಿ ಮಿಂದರು.

ಪಡುಕೋಣೆ–ದ್ರಾವಿಡ್ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆದ ಕೂಟದ ಬಾಲಕಿಯರ ಮತ್ತು ಬಾಲಕರ ಗುಂಪು–4ರ ಬಿ ವಿಭಾಗದ ತಲಾ ಐದು ಸ್ಪರ್ಧೆಗಳಲ್ಲಿ ಅಲಿಸಾ ಮತ್ತು ಶರಣ್ ಮೊದಲಿಗರಾದರು. ಅಖಿಲ ಭಾರತ ಆಹ್ವಾನಿತ ಕೂಟದ ಪುರುಷರ ವಿಭಾಗದಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್‌ನ ಆದಿತ್ಯ ಡಿ, ಪೂಜಾ ಈಜುಕೇಂದ್ರದ ಅನೀಶ್ ಗೌಡ ಮತ್ತು ಮಹಿಳೆಯರ ವಿಭಾಗದಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್‌ನ ನೀನಾ ವೆಂಕಟೇಶ್ ಚಿನ್ನ ಗೆದ್ದರು.

ಫಲಿತಾಂಶಗಳು: ಸಬ್‌ಜೂನಿಯರ್ ಬಾಲಕರ ಗುಂಪು–4 ಬಿ 100 ಮೀಟರ್ಸ್ ಫ್ರೀಸ್ಟೈಲ್: ಶರಣ್ ಶ್ರೀಧರ (ಮತ್ಸ್ಯ ಐಎನ್‌ಸಿ)–1. ಕಾಲ: 1:12.94 ನಿ, ಅಥರ್ವ ಪಾಲ್ ಸಿಂಗ್ (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)–2, ಶೌರ್ಯ ಎಸ್.ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)–3; 50 ಮೀ ಬ್ಯಾಕ್‌ಸ್ಟ್ರೋಕ್: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 37.78 ಸೆ, ಅಥರ್ವ ಪಾಲ್ (ಗೋಲ್ಡನ್)–2, ಅದ್ವೈತ ವಿ.ಎಂ (ಬಸವನಗುಡಿ ಈಜು ಕೇಂದ್ರ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಅಥರ್ವ ಪಾಲ್ ಸಿಂಗ್ (ಗೋಲ್ಡನ್)–1. ಕಾಲ: 45.89 ಸೆ, ರೆಯಾಂಶ್ ಕಾಂತಿ (ಬಸವನಗುಡಿ)–2, ಶರಣ್ ಶ್ರೀಧರ (ಮತ್ಸ್ಯ)–3; 50 ಮೀ ಬಟರ್‌ಫ್ಲೈ: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 35.85 ಸೆ, ಅಥರ್ವ ಪಾಲ್ ಸಿಂಗ್ (ಗೋಲ್ಡನ್)–2, ದರ್ಶವೀರ್ ಸಿಂಗ್ (ಡಾಲ್ಫಿನ್)–3; 200 ಮೀ ಮೆಡ್ಲೆ: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 3:00.59 ನಿ, ಅಥರ್ವ ಪಾಲ್ ಸಿಂಗ್ (ಗೋಲ್ಡನ್)–2, ದರ್ಶವೀರ್ ಸಿಂಗ್ (ಡಾಲ್ಫಿನ್)–3; 50 ಮೀ ಫ್ರೀಸ್ಟೈಲ್: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 33.46 ಸೆ, ಸಮರ್ಥ ಗೌಡ (ಸ್ವಿಮ್ ಲೈಫ್ ಅಕಾಡೆಮಿ)–2, ಶೌರ್ಯ ಶೆಟ್ಟಿ (ಡಾಲ್ಫಿನ್)–3. ಬಾಲಕಿಯರ 100 ಮೀ ಫ್ರೀಸ್ಟೈಲ್: ಅಲಿಸಾ ಸ್ವೀಡಲ್ ರೇಗೊ (ಡಾಲ್ಫಿನ್)–1. ಕಾಲ: 1:14.94 ನಿ, ಮೀರಾ ನಂಬಿಯಾರ್ (ಡಾಲ್ಫಿನ್)–2, ತ್ರಿಶಾ ಸಿಂಧು (ಡಿಕೆವಿ ಅಕ್ವಾಟಿಕ್ ಕೇಂದ್ರ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಅಲಿಸಾ ಸ್ವೀಡನ್ ರೇಗೊ (ಡಾಲ್ಫಿನ್)–1. ಕಾಲ: 43.19 ಸೆ, ಮಿನರ್ವ (ಅತಿಥಿ–ಚಾಂಪಿಯನ್ ಈಜುಕೇಂದ್ರ)–2, ಶೆಲಿನ್ ಸುನಿಲ್ (ಡಾಲ್ಫಿನ್)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಧ್ವಜ ಜೈನ್ (ಅತಿಥಿ–ಚಾಂಪಿಯನ್)–1. ಕಾಲ: 46.40 ಸೆ, ಶೆಲಿನ್ ಸುನಿಲ್ (ಡಾಲ್ಫಿನ್)–2, ಶಿವಾನಿ ಶೆಣೈ (ಬಸವನಗುಡಿ)–3; 50 ಮೀ ಬಟರ್‌ಫ್ಲೈ: ಅಲಿಸಾ ಸ್ವೀಡಲ್ ರೇಗೊ (ಡಾಲ್ಫಿನ್)–1. ಕಾಲ: 37.97 ಸೆ, ಅಮೋಲಿ ನೇರಳೇಕರ್ (ಅತಿಥಿ–ಚಾಂಪಿಯನ್)–2, ಪವನ್ ಡಿ (ಪೂಜಾ)–3; 200 ಮೀ ಮೆಡ್ಲೆ: ಅಲಿಸಾ ಸ್ವೀಡಲ್ ರೇಗೊ (ಡಾಲ್ಫಿನ್)–1. ಕಾಲ: 3:16.85 ನಿ, ಸೆಲಿನ್ ಸುನಿಲ್ (ಡಾಲ್ಫಿನ್)–2, ಧ್ವಜ ಜೈನ್ (ಅತಿಥಿ–ಚಾಂಪಿಯನ್)–3; 50 ಮೀ ಫ್ರೀಸ್ಟೈಲ್: ಅಲಿಸಾ ಸ್ವೀಡಲ್ ರೇಗೊ (ಡಾಲ್ಫಿನ್)–1. ಕಾಲ: 34.2 ಸೆ, ತ್ರಿಶಾ ಸಿಂಧು (ಡಿಕೆವಿ)–2, ಮೀರಾ ನಂಬಿಯಾರ್ (ಡಾಲ್ಫಿನ್)–3.

ಅಖಿಲ ಭಾರತ ಮುಕ್ತ ಕೂಟ (ಕರ್ನಾಟಕದ ಫಲಿತಾಂಶ ಮಾತ್ರ): ಪುರುಷರ 200 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ ಎಸ್ (ಡಾಲ್ಫಿನ್)–2, ವಿದಿತ್ ಶಂಕರ್ (ಡಾಲ್ಫಿನ್)–3; 50 ಮೀ ಫ್ರೀಸ್ಟೈಲ್: ಆದಿತ್ಯ ಡಿ (ಡಾಲ್ಫಿನ್)–1. ಕಾಲ: 23.68 ಸೆ, ವಿಕಾಸ್ ಪಿ (ಡಾಲ್ಫಿನ್)–3; 1500 ಮೀ ಫ್ರೀಸ್ಟೈಲ್: ಅನೀಶ್ ಎಸ್.ಗೌಡ (ಪೂಜಾ)–1. ಕಾಲ: 16:29.83 ನಿ, ಪವನ್ (ಪೂಜಾ)–3; 50 ಮೀ ಬಟರ್‌ಫ್ಲೈ: ಆದಿತ್ಯ ಡಿ (ಡಾಲ್ಫಿನ್)–1. ಕಾಲ: 25.6 ಸೆ. ಮಹಿಳೆಯರ 1500 ಮೀ ಫ್ರೀಸ್ಟೈಲ್: ಶಿರೀನ್ (ಪೂಜಾ ಈಜುಕೇಂದ್ರ)–2, ಖುತಿಕಾ ಬಿ.ಎಂ (ಪೂಜಾ)–3; 200 ಮೀ ಬ್ರೆಸ್ಟ್‌ಸ್ಟ್ರೋಕ್: ಎಸ್.ಲಕ್ಷ್ಯ (ಪೂಜಾ)–3; 50 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಡಾಲ್ಫಿನ್)–1. ಕಾಲ: 28.75 ಸೆ, ದಿವ್ಯಾ (ಡಾಲ್ಫಿನ್)–2.

ಸೈಕ್ಲಿಂಗ್: ರಾಜ್ಯಕ್ಕೆ 16 ಪದಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕದ ಸೈಕ್ಲಿಸ್ಟ್‌ಗಳು, ಹೈದರಾಬಾದ್‌ನಲ್ಲಿ ಬುಧವಾರ ಮುಕ್ತಾಯವಾದ 72ನೇ ಸೀನಿಯರ್, 49ನೇ ಜೂನಿಯರ್ ಮತ್ತು 35ನೇ ಸಬ್ ಜೂನಿಯರ್ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ನಾಲ್ಕು ಚಿನ್ನ, ಎರಡು ಬೆಳ್ಳಿ ಹಾಗೂ ಹತ್ತು ಕಂಚಿನ ಪದಕಗಳನ್ನು ಜಯಿಸಿದ್ದಾರೆ.

ಕೊನೆಯ ದಿನ ನಡೆದ ಜೂನಿಯರ್ ಬಾಲಕಿಯರ 4 ಕಿ.ಮೀ. ತಂಡ ಪರ್ಸೂಟ್ ವಿಭಾಗದಲ್ಲಿ ಕರ್ನಾಟಕ ಚಿನ್ನದ ಪದಕ ಜಯಿಸಿತು. ಬೆಂಗಳೂರು ಜಿಲ್ಲೆಯ ಕೀರ್ತಿ ರಂಗಸ್ವಾಮಿ, ಬಾಗಲಕೋಟೆ ಜಿಲ್ಲೆಯ ಚೈತ್ರಾ ಬೋರ್ಜಿ, ಭಾಗ್ಯಶ್ರೀ ಮಠಪತಿ ಮತ್ತು ವಿಜಯಪುರ ಜಿಲ್ಲೆಯ ಅಂಕಿತಾ ರಾಠೋಡ್ ಅವರನ್ನು ಒಳಗೊಂಡ ತಂಡ ಐದು ನಿಮಿಷ 45.053 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಈ ಸಾಧನೆ ಮಾಡಿತು.

ಬಾಗಲಕೋಟೆ ಜಿಲ್ಲೆಯ ದಾನಮ್ಮ ಚಿಚಖಂಡಿ, ವಿಜಯಪುರ ಕ್ರೀಡಾನಿಲಯದ ಸೌಮ್ಯಾ ಅಂತಾಪುರ, ಕಾವೇರಿ ಮುರನಾಳ ಮತ್ತು ಕೀರ್ತಿ ರಂಗಸ್ವಾಮಿ ಅವರನ್ನು ಒಳಗೊಂಡ ರಾಜ್ಯ ಮಹಿಳಾ ತಂಡ 4 ಕಿ.ಮೀ. ಪರ್ಸೂಟ್ ವಿಭಾಗದಲ್ಲಿ ಐದು ನಿಮಿಷ 44.937 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಕಂಚಿನ ಪದಕ ಜಯಿಸಿತು. ಸಬ್ ಜೂನಿಯರ್ ವಿಭಾಗದಲ್ಲಿ ಕರ್ನಾಟಕ ರನ್ನರ್ಸ್ ಅಪ್ ಸ್ಥಾನ ಗಳಿಸಿತು.

ಟೆನಿಸ್: ಸೆಮಿಗೆ ದೇವ್

ದೇವ್ ಶಿವಶಂಕರ್ ಆಟದ ವೈಖರಿ

ಬೆಂಗಳೂರು: ಅಮೋಘ ಆಟವಾಡಿದ ದೇವ್ ಶಿವಶಂಕರ್ ಅವರು ಅಗ್ರಶ್ರೇಯಾಂಕದ ಜೇಸನ್ ಡೇವಿಡ್‌ಗೆ ಸೋಲುಣಿಸಿ ಕೆಎಸ್‌ಎಲ್‌ಟಿ–ಎಐಟಿಎ 16 ವರ್ಷದೊಳಗಿವರ ಟ್ಯಾಲೆಂಟ್ ಸಿರೀಸ್ ಟೆನಿಸ್ ಟೂರ್ನಿ ಸೆಮಿಫೈನಲ್ ಪ್ರವೇಶಿಸಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಬುಧವಾರ ನಡೆದ ಬಾಲಕರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ದೇವ್ 6–4, 6–1ರಿಂದ ಜೇಸನ್ ಅವರನ್ನು ಮಣಿಸಿದರು. ದೇವ್ ಅರ್ಹತಾ ಸುತ್ತಿನಿಂದ ಗೆದ್ದು ಮುಖ್ಯ ಸುತ್ತು ಪ್ರವೇಶಿಸಿದ್ದರು.

ಬಾಲಕರ ವಿಭಾಗದ ಎಂಟ ರಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಶ್ರೀನಿಕೇತ್ ಕಣ್ಣನ್ 7-6 , 6-1ರಿಂದ ಸೂರಜ್ ವಿಜಯಕುಮಾರ್ ವಿರುದ್ಧ, ಕ್ರಿಶ್ ಅಜಯ್ ತ್ಯಾಗಿ 6–1, 6–0ರಿಂದ ಶ್ರೀಕರ ಧೋನಿ ಎದುರು, ಸೆಹಜ್ ಸಿಂಗ್ ಪವಾರ್ 6-0, 6-0ರಿಂದ ಅಮನ್ ಪವಾರ್ ವಿರುದ್ಧ ಗೆದ್ದು ನಾಲ್ಕರ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅಗ್ರಶ್ರೇಯಾಂಕದ ಗಗನಾ ಮೋಹನ್ ಕುಮಾರ್ 7-5, 5-7, 6-1ರಿಂದ ಹೃದಯೇಶಿ ಪೈ ಎದುರು, ವನ್ಯಾ ಶ್ರೀವಾಸ್ತವ್ 6-3, 6-1ರಿಂದ ಮಹಿಕಾ ಸುರವರಂ ಎದುರು, ಅನ್ವಿ ಪುನಗಂಟಿ 3-6, 6-1, 6-4ರಿಂದ ಸುಶ್ಮಿತಾ ರವಿ ಎದುರು ಜಯಿಸಿ ಸೆಮಿಫೈನಲ್ ತಲುಪಿದರು.

ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ವಿರಾಟ್



ವಿರಾಟ್ ಕೊಹ್ಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಐಸಿಸಿ ಏಕದಿನ ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಐಸಿಸಿಯು ಬುಧವಾರ ರ‍್ಯಾಂಕಿಂಗ್ ಪಟ್ಟಿ ಪ್ರಕಟಿಸಿದ್ದು, ಜಸ್‌ಪ್ರೀತ್ ಬೂಮ್ರಾ ಬೌಲರ್‌ಗಳ ನಾಲ್ಕನೇ ಸ್ಥಾನಕ್ಕೆ ಜಾರಿದ್ದಾರೆ. ಇಂಗ್ಲೆಂಡ್ ವಿರುದ್ಧದ ಸೀಮಿತ ಓವರ್‌ಗಳ ಸರಣಿಗೆ ವಿಶ್ರಾಂತಿ ಪಡೆದಿದ್ದ ಬೂಮ್ರಾ, ಒಂದು ಕ್ರಮಾಂಕ ಕುಸಿತ ಕಂಡಿದ್ದು ಸದ್ಯ 690 ಪಾಯಿಂಟ್ಸ್ ಹೊಂದಿದ್ದಾರೆ.

ಇಂಗ್ಲೆಂಡ್ ಎದುರಿನ ಮೊದಲ ಹಾಗೂ ಎರಡನೇ ಏಕದಿನ ಪಂದ್ಯಗಳಲ್ಲಿ ಕ್ರಮವಾಗಿ 56 ಹಾಗೂ 66 ರನ್ ಕಲೆಹಾಕಿದ ಕೊಹ್ಲಿ ಬಳಿ ಸದ್ಯ 870 ರೇಟಿಂಗ್ ಪಾಯಿಂಟ್‌ಗಳಿವೆ.

ಭಾರತದ ಸೀಮಿತ ಓವರ್‌ಗಳ ಪಂದ್ಯಗಳ ಮಾದರಿಯಲ್ಲಿ ಉಪನಾಯಕರಾಗಿರುವ ರೋಹಿತ್ ಶರ್ಮಾ, ಬ್ಯಾಟ್ಸ್‌ಮನ್‌ಗಳ ವಿಭಾಗದಲ್ಲಿ ಮೂರನೇ ಕ್ರಮಾಂಕದಲ್ಲಿದ್ದು, ಕೆ.ಎಲ್.ರಾಹುಲ್ 27ನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಮೂರನೇ ಪಂದ್ಯದಲ್ಲಿ 42ಕ್ಕೆ ಮೂರು ವಿಕೆಟ್ ಗಳಿಸಿದ್ದ ವೇಗಿ ಭುವನೇಶ್ವರ ಕುಮಾರ್ ಒಂಬತ್ತು ಸ್ಥಾನಗಳ ಬಡ್ತಿ ಪಡೆದಿದ್ದು, 11ನೇ ಕ್ರಮಾಂಕದಲ್ಲಿದ್ದಾರೆ. 93ನೇ ಕ್ರಮಾಂಕದಲ್ಲಿದ್ದ ಶಾರ್ದೂಲ್ ಠಾಕೂರ್ 80ನೇ ಸ್ಥಾನಕ್ಕೇರಿದ್ದಾರೆ.

30 ಕ್ರೀಡಾಪಟುಗಳಿಗೆ ಕೋವಿಡ್

ನವದೆಹಲಿ (ಪಿಟಿಐ): ಪಟಿಯಾದ ರಾಷ್ಟ್ರೀಯ ಕ್ರೀಡಾ ಸಂಸ್ಥೆ(ಎನ್‌ಐಎಸ್) ಹಾಗೂ ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ 30 ಕ್ರೀಡಾಪುಟಗಳು ಮತ್ತು ಕೆಲ ನೆರವು ಸಿಬ್ಬಂದಿಯಲ್ಲಿ ಕೋವಿಡ್–19 ಇರುವುದು ದೃಢಪಟ್ಟಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಪ್ರಕಟಣೆಯಲ್ಲಿ ತಿಳಿಸಿದೆ.

ಎನ್‌ಐಎಸ್‌ನಲ್ಲಿ ವಿವಿಧ ವಿಭಾಗಗಳಲ್ಲಿ ತರಬೇತಿ ನಡೆಯುತ್ತಿದೆ. ಈ ಪೈಕಿ 741 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು ಎಂದು ತಿಳಿಸಿರುವ ಸಾಯ್ ಸೋಂಕು ದೃಢಪಟ್ಟವರಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದವರು ಯಾರೂ ಇಲ್ಲ ಎಂದು ಸ್ಪಷ್ಟಪಡಿಸಿದೆ. ಪುರುಷರ ಬಾಕ್ಸಿಂಗ್ ತಂಡದ ಕೋಚ್ ಸಿ.ಎ.ಕುಟ್ಟಪ್ಪ, ಶಾಟ್‌ಪಟ್ ಕೋಚ್ ಮೊಹಿಂದರ್ ಸಿಂಗ್ ಧಿಲಾನ್, ಬಾಕ್ಸರ್ ದೀಪಕ್ ಕುಮಾರ್ ಸೋಂಕಿತರಲ್ಲಿ ಪ್ರಮುಖರು.

ಸಂಕ್ಷಿಪ್ತ ಸುದ್ದಿ

ಅನಿರ್ಬನ್ ದಾಖಲೆ ಸರಿಗಟ್ಟಲಿರುವ ಅದಿತಿ

ಅದಿತಿ ಅಶೋಕ್

ರಾಂಚೊ ಮಿರಾಜ್, ಅಮೆರಿಕ (ಪಿಟಿಐ): ಕರ್ನಾಟಕದ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರು ಗುರುವಾರ ಪ್ರಮುಖ ಮೈಲುಗಲ್ಲೊಂದನ್ನು ತಲುಪಲಿದ್ದಾರೆ.

ಇಲ್ಲಿ ನಡೆಯುವ ಎಎನ್‌ಎ ಇನ್‌ಸ್ಪಿರೇಷನ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಮೂಲಕ ಭಾರತದ ಪದ ಅತಿ ಹೆಚ್ಚು ಮೇಜರ್ ಟೂರ್ನಿಗಳಲ್ಲಿ ಪಾಲ್ಗೊಂಡ ಅನಿರ್ಬನ್ ಲಾಹಿರಿ (16 ಟೂರ್ನಿ) ದಾಖಲೆಯನ್ನು ಸರಿಗಟ್ಟಲಿದ್ದಾರೆ.

ಮೂರು ದಿನಗಳ ಹಿಂದಷ್ಟೇ (ಮಾರ್ಚ್ 29) ತಮ್ಮ 23ನೇ ಜನ್ಮದಿನವನ್ನು ಆಚರಿಸಿಕೊಂಡಿರುವ ಅದಿತಿ, ಮಹಿಳಾ ಪಿಜಿಎ ಟೂರ್‌ನಲ್ಲಿ ಐದನೇ ವರ್ಷ ಕಣಕ್ಕಿಳಿಯುತ್ತಿದ್ದಾರೆ.

ಐಎನ್‌ಆರ್‌ಸಿ: 10 ಮಹಿಳೆಯರ ಸ್ಪರ್ಧೆ

ಬೆಂಗಳೂರು (ಪಿಟಿಐ): ಚೆನ್ನೈನಲ್ಲಿ ಮುಂದಿನ ತಿಂಗಳು ನಡೆಯಲಿರುವ ಎಫ್‌ಎಮ್‌ಎಸ್‌ಸಿಐ ಭಾರತೀಯ ರಾಷ್ಟ್ರೀಯ ರ‍್ಯಾಲಿ ಚಾಂಪಿಯನ್‌ಷಿಪ್‌ಗೆ (ಐಎನ್‌ಆರ್‌ಸಿ) 10 ಮಂದಿ ಮಹಿಳೆಯರು ಸ್ಪರ್ಧಿಸಲಿದ್ದಾರೆ. ಐಎನ್‌ಆರ್‌ಸಿ ಮೋಟರ್ ಸ್ಪೋರ್ಟ್ಸ್‌ನಲ್ಲಿ ಇದೇ ಮೊದಲ ಬಾರಿ ಇಷ್ಟು ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ.